# ಅಧ್ಯಯನ 4 Study IV

# ಪೂರ್ವ ನೇಮಿತ ನೂತನ ಸೃಷ್ಟಿ

## THE NEW CREATION PREDESTINATED

**ಆಯ್ಕೆಯ ಸಾಮಾನ್ಯ ದೃಷ್ಟಿಕೋನ – ಸರಿಯಾದ ಆಲೋಚನೆ – ಆಯ್ಕೆಯಾಗದವರಿಗೆ ಯಾವ ಹಾನಿಯೂ ಇಲ್ಲ – ಆಯ್ಕೆಯಾದವರು ಮತ್ತು ವಾಸ್ತವಿಕವಾಗಿ ಆಯ್ಕೆಯಾದವರು ಇವರ ನಡುವಣ ವ್ಯತ್ಯಾಸ – "ಮರಣಕರವಾದ ಪಾಪ ಉಂಟು" – ಜೀವಸ್ವರೂಪನಾದ ದೇವರ ಕೈಯಲ್ಲಿ ಬೀಳುವ ಭಯಾನಕ ಸಂಗತಿ – ಮಹಾ ಸಮೂಹ– ಕುರಿಯ ರಕ್ತದಲ್ಲಿ ಅವರ ಉಡುಪುಗಳು ಶುಭ್ರಗೊಂಡು ಬೆಳ್ಳಗಾಯಿತು – ಆಯ್ಕೆಯಾದ ದ್ರಾಕ್ಷೆಯ ಬಳ್ಳಿ ಮತ್ತು ಅದರ ಕೊಂಬೆಗಳು – ಹಿಂದಿನ ಹಲವಾರು ಆಯ್ಕೆಗಳು – ಇವುಗಳಲ್ಲಿ ಯಾವುದೂ ಶಾಶ್ವತವಲ್ಲ – ಯಾಕೋಬ ಮತ್ತು ಏಸಾವನ ತರಹದವರು – "ಯಾಕೋಬನೇ, ನಾನು ನಿನ್ನನ್ನು ಪ್ರೀತಿಸಿದೆನು" ಏಸಾವನೇ, ನಾನು ನಿನ್ನನ್ನು ದ್ವೇಷಿಸಿದೆನು" – ಫರೋಹನು – "ಇದೇ ಉದ್ಧೇಶಕ್ಕಾಗಿ ನಾನು ನಿನ್ನನ್ನು ಎಬ್ಬಿಸಿದೆನು"– ದೇವರು ತನ್ನ ಚಿತ್ತವನ್ನು ಯಾರ ಮೇಲೆಯೂ ಬಲವಂತಗೊಳಿಸುವುದಿಲ್ಲ – ಫರೋಹನು ಸಹಾ ಈ ನಿಯಮಕ್ಕೆ ಹೊರತಾದವನಲ್ಲ – ದೇವರು ಫರೋಹನ ಹೃದಯವನ್ನು ಕಠಿಣಗೊಳಿಸಿದನು – ಇಸ್ರಾಯೇಲ್ಯ ಜನಾಂಗವು ಆಯ್ಕೆಗೊಂಡಿತು – ಹಾಗಾದರೆ, ಎಲ್ಲಾ ವಿಧದಲ್ಲಿ ಯೆಹೂದ್ಯರಿಗಾಗುವ ಲಾಭವೇನು? – ಆಯ್ಕೆಯಾದವರು "ನೂತನ ಸೃಷ್ಟಿ"ಯಾಗಿದ್ದಾರೆ – ಕೃಪೆಯ ಮಹತ್ವ – "ರಾಜನ ಸ್ವಂತ' ಎಂಬುದರ ನಿದರ್ಶನ – "ಆತನ ಮಗನ ಸ್ವರೂಪ" ಹೊಂದುವುದಕ್ಕಾಗಿ ಪೂರ್ವ ನಿರ್ಧಾರ – ಆತನ ಉದ್ಧೇಶಕ್ಕನುಸಾರವಾಗಿ ಕರೆಯಲ್ಪಟ್ಟವರು – "ಕರೆಯಲ್ಪಟ್ಟವರ' ಅರ್ಹತೆ ಮತ್ತು ಗುಣಲಕ್ಷಣಗಳು – "ದೇವರು ನಮ್ಮೊಂದಿಗಿದ್ದರೆ" – ಅಪೋಸ್ತಲನ ವಾದಗಳ ಭಾವಾರ್ಥಗಳು – ನಮ್ಮ ಕರೆ ಮತ್ತು ಆಯ್ಕೆಗಳನ್ನು ಖಚಿತಪಡಿಸಿಕೊಳ್ಳುವುದು – ಓಟದ ಪಥ – ನಾನು ಗುರುತಿನ ಮೇಲೆ ಒತ್ತುತ್ತೇನೆ – "ದೇವರಿಂದ ನೀವು ಆಯ್ಕೆಗೊಂಡದ್ದನ್ನು ತಿಳುಕೊಳ್ಳುವುದು"**

ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವಂತೆ ಆಯ್ಕೆಯ ಸಿದ್ಧಾಂತವು ಬಹಳಷ್ಟು ಪಕ್ಷಪಾತ ಮತ್ತು ಅಸಮಾನತೆಯಿಂದ ಕೂಡಿದ್ದಾಗಿದ್ದು ಬಹು ಅಪ್ರಿಯವಾಗಿದೆ. ಆದರೆ ಈ ಬಗ್ಗೆ ಇರುವ ದೇವರ ವಾಕ್ಯವನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವುದೇ ಇದಕ್ಕೆ ಕಾರಣ. ನಾವು ಈಗ ಮುಂದಿಡಲು ಹವಣಿಸುತ್ತಿರುವ ದೇವರ ವಾಕ್ಯದಲ್ಲಿರುವ ಆಯ್ಕೆಯನ್ನು ಎಲ್ಲರೂ ಸತ್ಯವೇದದ ಒಂದು ಅತ್ಯಂತ ಭವ್ಯವಾದ ಸಿದ್ಧಾಂತವೆಂದು ಒಪ್ಪಿಕೊಳ್ಳಲೇಬೇಕು ಇದು ಕೃಪೆಯ ಮೇಲೆ ಮಾತ್ರ ಆಧಾರಗೊಳ್ಳದೆ ನ್ಯಾಯ ಮತ್ತು ಸಮಾನತೆಗಳ ಮೇಲೆಯೂ ಆಧಾರಗೊಂಡಿದ್ದು ಸಮಗ್ರವಾಗಿ ನಿಷ್ಪಕ್ಷಪಾತದಿಂದ ಕೂಡಿದ್ದಾಗಿದೆ. ಆಯ್ಕೆಯ ಬಗ್ಗೆ ತಪ್ಪಾದ ದೃಷ್ಟಿಕೋನವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ದೇವರು ಇಡೀ ಮಾನವ ಜನಾಂಗವನ್ನು ನಿತ್ಯಯಾತನೆಗೆ ಗುರಿಪಡಿಸಿ ಒಂದು "ಚಿಕ್ಕ ಹಿಂಡನ್ನು' ಮಾತ್ರವೇ ಉಳಿಸಲು ಆಯ್ಕೆಮಾಡಿ ಉಳಿದವರನ್ನು ದೈವಜ್ಞಾನವು ಸೃಷ್ಟಿಗೆ ಮೊದಲೇ ನಿರ್ಧರಿಸಿದ್ದಂತೆ ಹೇಳಲಾಗದ ಭಯಂಕರ ಹಿಂಸೆಗೆ ಯಾತನೆಗೆ ತುತ್ತಾಗಲು ಅನುಮತಿ ನೀಡಿದ್ದಾನೆ ಎಂಬ ಅಪಾರ್ಥವಾಗಿದೆ. ಪ್ರಸಕ್ತ ವಿದ್ಯಮಾನದಲ್ಲಿ ಚಾಲ್ತಿಯಲ್ಲಿರುವ ಈ ತಪ್ಪು ದೃಷ್ಟಿಕೋನದ ಅತಿ ಸಮರ್ಥವಾದ ಹೇಳಿಕೆಯಾದ ವೆಸ್ಟ್‌ಮಿನಿಸ್ಟರ್ ತಪ್ಪೊಪ್ಪಿಗೆಯು ಈ "ಆಯ್ಕೆಗೊಂಡ ಚಿಕ್ಕ ಹಿಂಡನ್ನು' ಅವರ ಅರ್ಹತೆ ಅಥವಾ ಚಾಲ್ತಿಯಲ್ಲಿರುವ ಯೋಗ್ಯತೆಯ ಆಧಾರದ ಮೇರೆಗೆ ರಕ್ಷಣೆಹೊಂದಿದವರೆಂದು ಪರಿಗಣಿಸಲಾಗದು, ಆದರೆ ಅದು ಕೇವಲ ದೇವರೊಬ್ಬನದೇ ಆದ ಆತನ ಪರಮಾಧಿಕಾರದ ಚಿತ್ತವಾಗಿದೆ ಎಂದು ಸಾರಿ ತಿಳಿಸುತ್ತದೆ.

ಆಯ್ಕೆಯ ಬಗ್ಗೆ ಸತ್ಯವೇದವು ಎಲ್ಲೆಡೆಯಲ್ಲಿ ಬೆಂಬಲಿಸುವುದೆಂದು ನಾವು ತೋರಿಸಲಿರುವ ದೃಷ್ಟಿಕೋನವು ಇದಕ್ಕೆ ಭಿನ್ನವಾಗಿದೆ. ಯಾವುವೆಂದರೆ ಮರಣವು (ಜೀವವು ನಿತ್ಯಯಾತನೆಯಲ್ಲಿರುವುದಲ್ಲ) ನಮ್ಮ ಜನಾಂಗದ ಮೇಲೆ ವಿಧಿಸಲ್ಪಟ್ಟಿರುವ ಶಿಕ್ಷೆಯಾಗಿದೆ. ಇದು ಒಬ್ಬನ ಪಾಪದ ಕಾರಣ ಜನಾಂಗದ ಎಲ್ಲಾ ಸದಸ್ಯರನ್ನೂ ಒಳಪಡಿಸಿದೆ; ಕ್ರಿಸ್ತನು ತನ್ನನ್ನು ಸಮರ್ಪಿಸುವುದರ ಮೂಲಕ ಇಡೀ ಲೋಕದ ವಿಮೋಚನೆಯಲ್ಲಿ ದೇವರ ಕೃಪೆಯು ಪ್ರಕಟಗೊಂಡಿದೆ. ಇದು ನಮ್ಮ (ಸಭೆಯ) ಪಾಪಗಳ ನಿವೃತ್ತಿಗಾಗಿ; ನಮ್ಮ ಪಾಪಗಳು ಮಾತ್ರವಲ್ಲ, ಇಡೀ ಲೋಕದ ಪಾಪಕ್ಕಾಗಿ (1 ಯೋಹಾನ 2:2). ದೇವರು ತಾನು ಪಡೆದ ಒಬ್ಬನೇ ಮಗನು ತನ್ನ ಪ್ರಾಣವನ್ನೇ ಕೊಟ್ಟು ಈ ಜನಾಂಗವನ್ನು ವಿಮೋಚಿಸುವ ವಿಶೇಷಾಧಿಕಾರ ಹೊಂದಿಕೊಳ್ಳಬೇಕೆಂದು ಅಯ್ಕೆಮಾಡಿದನು. ಇದರ ಬಹುಮಾನವಾಗಿ ಆತನು ದೈವಿಕ ಸ್ವಭಾವಕ್ಕೆ ಏರಿಸಲ್ಪಡುವನು (ಸಂಪುಟ 5 ಅಧ್ಯಾಯ 5) ಮತ್ತು ಅಂತಿಮವಾಗಿ ಈ ಲೋಕದ ಎಲ್ಲಾ ಕುಟುಂಬಗಳೂ ಮರಣವೆಂಬ ನಿದ್ರೆಯಿಂದ ಎಚ್ಚೆತ್ತುಕೊಂಡು ಆಶೀರ್ವಾದ ಹೊಂದುವರು ಮತ್ತು ಸತ್ಯದ ಜ್ಞಾನಕ್ಕೆ ಸೇರಿಸಲ್ಪಡುವರು. ಈ ಮೂಲಕ ಇಚ್ಚೆಯುಳ್ಳ ವಿಧೇಯರು ಮಾನವ ಜೀವನದ ಪರಿಪೂರ್ಣತೆಯನ್ನು ಪಡೆಯಲು ಸಹಾಯ ಮಾಡಲಾಗುವುದು. ಇದು ಏದೇನಿನ ಆಶೀರ್ವಾದಗಳು ಮತ್ತು ಆಜ್ಞೆಗಳಿಗಿಂತಲೂ ಹೆಚ್ಚಿನದಾಗಿದೆ.

ದೇವರು ತಾನು ಪಡೆದ ತನ್ನ ಒಬ್ಬನೇ ಮಗನ ಅಧೀನದಲ್ಲಿ ಅನೇಕ ಮಂದಿ ಭಕ್ತರುಗಳಿದ್ದು ಅವರು ನೂತನ ಸೃಷ್ಟಿಗಳಾಗಿ ಜೊತೆಭಾಧ್ಯಸ್ಥರಾಗಿ ಮಾನ, ಪ್ರಭಾವ, ಮಹಿಮೆ, ಮತ್ತು ನಿರ್ಲಯತ್ವಗಳನ್ನು ಪಡೆದು ಮಾನವಜನಾಂಗವು ಪೂರ್ವಸ್ಥಿತಿಯ ಆಶೀರ್ವಾದಗಳನ್ನು ಪಡೆಯುವ ಕಾರ್ಯದಲ್ಲಿ ನಿರತರಾಗಬೇಕೆಂದು ಅವರನ್ನು ಆಯ್ಕೆ ಮಾಡಿದ್ದಾನೆ. ಈ ಸುವಾರ್ತಾ ಯುಗವು ಈ ರೀತಿಯಾಗಿ ಲೋಕದ ಆಶೀರ್ವಾದ ಮತ್ತು ಪುನರ್‌ಸ್ಥಾಪನೆಯುನ್ನುಂಟು ಮಾಡುವ ಉದ್ಧೇಶವುಳ್ಳದ್ದಲ್ಲ, ಆದರೆ ಕೇವಲ ಈ ಲೋಕದಿಂದ ಒಂದು "ಚಿಕ್ಕ ಹಿಂಡನ್ನು' ಆಯ್ಕೆಮಾಡಿ, ಕರೆದು ಅವರು ನಂಬಿಕೆಯಲ್ಲಿ, ಪ್ರೀತಿಯಲ್ಲಿ ಮತ್ತು ವಿಧೇಯತೆಗಳಲ್ಲಿ ಒದಗುವ ಪರೀಕ್ಷೆಗಳನ್ನು

ಎದುರಿಸಲು ಶಕ್ತರಾಗುವಂತೆ ರಚಿಸುವುದೇ ಇದರ ಉದ್ದೇಶವಾಗಿದೆ. ಈ ರೀತಿಯಲ್ಲಿ ಅವರು ತಮ್ಮ ಕರೆ ಮತ್ತು ಆಯ್ಕೆಗಳನ್ನು ದೃಢಪಡಿಸಿಕೊಳ್ಳಬಹುದಾಗಿದೆ (2 ಪೇತ್ರ 1 : 10). ಆದರೆ, ಈ ರೀತಿಯಲ್ಲಿ ಚಿಕ್ಕಹಿಂಡನ್ನು ಕರೆಯುವುದು ಮತ್ತು ಆಯ್ಕೆಮಾಡುವುದು ಪ್ರಯಾಸವೆನಿಸದು. ಇದು ಆಯ್ಕೆಯಾಗದವರಿಗೆ ಯಾವ ಹಾನಿಯನ್ನೂ ಉಂಟುಮಾಡದು. ಯಾಕೆಂದರೆ ಅಂಥವರು ಕರೆಯಲ್ಪಡದೆ ದಾಟಿ ಹೋಗಿರುವ ಕಾರಣ ಮುಂದೆ ಯಾವುದೇ ಖಂಡನೆಗೂ ಒಳಗಾಗುವವರಲ್ಲ. ಅದರಂತೆ ಈ ದೇಶದ ಅಧಿಕಾರ ಸ್ಥಾನಗಳಿಗೆ ಚುನಾವಣೆ ನಡೆದಾಗ ಒಂದು ಸಮೂಹವು ಆಯ್ಕೆಗೊಂಡವರಲ್ಲಿ ಇಲ್ಲದೇ ಹೋದಲ್ಲಿ ಅವರು ಯಾವ ಹಾನಿಗೂ, ಖಂಡನೆಗೂ ಒಳಗಾಗುವುದಿಲ್ಲ. ಈ ಲೋಕದ ಚುನಾವಣೆಗಳ ಉದ್ದೇಶ ಜನರಿಗೆ ವಿವೇಕಯುತ ಕಾನೂನು ಮತ್ತು ಆಡಳಿತದ ಆಶೀರ್ವಾದವನ್ನು ಒದಗಿಸಿಕೊಡುವುದಾಗಿದೆ. ಅದೇ ರೀತಿಯಲ್ಲಿ ದೇವರು ಸಿದ್ಧಪಡಿಸಿರುವ ಆಶೀರ್ವಾದಗಳು ಆಯ್ಕೆಯಾಗದವರಿಗೆ ಯಾವ ಹಾನಿಯನ್ನೂ ಉಂಟುಮಾಡುವುದಿಲ್ಲ. ಇದು ಅವರೆಲ್ಲರ ಆಶೀರ್ವಾದವನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಕೂಡಿದೆ. ಇದರಲ್ಲಿ ಆಯ್ಕೆಗೊಂಡವರು ರಾಜವರ್ಗದ ನ್ಯಾಯಾಧಿಪತಿಗಳಾಗಿಯೂ, ಸಹಸ್ರ ವರ್ಷಗಳ ಧರ್ಮಯುಗದ ರಾಜರುಗಳೂ ಮತ್ತು ಯಾಜಕರುಗಳೂ ಆಗುತ್ತಾರೆ ಮತ್ತು ಇವರ ಆಳ್ವಿಕೆಯಲ್ಲಿ ಲೋಕದ ಎಲ್ಲಾ ಜನಾಂಗಗಳೂ ಆಶೀರ್ವಾದ ಹೊಂದುತ್ತವೆ.

ದೇವರ ವಾಕ್ಯದಲ್ಲಿ "ಆಯ್ಕೆಮಾಡಲ್ಪಟ್ಟವರು" "Elect" ಮತ್ತು "ವಾಸ್ತವಿಕವಾಗಿ ಅಯ್ಕೆಯಾದವರು "Very Elect" ಇವರ ಬಗ್ಗೆ ಅನೇಕ ಉಲ್ಲೇಖಗಳಿವೆ. "ಆಯ್ಕೆ' ಎಂಬ ಪದವು ಕೆಲವು ಷರತ್ತುಗಳ ಮೇರೆಗೆ ದೇವರೊಂದಿಗಿನ ಸಂಬಂಧಕ್ಕೆ ಬರುವ ಎಲ್ಲರಿಗೂ ಅನ್ವಯವಾಗುತ್ತದೆಂದು ಎರಡನೆಯ ಹೇಳಿಕೆಯು ನೀಡುವುದಾಗಿದೆ. ಇದರಲ್ಲಿ ಅವರಿಗೆ ಮಹಿಮಾ ಸಭೆಯ ಸದಸ್ಯರಾಗಿ ನಿರ್ಲಯತ್ವದ ನಿರೀಕ್ಷೆ ಅಥವಾ ಪ್ರತೀಕ್ಷೆ ಇದೆ. ಆದರೂ ಅವರು ಬಿದ್ದುಹೋಗಿ ಅಯ್ಕೆಗೊಂಡ ಸದಸ್ಯತ್ವವನ್ನು ಕಳೆದುಕೊಳ್ಳುವ ಸಾಧ್ಯತೆಗಳು ಸಹ ಇವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ನೂತನ ಸೃಷ್ಟಿಯ ಉನ್ನತಕರೆಯನ್ನು ಅಂಗೀಕರಿಸಿರುವ ಎಲ್ಲಾ ಸಮರ್ಪಣೆಗೊಂಡ ವರ್ಗದವರನ್ನೂ "ಆಯ್ಕೆ'ಯಾದವರೆಂದು ಎಣಿಕೆ ಮಾಡಲಾಗುವುದು. ಅವರ ಹೆಸರುಗಳು ಯಜ್ಞದಕುರಿಯ "ಜೀವಿತರ ಬಾಧ್ಯ ಪಟ್ಟಿ'ಯಲ್ಲಿ ನಮೂದಿಸಲ್ಪಡುವುದು ಮತ್ತು ಅವರಿಗೆ ಕಿರೀಟ (ಜಯಮಾಲೆ)ವೊಂದನ್ನು ತೊಡಿಸಲಾಗುವುದು; ಆದರೆ ಅಪ್ರಾಮಾಣಿಕತ್ವವು ಈ ಹೆಸರನ್ನು ಅಳಿಸಿಬಿಡುವುದಕ್ಕೂ ಮತ್ತು ಅವರ ಜಯಮಾಲೆಯನ್ನು (ಕಿರೀಟವನ್ನು) ತೆಗೆದು ಇತರರಿಗೆ ತೊಡಿಸಲು ಕಾರಣವಾಗುವುದು (ಪ್ರಕಟನೆ 3:5 ಮತ್ತು 11ನೇ ವಚನಗಳನ್ನು). ಆಗ ಅವರು ಅಯ್ಕೆಗೊಂಡ ಸಭೆಯಿಂದ ಬಿಡಲ್ಪಡುವರು. ಇದಕ್ಕೆ ವ್ಯತಿರಿಕ್ತವಾಗಿ "ವಾಸ್ತವಿಕವಾಗಿ ಆಯ್ಕೆ'ಗೊಂಡವರು (Very Elect) ದೇವರು ಕರೆದ ಆಶೀರ್ವಾದಗಳನ್ನು ಅಂತಿಮವಾಗಿ ಹೊಂದಿಕೊಳ್ಳುವ ಸುವಾರ್ತಾಯುಗದ ನಂಬಿಗಸ್ತರು. ಇವರು ತಮ್ಮ "ಕರೆ ಮತ್ತು ಆಯ್ಕೆ'ಯನ್ನು ತಾವು ಮರಣ ಪರ್ಯಂತ ಎಲ್ಲಾ ಷರತ್ತುಗಳಿಗೆ ಪ್ರಾಮಾಣಿಕರಾಗಿರುವುದರ ಮೂಲಕ ಖಚಿತ ಪಡಿಸಿಕೊಳ್ಳುವರು.

ತಮ್ಮ ಕರೆ ಮತ್ತು ಆಯ್ಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲರಾದ ಎರಡು ವರ್ಗದವರ ಬಗ್ಗೆ ದೇವರ ವಾಕ್ಯಗಳು ನಮ್ಮ ಗಮನ ಸೆಳೆಯುವುದಾಗಿದೆ. ಇದರಲ್ಲಿ ಒಂದು ವರ್ಗವು ಇವರು ಹೆಚ್ಚಿನ ಸಂಖ್ಯೆಯವರಲ್ಲ ಎಂದು ನಾವು ನಂಬಲು ಕಾರಣಗಳಿವೆ ಆಯ್ಕೆಗೊಂಡವರು ಬಹುಮಾನಗಳನ್ನು ಕಳಕೊಳ್ಳುವುದು ಮಾತ್ರವಲ್ಲದೆ, ಇದಕ್ಕಿಂತ ಹೆಚ್ಚಾಗಿ ಎರಡನೆಯ ಮರಣಕ್ಕೆ ಗುರಿಯಾಗುವರು. ಇದನ್ನು ಅಪೋಸ್ತಲನಾದ ಯೋಹಾನನು ಹೀಗೆ ವಿವರಿಸಿದ್ದಾನೆ, ಮರಣಕರವಾದ ಪಾಪವುಂಟು. ಈ ಪಾಪದ ವಿಷಯದಲ್ಲಿ ಬೇಡಿಕೊಳ್ಳಬೇಕೆಂದು ನಾನು ಹೇಳುವುದಿಲ್ಲ ನೀತಿಗೆ ವಿರುದ್ಧವಾದುದೆಲ್ಲಾ ಪಾಪವಾಗಿದೆ; ಆದರೂ ಮರಣಕರವಲ್ಲದ ಪಾಪವುಂಟು" (1ಯೋಹಾನ 5:16–17). ಮರಣಕರವಾದ ಪಾಪ ಮಾಡುವವರಿಗಾಗಿ ಬೇಡಿಕೊಳ್ಳುವುದಾಗಲೀ ಮತ್ತು ನಿರೀಕ್ಷಿಸುವುದಾಗಲೀ ವ್ಯರ್ಥ, ಪವಿತ್ರವಾಕ್ಯದಲ್ಲಿ ಈ ಪಾಪವು ದೇವರ ಪವಿತ್ರಾತ್ಮನ ವಿರುದ್ಧವಾದ ಪಾಪವೆಂದು ವಿವರಿಸಲಾಗಿದೆ. ಇದು ಬುದ್ಧಿಪೂರ್ವಕವಲ್ಲದೆ ಅಥವಾ ಅಜ್ಞಾನದಿಂದ ಮಾಡಿದ ಪಾಪವಲ್ಲ. ಏಕೆಂದರೆ ಇದರ ಪ್ರಾರಂಭದಲ್ಲಿಯೇ ಇದು ತಪ್ಪೆಂದು ತಿಳಿದಿದ್ದರೂ ತಮ್ಮ ಛಲದ ಕಾರಣ ಬೇಕೆಂತಲೇ ಮಾಡಿದುದಾಗಿದೆ. ಅನಂತರದಲ್ಲಿ ಇದು ಒಂದು ಭೀಭತ್ಸವಾದ ವಂಚನೆಯಾಗಿಬಿಡುತ್ತದೆ. ಅದೇ ಕಾರಣದಿಂದ ದೇವರು ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವುದಕ್ಕೆ ಅವರನ್ನು ಬಿಡುತ್ತಾನೆ. ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗುವರು (2 ಥೆಸ. 2: 10–12).

ಅಪೋಸ್ತಲರಾದ ಪೇತ್ರ ಮತ್ತು ಯೂದರು ಸಹ ಈ ವರ್ಗದ ಬಗ್ಗೆ ತಮ್ಮ ಪತ್ರಿಕೆಗಳಲ್ಲಿ ಇದೇ ಧಾಟಿಯಲ್ಲಿ ಹೇಳುವವರಾಗಿದ್ದಾರೆ. (ಯೂದ11–16, 2 ಪೇತ್ರ 2:10–22). ಇವರೆಲ್ಲರೂ ಒಂದು ಕಾಲದಲ್ಲಿ ಸಭೆಗೆ ಆಯ್ಕೆಗೊಂಡವರಾಗಿದ್ದವರು. (ಇವರಲ್ಲಿ ಯಾರೂ ಪ್ರಸ್ತುತದಲ್ಲಿ ಪರೀಕ್ಷೆ ಅಥವಾ ನಿರ್ಣಯಕ್ಕೆ ಒಳಪಡದ ಈ ಲೋಕಕ್ಕೆ ಸಂಬಂಧಿಸಿದವರಲ್ಲ. ಇವರ ಪರೀಕ್ಷೆಯು ಧರ್ಮಯುಗದ ರಾಜ್ಯದಲ್ಲಿ ಬರುವುದಾಗಿದೆ). ಇವರುಗಳು ಪವಿತ್ರಾತ್ಮನ, ಕರ್ತನ ಹೆಜ್ಜೆಜಾಡಿನಲ್ಲಿ ತಮ್ಮನ್ನು ಯಜ್ಞವನ್ನಾಗಿ ಸಮರ್ಪಿಸಿಕೊಳ್ಳುವ ದಾರಿಯಲ್ಲಿ ನಡೆಯುವುದರ ಬದಲು ತಮ್ಮ ದುರಾಶೆಗಳನ್ನನುಸರಿಸಿ ನಡೆಯುವವರಾಗಿದ್ದಾರೆ ಮತ್ತು ಲೌಕಿಕ ಸೌಕರ್ಯಗಳನ್ನು ಪಡೆಯುವ ಸಲುವಾಗಿ ಅವರ ಬಾಯಿಂದ ದೊಡ್ಡ ದೊಡ್ಡ ಮಾತುಗಳು ಬರುತ್ತವೆ. ಇವರು ಸ್ವಪ್ರಯೋಜನಕ್ಕಾಗಿ ಮುಖಸ್ತುತಿ ಮಾಡುತ್ತಾರೆ. ಅವರು ತಮ್ಮ ಸ್ವಂತ ಬಯಕೆಗಳನ್ನು ನೆರವೇರಿಸಲು ಮನುಷ್ಯರನ್ನು ಮೆಚ್ಚಿಸುವವರಾಗಿದ್ದು, ಮರಣ ಪರ್ಯಂತದ ಒಡಂಬಡಿಕೆಯಿಂದ ದೂರವುಳಿದಿದ್ದಾರೆ. (ಯೂದ:16). ಈ ವರ್ಗದ ಬಗ್ಗೆ ಪೇತ್ರನ ವಿವರಣೆಯು ಇನ್ನೂ

ಕೂಲಂಕುಷವಾಗಿವೆ. ಅವರು ಯೇಸುಕ್ರಿಸ್ತನ ಜ್ಞಾನದ ದೆಸೆಯಿಂದ ಲೋಕದ ಮಲಿನತ್ವಗಳಿಂದ ತಪ್ಪಿಸಿ ಕೊಂಡವರಾಗಿದ್ದರೂ ಮತ್ತು ಅದರಲ್ಲಿ ಪುನಃ ಸಿಕ್ಕಿಬಿದ್ದು ಅದನ್ನು ಜಯಿಸಲಾರದೆ ಸೋತು ಹೋದವರಾಗಿದ್ದಾರೆ. ನಾಯಿ ತಾನು ಕಕ್ಕಿದ್ದನ್ನು ನೆಕ್ಕುವುದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವುದಕ್ಕೆ ಹೋಯಿತು ಎಂಬ ನಿಜವಾದ ಗಾದೆಗೆ ಸರಿಯಾಗಿ ನಡೆದಿದ್ದಾರೆ (2 ಪೇತ್ರ 2:22). ಇದನ್ನು ಪ್ರಾಪಂಚಿಕ ಆಸೆಗಾಗಿ ನೀಟಾದ ಮಾರ್ಗವನ್ನು ಬಿಟ್ಟ ಬಿಳಾಮನಿಗೆ ಹೋಲಿಸುತ್ತಾನೆ. ಈ ವರ್ಗವು ಮುಖ್ಯವಾಗಿ ಸಭೆಯ ಬೋಧಕರುಗಳನ್ನೊಳಗೊಂಡಿದೆ. ಇವರು ಸುಳ್ಳು ಪ್ರವಾದಿಗಳೂ, ಬಂಡು ತನವನ್ನು ಆಶಿಸಿ, ಶರೀರ ಭಾವಾನುಸಾರದಂತೆ ನಡೆದು ಪ್ರಭುತ್ವ ತಿರಸ್ಕಾರ ಮಾಡುವವರೂ ಆಗಿದ್ದಾರೆ (2 ಪೇತ್ರ 2 :1, 11).

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಆಯ್ಕೆಯಿಂದ ಬಿದ್ದುಹೋಗುವ ಈ ವರ್ಗದ ಬಗ್ಗೆ ಎರಡು ವಿವರಣೆಗಳಿವೆ. ಮೊದಲಿಗೆ 6:4–9 ರಲ್ಲಿ ಅಪೋಸ್ತಲನು ತಿಳಿಸುವುದೇನಂದರೆ ಕೆಲವರು ಬರಲಿರುವ ಯುಗದ ಪರಲೋಕದಿಂದಾದ ದಾನದ ಮತ್ತು ಶಕ್ತಿಯ ಸವಿಯನ್ನುಂಡ ನಂತರ, ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ ಅದರ ಮಹತ್ವ ಅನುಭವಿಸಿದ ಬಳಿಕ, ಆಯ್ಕೆಗೊಂಡ ವರ್ಗದ ಸದಸ್ಯರಾದ ಮೇಲೆ, ಪಾಪದಲ್ಲಿ ಬೀಳುವುದು ತಪ್ಪಿಸಿಕೊಳ್ಳಲಾಗದ ದೇಹದ ಬಲಹೀನತೆಗಳ ಕಾರಣದಿಂದಲ್ಲ, ಕೆಡುಕನ ಅಮಿಷಗಳ ದೆಸೆಯಿಂದಲ್ಲ, ಆದರೆ ಇಚ್ಛಾಪೂರ್ವಕವಾಗಿಯೂ, ತಿಳಿದೂ ತಿಳಿದೂ ನೀತಿಯನ್ನು ತ್ಯಜಿಸುವುದಾಗಿದೆ. ಇವರಲ್ಲಿ ತಿರುಗಿ ಪಶ್ಚಾತ್ತಾಪಕ್ಕೆ ಒಳಗಾಗುವಂತೆ ಮಾನಸಾಂತರವನ್ನು ಹುಟ್ಟಿಸುವುದು ಅಸಾಧ್ಯವಾದುದೆಂದು ಅಪೋಸ್ತಲನು ಖಚಿತಪಡಿಸುತ್ತಾನೆ. ಮಹಾ ಈಡುಬಲಿ ಯಜ್ಞದ ಲಾಭದಲ್ಲಿ ಪಾಲುದಾರರಾದ ಮೇಲೆ ದೇವರ ಕೃಪೆಯನ್ನು ಕಡೆಗಣಿಸುವವರಾಗಿ ಇವರುಗಳು ಪ್ರಾಯಶ್ಚಿತದಲ್ಲಿನ ತಮ್ಮ ಪಾಲನ್ನು ದುರುಪಯೋಗ ಮಾಡುವವರಾಗಿದ್ದಾರೆ. ಆದುದರಿಂದ ಅವರಿಗೆ ಇನ್ನೇನೂ ಉಳಿಯುವುದಿಲ್ಲ; ಅವರು ಇಚ್ಛಾಪೂರ್ವಕವಾಗಿ ತಮ್ಮ ಸ್ಥಾನವನ್ನು ತೆಗೆದುಕೊಂಡಿರುವುದರಿಂದ ನೀತಿಯುತ ಮನವಿಗಳು ಅವರಿಗೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ.

ಮತ್ತೊಂದು ಅಧ್ಯಾಯದಲ್ಲಿ (10:26,27,31) ಅಪೋಸ್ತಲನು ಸ್ಪಷ್ಟವಾಗಿ ಮತ್ತೊಂದು ತರಗತಿಯ ಬಗ್ಗೆ ವಿವರಿಸುತ್ತಾನೆ. ಅದು ಜೀವನದ ಪಾಪಮಯ ಮತ್ತು ಅವಮಾನಕರ ಮಾರ್ಗಕ್ಕೆ ಬೀಳುವ ಬದಲು ಅವರು ನೀತಿವಂತರಾಗಿದ್ದು ದೇವರೊಡನೆ ನೀತಿಯುತ ಬಾಂಧ'ವ್ಯವನ್ನು ಕಾಪಾಡಿಕೊಳ್ಳಲು ಅಗತ್ಯವಾದ ನಂಬಿಕೆಯಿಂದಲೇ ಬಿದ್ದುಹೋಗುವುದಾಗಿದೆ. ಎರಡೂ ಪ್ರಕರಣಗಳಲ್ಲಿ ಇಚ್ಛಾಪೂರ್ವಕವಾದ ತಪ್ಪುಗಳ ಉಗ್ರತೆಗೆ ಕಾರಣವಾಗಿದೆ ಎಂಬುದನ್ನು ನಾವು ಗಮನಿಸಬಹುದು: "ನಮಗೆ ಸತ್ಯದ ಜ್ಞಾನವು ದೊರೆತ ಮೇಲೆ (ನಾವು ಜ್ಞಾನ, ನೀತಿ–ನಿರ್ಣಯ ಮತ್ತು ಶುದ್ಧೀಕರಣ ಇವುಗಳ ಮಟ್ಟಿಗೆ ಕ್ರಿಸ್ತನ ಮೂಲಕ ದೇವರಿಂದ ಕೃಪೆಹೊಂದಿದ ನಂತರ) ನಾವು ಇಚ್ಛಾಪೂರ್ವಕವಾಗಿ ಪಾಪಮಾಡಿದರೆ, ಪಾಪ ಪರಿಹಾರಕ್ಕಾಗಿ ಯಾವ ಯಜ್ಞವೂ ಇರುವುದಿಲ್ಲ". ಎಲ್ಲರ ಪರವಾಗಿ ಕ್ರಿಸ್ತನು ಅರ್ಪಿಸಿದ ಮಹಾ ತ್ಯಾಗವು ಪ್ರಾಥಮಿಕ (ಮೂಲ) ಪಾಪದ ಸಲುವಾಗಿ, ಅಂದರೆ ಆದಾಮನ ಪಾಪ ಮತ್ತು ಇದರಿಂದ ಆತನ ಸಂತತಿಯವರಾದ ನಮ್ಮಲ್ಲಿ ವಂಶ ಪಾರಂಪರ್ಯವಾಗಿ ಹರಿದು ಬಂದಿರುವ ಬಲಹೀನತೆಗಳಿಗಾಗಿ. ನಮ್ಮ ಕರ್ತನು ನಾವು ಮಾಡುವ ಯಾವುದೇ ಇಚ್ಛಾಪೂರ್ವಕವಾದ ಪಾಪಗಳಿಗೆ ಈಡುಬಲಿ ಬೆಲೆ ತೆತ್ತವನಲ್ಲ. ಆದುದರಿಂದ ನಾವು ಇಚ್ಛಾಪೂರ್ವಕವಾಗಿ (ಬೇಕೆಂತಲೇ) ಪಾಪಮಾಡಿದರೆ, ಪ್ರಾಥಮಿಕ ಅರ್ಹತೆಯ ಯಾವ ಭಾಗವೂ ಅದಕ್ಕೆ ಅನ್ವಯಿಸುವುದಿಲ್ಲ. ನಾವು ನಮ್ಮ ಇಚ್ಛಾಪೂರ್ವಕ ಪಾಪಗಳಿಗೆ ದಂಡ ನೀಡುವ ಹಂಗಿನಲ್ಲಿದ್ದೇವೆ. ಪಾಪವು ಪೂರ್ಣವಾಗಿ ಉದ್ದೇಶಪೂರ್ವಕವಾಗಿದ್ದಲ್ಲಿ, ಇದರಲ್ಲಿ ಯಾವುದೇ ಪ್ರಮಾಣದ ಬಲಹೀನತೆಯಾಗಲೀ, ಶೋಧನೆಯಾಗಲೀ ಕಂಡುಬಾರದೇ ಇದ್ದಲ್ಲಿ ಮತ್ತು ಇವುಗಳನ್ನು ನಾವು ದೇವರ ಜ್ಞಾನದ ಬಗ್ಗೆ ಮತ್ತು ಆತನೊಡನೆ ನಮ್ಮ ಸಂಬಂಧ ಇವುಗಳ ಸ್ಪಷ್ಟ ತಿಳುವಳಿಕೆಗಳನ್ನು ಪಡೆದ ನಂತರ ಮಾಡಿದಲ್ಲಿ ಅದು ಪರ್ಯಂತರವಾದ ಪಾಪವೆನಿಸಿ–ಎರಡನೆಯ ಮರಣವನ್ನುಂಟುಮಾಡುತ್ತದೆ. ಇದರಲ್ಲಿ ನಿರೀಕ್ಷೆಯಿಂದ ಎದುರುನೋಡುವಂಥದ್ದೇನೂ ಇರುವುದಿಲ್ಲ; ಬದಲು ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪು, ದಂಡನೆಗಾಗಿ ಮತ್ತು ದೈವೀಕ ತೀಕ್ಷ್ಣ ಕೋಪಕ್ಕಾಗಿ ಕಾಯ್ದುಕೊಂಡಿರುವುದು ಮಾತ್ರವೇ. ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿರುವ ವಿಮೋಚನೆ ಮತ್ತು ಆತನ ನೀತಿಯನ್ನು ಹಾಗೂ ಅದನ್ನು ಹೊಂದಿಕೊಳ್ಳಲು ಮಾಡಿರುವ ಯೋಜನೆಯನ್ನು ಬುದ್ಧಿವಂತಿಕೆಯಿಂದ ವಿರೋಧಿಸುವ ಎಲ್ಲಾ ವಿರೋಧಿಗಳನ್ನೂ ನುಂಗಿಹಾಕುವುದು.

ನಮ್ಮ ವಿಮೋಚಕನಾಗಿ ಕ್ರಿಸ್ತನ ಪ್ರಾಯಶ್ಚಿತ್ತ ಸಂಧಾನ ಕಾರ್ಯವನ್ನು ಅರ್ಥಮಾಡಿಕೊಂಡ ನಂತರ ಆ ಕಾರ್ಯವನ್ನು ನಿರ್ಲಕ್ಷಿಸಿ, ನೂತನ ಒಡಂಬಡಿಕೆಯನ್ನು ಒದಗಿಸಿಕೊಡುವ ಆತನ ಪರಿಶುದ್ಧ ರಕ್ತವನ್ನು ಸರ್ವ ಸಾಮಾನ್ಯವೆಂದು ಎಣಿಸಿಕೊಂಡು ಆ ಮೂಲಕ ನಮ್ಮ ವಿಮೋಚಕನ ಸಂಧಾನ ಮತ್ತು ಸಹವಾಸದಲ್ಲಿ ಆತನ ತ್ಯಾಗ ಮತ್ತು ಬಹುಮಾನದ ಮೂಲಕ ಕಂಡು ಬಂದ ದೇವರ ಕೃಪೆಯುಳ್ಳ ಪವಿತ್ರಾತ್ಮನನ್ನು ಅಲಕ್ಷಿಸುತ್ತಾರೋ ಅವರನ್ನು ಕುರಿತು 29ನೇ ವಚನದಲ್ಲಿ ಅಪೋಸ್ತಲನು ಉದ್ದೇಶಿಸುವಂತೆ ಕಂಡುಬರುತ್ತದೆ. ಯಾರು ಮೋಶೆಯ ಮತ್ತು ಆತನ ಮಧ್ಯಸ್ಥಿಕೆಯಲ್ಲಿ ಒದಗಿದ ಧರ್ಮಶಾಸ್ತ್ರವನ್ನು ಉಪೇಕ್ಷೆಮಾಡಿ ಕರುಣೆ ಹೊಂದದೇ ಮರಣಪಟ್ಟವರ ಮೇಲೆ ಒದಗಿಬಂದ ಈ ಮರಣಶಿಕ್ಷೆಯು ನಿತ್ಯವಾದುದೆಂಬ ಉದ್ದೇಶ ಹೊಂದಿಲ್ಲವಾದರೂ, ಯಾರು ಮೋಶೆಯ ಪ್ರತಿರೂಪನಾದವನನ್ನು ಉಪೇಕ್ಷಿಸುತ್ತಾರೋ ಮತ್ತು ಆ ಮೂಲಕ ದೇವರು ಅವರ ಅನುಕೂಲಕ್ಕಾಗಿ ಸಿದ್ಧಪಡಿಸಿದ ಆತನ ಪರಿಶುದ್ಧ ರಕ್ತದ ಅನ್ಯೋನ್ಯತೆಯನ್ನು ನಿರ್ಲಕ್ಷಿಸುತ್ತಾರೋ ಅಂತವರು ಒಡಂಬಡಿಕೆಯ ನಿಯಮಗಳನ್ನು ಉಲ್ಲಂಘಿಸಿದವರಿಗೆ ನೇಮಕವಾದ ಶಿಕ್ಷೆಗಿಂತ ಉಗ್ರವಾದ ಶಿಕ್ಷೆಗೆ

ಅರ್ಹರೆಂದು ಎಣಿಸಲ್ಪಡುತ್ತಾರೆ. ಅದು ಬಹಳ ಭಯಂಕರವಾದುದು ಮತ್ತು ಅದು ಮರಣ ಶಿಕ್ಷೆಯಾಗಿದೆ. ಅಂದರೆ ಎರಡನೆಯ ಮರಣ. ಇದರಿಂದ ಅವರಿಗೆ ವಿಮೋಚನೆಯಿಲ್ಲ, ಪುನರುತ್ಥಾನವಿಲ್ಲ, ಪುನರುದ್ಧಾರವಿಲ್ಲ. ನಾವು ದೈವಕೃಪೆಯನ್ನು ಯಾವ ರೀತಿಯಲ್ಲಿ ತಿರಸ್ಕರಿಸುತ್ತಿದ್ದೇವೆಂದು ತಿಳಿಸಲು ಅಪೋಸ್ತಲನು ಈ ದೆಸೆಯಲ್ಲಿ ಎಚ್ಚರಿಸಿದರೆ ನಾವು ಆಶ್ಚರ್ಯಪಡಬೇಕಾಗಿಲ್ಲ. ದೇವರು ನಮಗಾಗಿ ನಿಯುಕ್ತಿಗೊಳಿಸಿದ ಪ್ರತಿಪಾದಕನಾದ ಯೇಸುವಿನ ಪಾಲನೆಯಿಂದ ಹೊರಬೀಳುವುದೆಂದರೆ, ನ್ಯಾಯಾಧಿಪತಿಯಾದ ತಂದೆಯ ಕೈಗಳಲ್ಲಿ ಬೀಳುವುದು. ಈ ಮಹಾ ನ್ಯಾಯಾಧೀಶನು ಪಾಪಗಳಿಗಾಗಿ ಯಾವುದೇ ಭತ್ಯೆ ನೀಡುವವನಲ್ಲ, ಯಾವುದೇ ನೆವವನ್ನು ಕೇಳುವವನಲ್ಲ. ಪಾಪಿಗಳ ಬಗ್ಗೆ ಆತನ ಒಂದೇ ಒಂದು ಕೃಪೆಯೆಂದರೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಮಾತ್ರವೇ.

## ಮಹಾ ಸಮೂಹ

## The Great Company

ಈಗಾಗಲೇ ತಿಳಿಸಿರುವಂತೆ, ಆಯ್ಕೆಯಾದವರಿಂದ ಹೊರಬೀಳುವುದಲ್ಲದೆ, ಎರಡನೆಯ ಮರಣಕ್ಕೆ ತುತ್ತಾಗುವುದಲ್ಲದೆ, ತಮ್ಮ ಕರೆ ಮತ್ತು ಆಯ್ಕೆಯನ್ನು ಖಚಿತಪಡಿಸಿಕೊಳ್ಳಲಾಗದ ಮತ್ತೊಂದು ವರ್ಗದವರು ನಮ್ಮ ಗಮನಕ್ಕೆ ಬರುತ್ತಾರೆ. ಆದರೆ ಇವರು ಎರಡನೆಯ ಮರಣಕ್ಕೆ ತುತ್ತಾಗುವವರಲ್ಲ. ಯಾಕೆಂದರೆ ಅವರು ಇಚ್ಛಾಪೂರ್ವಕವಾಗಿ ನಿಬಿಡವಾದ ಅನೀತಿವಂತಿಕೆಯಲ್ಲಿ ಪಾಪಮಾಡಿದವರಲ್ಲ. ಅಲ್ಲದೆ ಅಮೂಲ್ಯವಾದ ರಕ್ತದ ಅರ್ಹತೆಯನ್ನು ನಿರಾಕರಿಸಿದವರೂ ಅಲ್ಲ. ಈ ವರ್ಗವನ್ನು ನಾವೀಗಾಗಲೇ "ಮಹಾ ಸಮೂಹ'ಎಂದು ಉಲ್ಲೇಖಿಸಿದ್ದೇವೆ. ಇವರುಗಳು ಮಹಾ ಸಂಕಟದಿಂದ ಹೊರಬಿದ್ದು, ತಮ್ಮ ಉಡುಪುಗಳನ್ನು ಯಜ್ಞದಕುರಿಯ ರಕ್ತದಲ್ಲಿ ತೊಳಕೊಂಡು ಅದನ್ನು ಪ್ರಕಾಶಗೊಳಿಸಿದ್ದಾರೆ. ಆದರೆ ಆತ್ಮೀಕ ಸ್ವಭಾವ, ಮಹಾ ಆಶೀರ್ವಾದ ಮತ್ತು ಕುರಿಮರಿಯ ವಿವಾಹದ ರಾತ್ರಿಯ ಭೋಜನದಲ್ಲಿ ಅತಿಥಿಗಳಾಗಿ ಭಾಗವಹಿಸುವ ಇವರು ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆದು, ಅದರಲ್ಲೇ ಹೃತ್ಪೂರ್ವಕವಾಗಿ ಸಂತೋಷಿಸುತ್ತಾ ಪ್ರಾಮಾಣಿಕವಾಗಿದ್ದು ಜಯಶೀಲರಾದ ಹಾಗೂ ಖಚಿತವಾಗಿ ಆಯ್ಕೆಯಾದವರಿಗೆ ಮಾತ್ರ ದೊರೆಯುವ ಮಹಾಜಯಮಾಲೆಯನ್ನು ಪಡಕೊಳ್ಳಲಾಗದೇ ಹೋಗಿದ್ದಾರೆ. (ಪ್ರಕಟನೆ 7ನೆ ಅಧ್ಯಾಯ) ಈ ಮಹಾ ಸಮೂಹದವರು ಆಯ್ಕೆಯಾದವರೊಡನೆ ತಮ್ಮ ಸ್ಥಾನವನ್ನು ಕಾಯ್ದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಕರ್ತನ ಬಗ್ಗೆ, ಸತ್ಯ ಮತ್ತು ಸಹೋದರತ್ವಗಳ ಬಗ್ಗೆ ಸಾಕಾಗದ ತಮ್ಮ ಉತ್ಸಾಹದ ಸಲುವಾಗಿ ಖಚಿತವಾದ ಆಯ್ಕೆಹೊಂದಿಕೊಳ್ಳಲೂ ಸೋತುಹೋಗಿದ್ದಾರೆ. "ಅವರು ಭಾಗಶಃ ಜೀವನದ ಚಿಂತನೆಗಳಲ್ಲಿ ತಲ್ಲೀನರಾಗಿದ್ದವರು." ಆದ್ದರಿಂದ, ಅವರ ಹೃದಯಗಳು ವಿಮೋಚಕನಿಗೆ ನಿಷ್ಠೆಯುಳ್ಳವುಗಳಾದುದರಿಂದ, ಅವರು ಆತನ ಅಮೂಲ್ಯ ರಕ್ತದಲ್ಲಿ ತಮ್ಮ ನಂಬಿಕೆಯನ್ನು ಕಾಪಾಡಿಕೊಂಡಿರುವುದರಿಂದ ಮತ್ತು ಅದನ್ನೇ ಗಟ್ಟಿಯಾಗಿ ಹಿಡುಕೊಂಡವರಾಗಿದ್ದು ಅದನ್ನು ನಿರಾಕರಿಸದೇ ಇರುವುದರಿಂದ, ಖಚಿತವಾಗಿ ಆಯ್ಕೆಯಾದವರನ್ನು ಇಚ್ಛಾಪೂರ್ವಕ ತ್ಯಾಗದ ಹೆಜ್ಜೆಜಾಡಿನಲ್ಲಿ ಮಹಿಮೆಗೆ ನಡಿಸುವವನಾಗಿರುವ ನಮ್ಮ ಪ್ರತಿಪಾದಕನೂ, (Advocate) ರಕ್ಷಣಾನಾಯಕನೂ ಆದ ಯೇಸುಕರ್ತನು ಇವರನ್ನು ಕೆಳಗಣ ಹಂತದಲ್ಲಿ ತನ್ನ ಆತ್ಮೀಕ ಆಶೀರ್ವಾದಗಳಿಗೆ ಸೇರಿಸುವವನಾಗಿದ್ದಾನೆ. ಯಾಕೆಂದರೆ ಅವರುಗಳು ಆತನನ್ನು ನಂಬಿದ್ದಾರೆ ಮತ್ತು ಆತನ ನಾಮವನ್ನಾಗಲೀ ಕಾರ್ಯಗಳನ್ನಾಗಲೀ ಎಂದೂ ನಿರಾಕರಿಸಿದವರಲ್ಲ.

ನಮ್ಮ ಕರ್ತನು ತನ್ನ ದ್ರಾಕ್ಷೆಯಬಳ್ಳಿಯ ಸಾಮ್ಯದಲ್ಲಿ ಆಯ್ಕೆಗೊಂಡ ಸಭೆಯನ್ನು, ನೂತನ ಸೃಷ್ಟಿಯನ್ನು ಉದ್ಧೇಶಿಸಿ– ತಾನೇ ದ್ರಾಕ್ಷೆಬಳ್ಳಿ ಮತ್ತು ತನ್ನ ಹೆಜ್ಜೆಜಾಡಿನಲ್ಲಿ ನಡೆಯುವ ಪ್ರತಿಷ್ಠಿತ ನಂಬಿಗಸ್ತ ಅನುಯಾಯಿಗಳು ಅದರ ಕೊಂಬೆಗಳು ಎಂದು ನಮಗೆ ಹೇಳಿದ್ದಾನೆ. ಕೊಂಬೆಗಳಾಗಿರುವುದೆಂದರೆ ಶೋಧನೆ ಮತ್ತು ಸಂಕಟಗಳಿಂದ ನಿವೃತ್ತಿ ಹೊಂದಿದ್ದಾರೆಂಬುದಲ್ಲ (Immunity) ಎಂದು ಸಹಾ ಆತನು ದೃಢಪಡಿಸುತ್ತಾನೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಮಹಾ ಒಕ್ಕಲಿಗನಾದ ತಂದೆಯು ನಮಗೆ ವಿಶ್ವಾಸದ, ತಾಳ್ಮೆಯ ಮತ್ತು ಭಕ್ತಿಯ ಪರೀಕ್ಷೆಗಳಾಗಬೇಕೆಂದು ಬಯಸುತ್ತಾನೆ, ಇವುಗಳನ್ನು ಶುದ್ಧೀಕರಿಸುವಾಗ ಲೋಕದ ಸಂಗತಿಗಳ ಮೇಲಿನ ನಮ್ಮ ಇಚ್ಛೆ, ನಿರೀಕ್ಷೆ ಮತ್ತು ಅಕಾಂಕ್ಷೆಗಳ ಮೇಲೆ ಕಡಿಮೆ ಒಲವುಂಟಾಗುತ್ತದೆ. ಇವುಗಳು ವಿಪುಲವಾದ ಆತ್ಮೀಕ ಫಲಗಳಿಗೆ, ಸೌಮ್ಯತೆಗೆ, ತಾಳ್ಮೆಗೆ, ಧೀರ್ಘಕಾಲೀನ ಶ್ರಮೆಗೆ, ಸಹೋದರ ಕರುಣೆಗೆ, ಪ್ರೀತಿಗೆ ಎಡೆಮಾಡಿಕೊಡುತ್ತವೆ. ಈ ಸಂಗತಿಗಳು ನಮ್ಮಲ್ಲಿ ಉಳಿದು, ಹೆಚ್ಚು ಹೆಚ್ಚಾಗಿ ವೃದ್ಧಿಗೊಂಡು ನಮ್ಮ ಕರ್ತನಾದ ಯೇಸುಕ್ರಿಸ್ತನ ನಿತ್ಯರಾಜ್ಯಕ್ಕೆ ಆತನ ನೂತನ ಸೃಷ್ಟಿಗಳಾಗಿ ಧಾರಾಳವಾದ ಪ್ರವೇಶಕ್ಕೆ ನಡೆಸುತ್ತದೆ ( 2 ಪೇತ್ರ 1 : 11).

ಹೀಗಿರುವಾಗ, ಆತನು ನಮಗೆ ಎಚ್ಚರಿಸುವುದೇನೆಂದರೆ, ನಿಜವಾದ ದ್ರಾಕ್ಷೆಬಳ್ಳಿಯ ನಿಜವಾದ ಕೊಂಬೆಗಳ ಸ್ಥಾನವನ್ನು ಪಡೆದುಕೊಂಡರೆ ಮಾತ್ರವೇ ಸಾಲದು; ದ್ರಾಕ್ಷೆಬಳ್ಳಿಯ ಚೇತನಾಯುಕ್ತವಾದ ಜೀವ ನಮ್ಮಲ್ಲಿರಬೇಕು, ದ್ರಾಕ್ಷೆಯ ಫಲಗಳನ್ನು ಭರಿಸುವ ಮನೋವೃತ್ತಿ ನಮ್ಮ ಹೃದಯಗಳಲ್ಲಿರಬೇಕು; ಆಗ ಒಕ್ಕಲಿಗನು ನಮಗೆ ಆತನ ಕೊಂಬೆಗಳಾಗಿ ಉಚಿತ ಕಾಲಾನುಕಾಲ ನೆಲೆಗೊಳ್ಳಲು ಅನುಮತಿ ನೀಡುತ್ತಾನೆ ಮತ್ತು ಅಯೋಗ್ಯರೆಂದು ಖಂಡಿಸುವ ಮುನ್ನವೇ ನಾವು ಸರಿಯಾದ ಪ್ರತಿಫಲ ನೀಡುವ ಅಥವಾ ನೀಡದಿರುವ ಕುರುಹುಗಳೇನಾದರೂ ಉಂಟೋ ಎಂದು ಪರೀಕ್ಷಿಸುತ್ತಾನೆ. ಆತನು ನೂತನ ಕೊಂಬೆಯ ಮೇಲೆ ಹಣ್ಣಾದ ಗೊಂಚಲನ್ನಾಗಲೀ ಅಥವಾ ಹಸಿರು ದ್ರಾಕ್ಷೆಯನ್ನಾಗಲೀ ಬಯಸುವುದಿಲ್ಲ. ಮೊದಲಿಗೆ ಆತನು ಹಣ್ಣಿನ ಒಂದು ಸಣ್ಣ ಮೊಳಕೆಯ ಲಕ್ಷಣವನ್ನು ಮಾತ್ರವೇ ಕಾಣ ಬಯಸುತ್ತಾನೆ. ನಂತರ ಇದು ದ್ರಾಕ್ಷೆಯ ಹೂವಾಗಿ ವಿಕಸಿತಗೊಳ್ಳುವಂತೆ, ಮತ್ತೂ ನಂತರ ಇದು ಮಧುರವಾದ ಹಣ್ಣಾಗುವಂತೆ ಅಪೇಕ್ಷಿಸುತ್ತಾನೆ. ಒಕ್ಕಲಿಗನು ತನ್ನ ತಂದೆಯ ಬಲಗೈ ನೆಟ್ಟು

ಸಾಕಿದ ಈ ದ್ರಾಕ್ಷೆಬಳ್ಳಿಯ (ಕೀರ್ತನೆ 80:15) ಹಣ್ಣಿನ ಬೆಳವಣಿಗೆಯ ಬಗ್ಗೆ ದೀರ್ಘವಾದ ತಾಳ್ಮೆಯುಳ್ಳವನಾಗಿದ್ದಾನೆ. ಆದರೆ, ಸೂಕ್ತ ಸಮಯದ ನಂತರವೂ ಅದು ಫಲಿಸದೇ ಹೋದಲ್ಲಿ, ಫಲನೀಡದ ಅದನ್ನು ತನ್ನ ಸ್ವಂತ ಬೆಳವಣಿಗೆಗಾಗಿ ಬಳ್ಳಿಯ ಶಕ್ತಿ ಮತ್ತು ಸಾರವನ್ನು ವ್ಯರ್ಥವಾಗಿ ಹೀರುವ ಕೊಂಬೆಯೆಂದು ಪರಿಗಣಿಸಿ ಅದನ್ನು ಕಡಿದು ಬಿಸಾಡಿ ಬಿಡುವನು. ಈ ರೀತಿಯಲ್ಲಿ ನಮ್ಮ ಕರ್ತನು ನಾವುಗಳು ನಮ್ಮ ಕರೆ ಮತ್ತು ಆಯ್ಕೆಯನ್ನು ಪವಿತ್ರನಿಗೆ ಒಳ್ಳೆಯ ಫಲನೀಡುವುದರ ಮೂಲಕ ಖಚಿತಪಡಿಸಿಕೊಳ್ಳಬೇಕು ಎಂದು ಸ್ಪಷ್ಟವಾಗಿ ಸೂಚಿಸುತ್ತಾನೆ. ಯಾಕೆಂದರೆ ಇದರ ಅಂತ್ಯದ ಬಹುಮಾನವು ನಿತ್ಯಜೀವವೇ ಆಗಿದೆ.

## ಹಿಂದಿನ ಕಾಲದ ಅನೇಕ ಆಯ್ಕೆಗಳು
## Various Elections in the Past

ನಮ್ಮ ಆಸಕ್ತಿಯು ಮುಖ್ಯವಾಗಿ ಕೇಂದ್ರೀಕರಿಸಲ್ಪಡುವ ನೂತನ ಸೃಷ್ಟಿಯ ಬಗ್ಗೆ ನಿರ್ದಿಷ್ಟವಾದ ಹಂತವನ್ನು ಪರಿಶೀಲಿಸುವ ಮುನ್ನ ನಮ್ಮ ಮನಸ್ಸುಗಳು ವಿಸ್ತಾರಗೊಳ್ಳುವಂತೆ ದೇವರ ವಾಕ್ಯಗಳಲ್ಲಿ ನಮ್ಮ ಗಮನಕ್ಕೆ ಬಂದ ಇನ್ನೂ ಇತರ ಆಯ್ಕೆಗಳ ಬಗ್ಗೆ ನಾವೀಗ ಗಮನಿಸೋಣ. ನಮ್ಮ ಕರ್ತನ ಪ್ರಥಮ ಆಗಮನದ ಮುಂಚಿನ ಆಯ್ಕೆಗಳು ಮತ್ತು ಆತನ ನೇತೃತ್ವದಲ್ಲಿನ ನೂತನ ಸೃಷ್ಟಿಯ ಆಯ್ಕೆಗಳಲ್ಲಿರುವ ವ್ಯತ್ಯಾಸವನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಎರಡನೆಯ ವರ್ಗದ ಬಗ್ಗೆ "ನೀವು ನಿಮ್ಮ ಒಂದೇ ಕರೆಯ ನಿರೀಕ್ಷೆಯುಳ್ಳವರಾಗಿ ಕರೆಯಲ್ಪಟ್ಟವರು" ಎಂದು ಹೇಳಿಯದೆ. ಆದರೆ ಹಿಂದಿನ ಆಯ್ಕೆಗಳು ವಿವಿಧ ಉದ್ದೇಶಗಳಿಗಾಗಿ ಮತ್ತು ದೇವರ ವಿವಿಧ ವಿನ್ಯಾಸಗಳನ್ನು ಪೂರೈಸುವುದಾಗಿದ್ದವು. ಅಬ್ರಹಾಮನು ದೇವರ ಒಂದು ಮಾದರಿಯಾಗಿ ಆಯ್ಕೆಗೊಂಡರೆ, ಆತನ ಪತ್ನಿ ಸಾರಳು ಅಬ್ರಹಾಮನ ಒಡಂಬಡಿಕೆಯ ಮಾದರಿಯಾಗಿ ಆಯ್ಕೆಗೊಂಡಳು. ಆಕೆಯ ಮೂಲಕ ಮೆಸ್ಸೀಯನು ಬರುವುದಾಗಿತ್ತು. ದಾಸಿಯಾದ ಹಾಗರಳು ನಿಬಂಧನಾ ಒಡಂಬಡಿಕೆಗೆ ಮಾದರಿಯಾಗಿಯೂ, ಆಕೆಯ ಮಗನಾದ ಇಷ್ಮಾಯೇಲನು ಸ್ವಾಭಾವಿಕ ಇಸ್ರಾಯೇಲ್ಯರ ಮಾದರಿಯಾಗಿಯೂ ಆಯ್ಕೆಗೊಂಡರು. ಈತನು ಮೊದಲಿಗೆ ಜನಿಸಿದನಾದರೂ ವಾಗ್ದಾನದ ಶಿಶುವಾದ ಇಸಾಕನೊಡನೆ ಜೊತೆ ವಾರಸುದಾರನಾಗಲಿಲ್ಲ. ಇಸಾಕನು ಕ್ರಿಸ್ತನ ಮಾದರಿಯಾಗಿಯೂ ಮತ್ತು ಆತನ ಪತ್ನಿ ರೆಬೆಕ್ಕಳು ಕುರಿಮರಿಯ ಪತ್ನಿಯೂ, ಮದಲಗಿತ್ತಿಯಾದ ಸಭೆಯ ಮಾದರಿಯಾಗಿಯೂ ಆಯ್ಕೆಗೊಂಡರು. ಅಬ್ರಹಾಮನ ಸೇವಕನಾದ ಎಲಿಯೇಜ಼ರನು ಪವಿತ್ರಾತ್ಮನ ಮಾದರಿಯಾಗಿ ಆಯ್ಕೆಗೊಂಡನು. ಆತನ ನಿಯೋಗವು ಸಭೆಯನ್ನು ಆಹ್ವಾನಿಸುವುದು ಮತ್ತು ಅದಕ್ಕೆ ಸಹಾಯಮಾಡಿ ಆಕೆಯನ್ನೂ, ಅಕೆಯ ಗೆಳತಿಯರಾದ ಇತರ ಕನ್ಯೆಯರನ್ನೂ ಇಸಾಕನ ಬಳಿಗೆ ಕರೆತರುವುದೂ ಆಗಿತ್ತು.

ಈ ಆಯ್ಕೆಗಳು ಇದರಲ್ಲಿನ ಯಾವುದೇ ವ್ಯಕ್ತಿಯ ನಿತ್ಯನಿರಂತರ ಭವಿಷ್ಯಕ್ಕೆ ಯಾವುದೇ ಅರ್ಥದಲ್ಲಿ ಅನ್ವಯಿಸುವುದಾಗಿರಲಿಲ್ಲ; ಆದರೆ ಈ ವರೆಗೆ ಈ ಮಾದರಿ ವ್ಯಕ್ತಿಗಳು ದೇವರಿಂದ ಉಪಯೋಗಿಸಲ್ಪಟ್ಟವರಾಗಿದ್ದು ಅದಕ್ಕಾಗಿ ಪರಿಹಾರ ರೂಪದ ಆಶೀರ್ವಾದಗಳನ್ನು ಪ್ರಸಕ್ತ ಜೀವನದಲ್ಲಿಯೂ ಮತ್ತು ಅವರು ದೈವಿಕ ಯೋಜನೆಯಲ್ಲಿ ಪ್ರವೇಶಿಸುವಾಗ ಅನುಪಾತದಲ್ಲಿ ಬಹುಶಃ ಪಡ ಕೊಂಡವರಾಗಿದ್ದರು. ಅವರಿಗೆ ಸೌಕರ್ಯ ಮತ್ತು ಸಂತೋಷವನ್ನು ಅನುಭವಿಸುವ ಅನುಮತಿ ದೊರೆತಿತ್ತು. ಮಾದರಿಗಳಾಗಿ ಅವರ ಆಯ್ಕೆಯ ನಿಮಿತ್ತ ಮಾಡಬೇಕಾದ ಯಾವುದೇ ತ್ಯಾಗ ಮತ್ತು ಎದುರಿಸುವ ಪರೀಕ್ಷೆಗಳಿಗೆ ಪೂರ್ಣ ರೂಪದ ಪರಿಹಾರ ಅವರಿಗೆ ದೊರೆಕಿತು. ಈ ಆಯ್ಕೆಯ ವಿಷಯವಾಗಿ ವಿವೇಚಿಸುವ ಅಪೋಸ್ತಲನು, ದೇವರು ನೂತನ ಸೃಷ್ಟಿಯ ಆಯ್ಕೆಯನ್ನು ಪೂರ್ಣಗೊಳಿಸುವುದಕ್ಕಾಗಿ ಅನ್ಯಜನರ ಕಡೆಗೆ ತಿರುಗಿದ್ದರಿಂದ ಶಾರೀರಿಕ ಇಸ್ರಾಯೇಲ್ಯರಿಗೆ ಯಾವುದೇ ಅನ್ಯಾಯವಾಗಲಿಲ್ಲ ಎಂದು ತೋರಿಸುವ ಪ್ರಯತ್ನವನ್ನು ಮಾಡುತ್ತಾನೆ ಮತ್ತು ಸರ್ವಶಕ್ತನು ಹಂಚಿ ಕೊಡುವುದನ್ನು ಮೆಚ್ಚುತ್ತಾನೆ. ಅದನ್ನು ಯಾರಿಗೆ ಹಂಚಬೇಕೆಂಬುದು ಆತನ ಸ್ವಂತ ನಿರ್ಣಯಕ್ಕೆ ಬಿಟ್ಟದ್ದು ಎಂಬ ಸತ್ಯವನ್ನು ತೋರಿಸಿ ಕೊಡುತ್ತಾನೆ. ದೇವರು ಶಾರೀರಿಕ ಅಥವಾ ಸ್ವಾಭಾವಿಕ ಇಸ್ರಾಯೇಲ್ಯರಿಗೂ ಒಂದು ಜನಾಂಗವಾಗಿ ಕೆಲವೊಂದು ಸವಲತ್ತುಗಳನ್ನು, ಸೌಕರ್ಯಗಳನ್ನು ದಯಪಾಲಿಸಿದ್ದಾನೆ ಮತ್ತು ಅವರ ಕೆಲವು ಪೂರ್ವಜರು ವೈಯುಕ್ತಿಕವಾದ ಸ್ವಾತಂತ್ರ್ಯಗಳನ್ನು ಪಡಕೊಂಡವರಾಗಿದ್ದು ಅವರನ್ನು ಮಾದರಿಗಳನ್ನಾಗಿ ಉಪಯೋಗಿಸಿಕೊಳ್ಳಲಾಗಿದೆ ಎಂದು ತೊರಿಸಿಕೊಡುತ್ತಾನೆ. ಅವರಿಗೆ ಅನುಗುಣವಾದ ಆಶೀರ್ವಾದಗಳು ದೊರೆತವು. ಆದರೆ, ದೇವರು ಈ ಅಭಿಮಾನದ ಆಶೀರ್ವಾದಗಳನ್ನು ಯಾವುದೇ ಅರ್ಥದಲ್ಲಿ ಅವರಿಗೆ ಮುಂದುವರಿಸುವ ಹಂಗುಳ್ಳವನಾಗಿರಲಿಲ್ಲ, ಹಾಗೂ ಇತರರನ್ನು ಕಡಿಮೆ ಯೋಗ್ಯರೆಂದು ಪರಿಗಣಿಸುವವನಾಗಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ತನ್ನನ್ನು ಉಪಯೋಗಿಸಿಕೊಳ್ಳದವರಿಗೆ ತನ್ನ ದಯೆಯನ್ನು ಮುಂದುವರಿಸದೇ ಅದನ್ನು ಇತರರೆಡೆಗೆ ತಿರುಗಿಸುವುದು ಕರ್ತನಿಗೆ ಸಮಂಜಸವಾಗಿತ್ತು. (ರೋಮಾಪುರ– 9, 10 ಮತ್ತು 11ನೇ ಅಧ್ಯಾಯಗಳು)

ಇನ್ನೂ ಹೆಚ್ಚಾಗಿ, ತನ್ನ ದಯೆಯು ಸ್ವಾಭಾವಿಕ ಇಸ್ರಾಯೇಲ್ಯರಿಗೆ ಯಾವ ಪರಿಣಾಮವನ್ನುಂಟು ಮಾಡಬಹುದೆಂದು ದೇವರು ಮುಂಚಿತವಾಗಿಯೇ ತಿಳಿದಿದ್ದನು ಎಂಬುದನ್ನು ನಾವು ಕಂಡುಕೊಳ್ಳಬೇಕೆಂದು ಅಪೋಸ್ತಲನು ಬಯಸುತ್ತಾನೆ; ಅವರು ದೇವರ ಆಶೀರ್ವಾದಗಳನ್ನು ಅನುಭವಿಸಿದ ನಂತರ ಇನ್ನೂ ಹೆಚ್ಚಿನ ("ಒಂದು ಅಂಶ"ವನ್ನು ಹೊರತುಪಡಿಸಿ – ರೋಮಾ. 9:27–32) ಆಶೀರ್ವಾದಗಳನ್ನು ಅಂದರೆ ನೀಡ ಬಯಸುವ ಪರಮೋಚ್ಚ ಆಶೀರ್ವಾದ ಅಂದರೆ ರಚನೆಗೊಂಡ ನೂತನ ಸೃಷ್ಟಿಯು "ಉನ್ನತ ಕರೆಯೆಂಬ ಜಯಮಾಲೆ"ಯನ್ನು ಪಡೆಯುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ಇದನ್ನು ವಿಶದಗೊಳಿಸುವ ಸಲುವಾಗಿ ಆತನು ಇಸಾಕನ ಎರಡು ಮಕ್ಕಳ ಬಗ್ಗೆ ನಮ್ಮ ಗಮನವನ್ನು ಸೆಳೆಯುತ್ತಾನೆ ಮತ್ತು ನೂರಾರು ವರ್ಷಗಳ ನಂತರ ಉಂಟಾಗಲಿರುವ ಪರಿಸ್ಥಿತಿಗಳ ಬಗ್ಗೆ ತಾನು ಏನನ್ನು ಮುಂಚಿತವಾಗಿಯೇ ತಿಳಿದಿರುವೆನೆಂದು ವಿಶದಪಡಿಸಲು ದೇವರು ರೆಬೆಕ್ಕಳ ಎರಡು ಮಕ್ಕಳಾದ

ಯಾಕೋಬ ಮತ್ತು ಏಸಾವರ ನಡುವೆ ತನ್ನ ಇಚ್ಛಾನುಸಾರವಾದ ಆಯ್ಕೆಯನ್ನು ಮಾಡಿದ್ದಾನೋ ಆ ಅವಳಿ ಮಕ್ಕಳನ್ನು ಮಾದರಿಗಳನ್ನಾಗಿ ಅಂದರೆ ಒಬ್ಬನು ಆತನ ನಂಬಿಗಸ್ತರಾದ ನೂತನ ಸೃಷ್ಟಿಯನ್ನು ಪ್ರತಿನಿಧಿಸುವಂತೆಯೂ, ಮತ್ತೊಬ್ಬನು ಪ್ರಸ್ತುತ ಜೀವನದ ಸಂಗತಿಗಳನ್ನು ಆರಿಸಿಕೊಳ್ಳುವ ಮತ್ತು ಅವರ ಪರಲೋಕದ ಸೌಕರ್ಯಗಳನ್ನು ಭೂಲೋಕದ ಒಳ್ಳೆಯ ಸಂಗತಿಗಳಿಗೆ ಮಾರಿಬಿಡುವ (ಏಸಾವನು ಕೇವಲ ಊಟಕ್ಕಾಗಿ ತನ್ನ ಚೊಚ್ಚಲತನವನ್ನೇ ಮಾರಿಕೊಂಡಂತೆ) ಸ್ವಾಭಾವಿಕ ಇಸ್ರಾಯೇಲ್ಯರನ್ನು ಪ್ರತಿನಿಧಿಸುವಂತೆಯೂ ಮಾಡಿದನು. ಯಾಕೋಬ ಮತ್ತು ಏಸಾವರ ಪ್ರಕರಣದಲ್ಲಿ, ಜಯಶಾಲಿಗಳ ಮಾದರಿಯಾಗಿರುವ ಯಾಕೋಬನ ಆಯ್ಕೆಯು ಆತನಿಗೆ ದುಬಾರಿಯಾದರೂ ಅದು ಖಂಡಿತವಾಗಿಯೂ ಆತನಿಗೆ ಆಶೀರ್ವಾದದಾಯಕವಾಗಿತ್ತು; ಆದರೆ, ಪರಲೋಕದ ಸಂಗತಿಗಳಿಗೆ ಬದಲಾಗಿ ಲೌಕಿಕ ಸಂಗತಿಗಳನ್ನು ಆಯ್ದುಕೊಳ್ಳುವ ಸ್ವಾಭಾವಿಕ ಮನಸ್ಸಿನ ವರ್ಗದವರಿಗೆ ಮಾದರಿಯಾಗುವ ಏಸಾವನ ಆಯ್ಕೆಯು ಆತನಿಗೆ ಒಂದುವೇಳೆ ಯಾವುದೇ ಹಾನಿಯನ್ನು ಉಂಟುಮಾಡುವುದಾಗಿರಲಿಲ್ಲ. ಆತನು ನಿತ್ಯವಾದ ಸಂಕಟವನ್ನು ಅನುಭವಿಸಬೇಕಿತ್ತೆನ್ನುವುದಲ್ಲ ಅಥವಾ ಅದರ ಪರಿಣಾಮವಾಗಿ ಪ್ರಸ್ತುತ ಜೀವಿತದಲ್ಲಿ ಆತನು ಕಷ್ಟವನ್ನು ಅನುಭವಿಸ ಬೇಕಿತ್ತೆನ್ನುವುದಲ್ಲ. ಆದರ ಬದಲಾಗಿ ಆತನು ಪ್ರಾಪಂಚಿಕ ರೀತಿಯಲ್ಲಿ ಆಶೀರ್ವದಿಸಲ್ಪಟ್ಟನು. ಸ್ವಾಭಾವಿಕ ಜನರು ಇಂದು ಹೊಂದುವ ಆಶೀರ್ವಾದಗಳನ್ನು ಅವನು ಹೊಂದಿದನು. ಆದರೆ ಇವುಗಳು ಅವರ ಆತ್ಮೀಕ ಹಿತಕ್ಕೆ ಹೆಚ್ಚು ಒಳಿತಲ್ಲದ ಕಾರಣ ನೂತನ ಸೃಷ್ಟಿಗಳಿಂದ ಕರ್ತನು ಕೃಪಾಪೂರ್ಣನಾಗಿ ಇವುಗಳನ್ನು ತಡೆದನು. ಯಾಕೋಬನೂ ಕೂಡ ಈ ತರಗತಿಯವರಿಗೆ ಮಾದರಿಯಾಗುವಂತೆ ತ್ಯಾಗದ ಹತಾಶೆ ನಿರಾಶೆಗಳಿಂದಾಗಿ ಕೆಲವು ಲೌಕೀಕ ಆಶೀರ್ವಾದಗಳು ಅವನಿಗೆ ತಡೆಹಿಡಿಯಲ್ಪಟ್ಟವು. ಆದಾಗ್ಯೂ, ಯಾಕೋಬನು ಅನುಭವಿಸಿದ ಅನೇಕ ಸಂತೋಷ ಮತ್ತು ಆಶೀರ್ವಾದಗಳನ್ನು ಏಸಾವನು ಅನುಭವಿಸದಿದ್ದರೂ ಅವನು ನೂತನ ಸೃಷ್ಟಿಗಳು ಪ್ರಸ್ತುತದಲ್ಲಿ ಅನುಭವಿಸುತ್ತಿರುವ ಪರೀಕ್ಷೆಗಳು ಮತ್ತು ನಿರಾಶೆಗಳ ಮಧ್ಯದಲ್ಲಿ ಶಾಂತಿ, ಸಂತೋಷ ಮತ್ತು ಆಶೀರ್ವಾದಗಳನ್ನು ಬಹುಶಃ ಏಸಾವನು ಮೆಚ್ಚಿಕೊಳ್ಳುತ್ತಿದ್ದಿಲ್ಲ. ಪ್ರಾಕೃತ ಮನುಷ್ಯನು ಇವುಗಳನ್ನು ತಿಳಿಯದವನಾಗಿದ್ದಾನೆ.

"ಯಾಕೋಬನನ್ನು ಪ್ರೀತಿಸಿದೆನು, ಏಸಾವನನ್ನು ದ್ವೇಷಿಸಿದೆನು" (ರೋಮಾ. 9:13) ಎಂಬ ಹೇಳಿಕೆಯು ಕೆಲವರಿಗೆ "ಕಠಿಣ ಹೇಳಿಕೆಯಾಗಿದೆ." ಯಾಕೆಂದರೆ ದ್ವೇಷಿಸಿದೆನು ಎಂಬ ಪದವು ಮಾನವ ಮನಸ್ಸು ನಿರ್ಣಯಿಸುವಂತೆ ವೈರತ್ವವನ್ನೊಳಗೊಂಡಂತೆ ತೋರಿಬರುತ್ತದೆ ಮತ್ತು ಇದು ಅನ್ಯಾಯವೆನಿಸುತ್ತದೆ. ಏಸಾವನು ಇತರ ಜನರಿಗಿಂತ ಹೆಚ್ಚು ಕೇಡುಂಟುಮಾಡಿದನೋ, ಆತನು ಯಾರಿಗಾದರೂ ಒಳ್ಳೆಯದು ಅಥವಾ ಕೆಟ್ಟದ್ದು ಮಾಡುವ ಮೊದಲೇ ಅದು ಆತನಿಗೆ ಹುಟ್ಟಿನಿಂದಲೇ ಅಂಟಿಕೊಂಡು ಬಂದದ್ದಾಗಿದೆ ಎನ್ನುವುದು ವಿವೇಚನೆಯ ವಿಷಯವಾಗಿದೆ. ದ್ವೇಷಿಸು ಎಂಬ ಪದವು ನಿಶ್ಚಯವಾಗಿ "ಕಡಿಮೆಯಾಗಿ ಪ್ರೀತಿಸು" (ಧರ್ಮೋ. 21:15–17) ಎಂಬ ಅರ್ಥವನ್ನು ಸೂಚಿಸುತ್ತದೆ. ಇದರಲ್ಲಿರುವ ಭಾವನೆಯೆಂದರೆ, ಯಾಕೋಬನಿಗೆ ದೇವರು ಹೆಚ್ಚಿನ ಒಲವನ್ನು ತೋರಿದನು ಮತ್ತು ಏಸಾವನಿಗೆ ಕಡಿಮೆ ಒಲವನ್ನು ತೋರಿದನು; ಅಪೋಸ್ತಲನು ತೋರಿಸುವಂತೆ ಇವರಿಬ್ಬರೂ ಇಸ್ರಾಯೇಲಿನ ಸ್ವಾಭಾವಿಕ ಮತ್ತು ಆತ್ಮೀಕ ಮಾದರಿಯ ಪ್ರತಿಛಾಯೆಗಳಾಗಿದ್ದಾರೆ. ಸ್ವಾಭಾವಿಕ ಇಸ್ರಾಯೇಲ್ಯರಿಗೆ ದೇವರ ದಯೆಯು ಏಸಾವನಲ್ಲಿ ಪ್ರತಿನಿಧಿಸುತ್ತದೆ. ಇದು ನಂತರ ಜನಿಸಿದ ಯಾಕೋಬನಲ್ಲಿ ಪ್ರತಿನಿಧಿಸುವ ಆತ್ಮೀಕ ಒಲವಿಗಿಂತ ಕಡಿಮೆಯಾದುದು. ಈ ಆಲೋಚನೆಯೊಂದಿಗೆ ಎಲ್ಲವೂ ಸಾಮರಸ್ಯವುಳ್ಳದ್ದು, ಏಕರೂಪತೆಯಿಂದ ಕೂಡಿರುವುದೂ ಆಗಿವೆ.

## "ಈ ಒಂದು ನಿಜ ಉದ್ದೇಶಕ್ಕಾಗಿಯೇ ನಾನು ನಿನ್ನನ್ನು ಉನ್ನತ ಸ್ಥಾನಕ್ಕೆ ತಂದಿದ್ದೇನೆ"

### "Even for this very purpose have I raised thee up"

ಆತನ ಈ ವಾದ ವಿಷಯವನ್ನು ರುಜುವಾತು ಪಡಿಸುವಂತೆ ದೇವರು ಈ ವರೆಗೆ ತನ್ನ ಅಧಿಕಾರ, ಚಕ್ರಾಧಿಪತ್ಯ ಇವುಗಳನ್ನು ಮಾನವಜಾತಿಯ ಎಲ್ಲಾ ಸಂಗತಿಗಳಲ್ಲಿ ಪ್ರಯೋಗಿಸಿದ್ದಾನೆ. ಮತ್ತು ಅದನ್ನು ಉಪಯೋಗಿಸುವ ತನ್ನ ಹಕ್ಕನ್ನು ಪೂರ್ಣವಾಗಿ ಪ್ರತಿಪಾದಿಸಿದ್ದಾನೆ. ಅಪೋಸ್ತಲನು ಇಸ್ರಾಯೇಲ್ಯರ ವಿಮೋಚನೆಯ ಕಾಲದಲ್ಲಿ ಐಗುಪ್ತರ ರಾಜನಾಗಿದ್ದ ಫರೋಹನ ಪ್ರಕರಣವನ್ನು ಉದಾಹರಿಸುತ್ತಾನೆ. ಆತನು ದೇವರ ಮಾತುಗಳನ್ನು ಮೋಶೆಯ ಮೂಲಕ ಹೀಗೆ ಉಲ್ಲೇಖಿಸುತ್ತಾನೆ (ವಿಮೋ. 9:16) "ನಾನು ನಿನ್ನಲ್ಲಿ ನನ್ನ ಶಕ್ತಿಯನ್ನು ತೋರಿಸಿ ನನ್ನ ಹೆಸರನ್ನು ಲೋಕದಲ್ಲೆಲ್ಲಾ ಪ್ರಖ್ಯಾತಪಡಿಸಬೇಕೆಂಬ ಉದ್ದೇಶದಿಂದಲೇ ನಿನ್ನನ್ನು ಉನ್ನತ ಸ್ಥಾನಕ್ಕೆ ತಂದಿದ್ದೇನೆಂದು ಹೇಳಿದೆನೆಂಬುದಾಗಿ ಶಾಸ್ತ್ರೋಕ್ತಿ ಉಂಟು. ದೇವರು ಯಾರನ್ನು ಕರುಣಿಸಿದರೂ ಯಾರನ್ನು ಕಠಿಣಪಡಿಸಿದರೂ ಅದೆಲ್ಲವು ಆತನ ಇಷ್ಟಾನುಸಾರವಾಗಿಯೇ ಇದೆ ಎಂಬುದು ಇದರಿಂದ ತೋರಿಬರುತ್ತದೆ" (ರೋಮಾ. 09:17,18).

ಒಮ್ಮೆ ಫ್ರೆಂಚ್ ಸರ್ಕಾರವು ಮಾನವರ ಮೇಲೆ ಭಯವು ಎಷ್ಟರ ಮಟ್ಟಿನ ಪರಿಣಾಮವನ್ನುಂಟು ಮಾಡುವುದೆಂಬ ಪ್ರಯೋಗ ಮಾಡುವಂತೆ ನ್ಯಾಯಬದ್ಧ ಶಿಕ್ಷೆಗೆ ಒಳಗಾಗಿದ್ದ ಕೆಲವು ಕೈದಿಗಳನ್ನು ವಿಜ್ಞಾನಿಗಳ ವಶಕ್ಕೆ ಒಪ್ಪಿಸಿತು. ಅವರಲ್ಲಿ ಒಬ್ಬಾತನನ್ನು ಒಂದು ಸಣ್ಣ ಕೋಣೆಯಲ್ಲಿರಿಸಿ, ಕಳೆದ ರಾತ್ರಿ ಆ ಕೋಣೆಯಲ್ಲಿ ಒಬ್ಬ ಕೈದಿ ಕಪ್ಪು ಸಿಡುಬಿನಿಂದ ಮರಣ ಹೊಂದಿದನೆಂದೂ, ಬಹುಶಃ ಈತನಿಗೂ ಸಹಾ ಅದೇ ಕಾಯಿಲೆ ಉಂಟಾಗಿ ಬೆಳಗಾಗುವ ಮುನ್ನ ಸಾಯಬಹುದೆಂದು ಹೇಳಲಾಯಿತು. ಆ ಕೋಣೆಯಲ್ಲಿ ಯಾವ ಸಿಡುಬಿನ ಖಾಯಿಲೆಯವನೂ ಇರಲಿಲ್ಲ. ಆದರೂ ಅವರ ಭವಿಷ್ಯವಾಣಿ ನಿಜವಾಗಿ ಬೆಳಗಾಗುವುದರೊಳಗಾಗಿ ಆ ಕೈದಿಯು ತೀರಿಕೊಂಡಿದ್ದನು. ಮತ್ತೊಬ್ಬನ ಕಣ್ಣಿಗೆ ಪಟ್ಟಿಕಟ್ಟಿ, ಆತನ ತೋಳುಗಳನ್ನು ತೆಳುವಾದ ತೆರೆಯ ಮೂಲಕ ತೂರಿಸಲಾಯಿತು. ಅಂದರೆ ರಕ್ತನಾಳಕ್ಕೆ (ನಾಡಿಗೆ) ಒಂದು ಸಣ್ಣ ಗಾಯಮಾಡಿ ಅದರಿಂದ ಸುರಿಯುವ ರಕ್ತದಿಂದ ಎಷ್ಟು

ಸಮಯದಲ್ಲಿ ಒಬ್ಬಾತ ಸಾಯಬಹುದೆಂದು ಕಂಡು ಹಿಡಿಯುವಂತೆ ಆತನು ವಿಜ್ಞಾನದ ಹಿತಕ್ಕಾಗಿ ರಕ್ತಸ್ರಾವದಿಂದ ಸಾಯಬೇಕಾಗಿದೆ ಎಂದು ಆತನಿಗೆ ತಿಳಿಸಲಾಯಿತು. ಆತನಿಗೆ ಸ್ವಲ್ಪವೇ ಪರಚಿ ಸ್ವಲ್ಪ ಮಾತ್ರ ರಕ್ತ ಬರುವಂತೆ ಮಾಡಲಾಯಿತು. ಆದರೆ ಬಿಸಿರಕ್ತವು ಆತನ ಧಮನಿಯ–ಮೂಲಕ ಹೊರಹರಿಯುತ್ತಿರುವಂತೆ ಭಾಸವಾಗುವಂತೆ ಉಗುರು ಬೆಚ್ಚಗಿನ ನೀರನ್ನು ಹರಿಸಿ ಮತ್ತು ಅದು ಒಂದು ಪಾತ್ರೆಗೆ ತೊಟ್ಟಿಕ್ಕುವ ಶಬ್ಧವನ್ನು ಆತನು ಕೇಳುವಂತೆ ವ್ಯವಸ್ಥೆಯನ್ನು ಮಾಡಲಾಗಿತ್ತು. ಆತನು ಸಹಾ ಕೆಲವು ಘಂಟೆಗಳಲ್ಲಿಯೇ ತೀರಿಕೊಂಡನು. ಕಾನೂನು ಪಾಲಿಸುವ ಪ್ರಜೆಗಳಿಂದ ಇಂತಹ ಚಿಕಿತ್ಸಾಕ್ರಮಕ್ಕೆ ಯಾರೂ ನೈತಿಕ ಬೆಂಬಲ ಸೂಚಿಸಲಾರರು. ಆದರೆ, ಈ ಇಬ್ಬರೂ ಮರಣದಂಡನೆಗೆ ಗುರಿಯಾಗಿರುವುದರಿಂದ ಈ ಪ್ರಯೋಗಮಾಡಿರುವುದನ್ನು ಯಾರೂ ಸಹಾ ತಪ್ಪು ಎಂದು ಖಂಡಿಸಲು ಸಾಧ್ಯವಿಲ್ಲ. ಅದರಂತೆ, ಮಾನವ ಕುಟುಂಬದ ಬಗ್ಗೆ ಕರ್ತನ ವ್ಯವಹಾರಗಳು ಸಹಾ ಇರುತ್ತವೆ; ಮಾನವನು ದೇವರೊಂದಿಗೆ ವಿಧೇಯನಾಗಿ ಮುಂದುವರೆದಿದ್ದರೆ, ಆತನು ಮರಣ ದಂಡನೆಯಿಂದ ಮುಕ್ತನಾಗಿರುತ್ತಿದ್ದನು; ಹೀಗೆ ಉಳಿದವರಿಗೂ ಸಹಾ ದೈವೀಕ ನಿಮಯಗಳ ಅಡಿಯಲ್ಲಿ ಈಗ ದೊರಕದ ಕೆಲವು ಹಕ್ಕುಗಳು ದೊರೆಯುತ್ತಿದ್ದವು. ಒಂದು ಜನಾಂಗವಾಗಿ ನಾವೆಲ್ಲರೂ ಪಾಪದ ಶಿಕ್ಷೆಗೆ ತುತ್ತಾಗಿದ್ದೇವೆ (ರೋಮಾ. 5:12). ದೇವರು ತನ್ನ ಶಕ್ತಿ ಮತ್ತು ವಿವೇಕವನ್ನು ಈ ಅಪರಾಧಿಗಳಲ್ಲಿ ಕೆಲವರಿಗೆ ಒಂದು ರೀತಿಯಲ್ಲಿ,ಮತ್ತೆ ಕೆಲವರಿಗೆ ಮತ್ತೊಂದು ರೀತಿಯಲ್ಲಿ ತನ್ನ ಆಯ್ಕೆಗನುಸಾರ ತೋರಿಸಲು ಸಂತೋಷಿಸುತ್ತಾನೆ. ನಾವು ಇದನ್ನು ಈಗಾಗಲೇ ಅಮಾಲೇಕ್ಯರು, ಹಿತ್ತೀಯರು ಮತ್ತು ಕಾನಾನ್ಯರ ವಿಷಯದಲ್ಲಿ ನೋಡಿದ್ದೇವೆ. ಇಸ್ರಾಯೇಲ್ಯರು ಇವರುಗಳನ್ನು ನಾಶಪಡಿಸಬೇಕೆಂಬ ಆಜ್ಞೆ ಹೊಂದಿದ್ದರೂ ಇಸ್ರಾಯೇಲ್ಯರು ದೇವರ ಭವಿಷ್ಯದ ನಂಬಿಗಸ್ತರಿಗೆ ಮಾದರಿಯಾಗಿದ್ದಾರೆ ಮತ್ತು ಅವರ ಶತೃಗಳು ಇಚ್ಛಾಪೂರ್ವಕ ಪಾಪಿಗಳ ಮತ್ತು ಮುಂದಿನ ಯುಗದಲ್ಲಿ ನೀತಿಗೆ ವಿರುದ್ಧವಾಗಿ ನಡೆಯುವವರಿಗೆ ಮಾದರಿಯಾಗಿದ್ದಾರೆ. ನಾವು ಸೊದೋಮ್ ಗೋಮೋರ ಮತ್ತು ಯೆರಿಕೋ ಪಟ್ಟಣಗಳ ನಾಶನದ ಸಮಯದಲ್ಲಿಯೂ, ಪಿಡುಗಿನಿಂದ ಸಹಸ್ರಾರು ಇಸ್ರಾಯೇಲ್ಯರನ್ನು ಉಡುಗಿಸಿದಾಗಲೂ ಮತ್ತು ಮಂಜೂಷವು ವಾಲಿದಾಗ ಉಜ್ಜೀಯನು ಅದನ್ನು ಕೈಚಾಚಿ ಮುಟ್ಟಿದ್ದು ದೇವರ ನಿಯಮವನ್ನು ಉಲ್ಲಂಘಿಸಿ ಅದರ ಪವಿತ್ರತೆಯನ್ನು, ದೇವರ ಅಧಿಕಾರವನ್ನು ಭಗ್ನಪಡಿಸಿದ ಪ್ರಯುಕ್ತ ಆತನು ವಧಿಸಲ್ಪಟ್ಟಾಗಲೂ ಇದೇ ನಿಯಮವನ್ನು ನೋಡುತ್ತೇವೆ.

ಕರ್ತನು ಫರೋಹನನ್ನು ಉಪಯೋಗಿಸಿಕೊಂಡಿದ್ದು, ಮನುಷ್ಯರ ಮತ್ತು ಪ್ರಾಣಿಗಳ ಚೊಚ್ಚಲಾದವುಗಳನ್ನು ಸಂಹರಿಸಿದ್ದು ಮತ್ತು ಐಗುಪ್ತದ ಮೇಲೆರಗಿ ಬಂದ ನಾನಾ ರೀತಿಯ ಆಪತ್ತುಗಳು, ಕೊನೆಯದಾಗಿ ಐಗುಪ್ತರ ದಂಡು ಕೆಂಪು ಸಮುದ್ರದಲ್ಲಿ ಮುಳುಗಿಹೋದದ್ದು ಇವುಗಳೆಲ್ಲವೂ ಈ ದೃಷ್ಟಾಂತದ ಸಾಲಿನಲ್ಲಿಯೇ ಅವೆ. ಮಾನವ ಜಾತಿಯ ಭಾಗವಾಗಿರುವ ಐಗುಪ್ತರು ಮರಣಾಧೀನರಾಗಿದ್ದಾರೆ ಮತ್ತು ಸ್ವಲ್ಪವೂ ಅನ್ಯಾಯ ಇಲ್ಲದಂತೆ ಅವರೊಡನೆ ದೇವರು ವರ್ತಿಸುವುದು ಆತನ ಘನತೆ, ಗಾಂಭೀರ್ಯವನ್ನು ಎಲ್ಲೆಡೆ ಹಬ್ಬಿಸುವುದಕ್ಕಾಗಿ ಹಾಗೂ ಈ ಅಧಿಕಾರಯುಕ್ತ ಶಕ್ತಿಯನ್ನು ಸಾಂಕೇತಿಕ ಇಸ್ರಾಯೇಲ್ಯರನ್ನು ವಿಮೋಚಿಸುವ ಸಂದರ್ಭದಲ್ಲಿ ತೋರ್ಪಡಿಸಿದ್ದಾನೆ. ಅದೇ ರೀತಿಯಲ್ಲಿ, ಬೇರೊಂದೆಡೆಯಲ್ಲಿ ದೇವರು ಮರಣಾಧೀನರಾದ ಅಬ್ರಹಾಮ, ಮೋಶೆ ಮತ್ತು ಇತರರಿಗೆ ಯಥೇಚ್ಚವಾದ ದಯೆಯನ್ನು ತೋರಿಸಿದ್ದಾನೆ ಮತ್ತು ಅವರ ಮೂಲಕ ತನ್ನ ಭವಿಷ್ಯದ ಉದ್ಧೇಶಿತ ಒಳ್ಳೆಯ ಸಂಗತಿಗಳನ್ನು ಪೂರ್ಣವಾಗಿಯೂ ಮತ್ತು ಸಾಕ್ಷಾತ್ತಾಗಿಯೂ ನೆರವೇರಿಸುವ ಸಲುವಾಗಿ ಅವರನ್ನು ಮಾದರಿಗಳನ್ನಾಗಿ ಉಪಯೋಗಿಸಿದ್ದಾನೆ. ಅಂದರೆ ಅಬ್ರಹಾಮ, ಮೋಶೆ, ಫರೋಹ ಮತ್ತಿತರರನ್ನು ಮರಣದಂಡನೆಯಿಂದ ಬಿಡುಗಡೆ ಗೊಳಿಸುವುದಾಗಿರಲಿಲ್ಲ. ಆದರೆ ದೇವರು ವಿಮೋಚನೆ ಮತ್ತು ಬಿಡುಗಡೆ ಕಾರ್ಯವನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಪೂರ್ಣವಾಗಿ ಕಾರ್ಯಗತಗೊಳಿಸುವನು.

ದೇವರು ತನ್ನ ಅಪರಾಧಿ ಜೀವಿಗಳೊಂದಿಗೆ ಚಕ್ರಾಧಿಪತಿಯ ಅಧಿಕಾರವನ್ನು ಉಪಯೋಗಿಸಿದನೆಂದು ಸ್ಪಷ್ಟವಾಗಿ ಕಂಡುಕೊಂಡ ಮೇಲೆ ಮತ್ತು ಆತನು ಕೆಲವರು ಒಂದು ರೀತಿಯ ಅನುಭವವನ್ನು ಹೊಂದಿಕೊಳ್ಳಬೇಕು, ಮತ್ತೆ ಕೆಲವರು ಮತ್ತೊಂದು ರೀತಿಯ ಅನುಭವವನ್ನು ಹೊಂದಿಕೊಳ್ಳಬೇಕೆಂದು ಆತನು ಆಯ್ಕೆಮಾಡಿದ ನಂತರ ಅಪೋಸ್ತಲನು ಹೇಳುವಂತೆ ಇವುಗಳೆಲ್ಲವೂ ಈ ಸಂಗತಿಯ ದೃಷ್ಟಾಂತ ಪಾಠಗಳಾಗಿದ್ದು ಸುವಾರ್ತಾಯುಗದಲ್ಲಿನ ನೂತನ ಸೃಷ್ಟಿಯ ಮಹಾ ಆಯ್ಕೆಗಾಗಿ ಸಿದ್ಧತೆಮಾಡುವುದಾಗಿದೆಂದು ಕಂಡುಕೊಳ್ಳುವಾಗ ಈ ಯಾವುದೇ ಆಯ್ಕೆಯ ಸಂಧರ್ಭದಲ್ಲಿಯೂ ದೇವರು ಬಲವಂತ ಮಾಡಲಿಲ್ಲ ಮತ್ತು ಮಾನವ ಇಚ್ಚೆಯನ್ನು ಉಲ್ಲಂಘಿಸಲಿಲ್ಲ ಎಂಬುದನ್ನೂ ನಾವು ಕಂಡುಕೊಳ್ಳಬೇಕಾಗುತ್ತದೆ. ಇದರಿಂದ, ಎಂದಾದರೂ ಮಾನವ ಇಚ್ಚೆಗೆ ವಿರುದ್ಧವಾಗಿ ಬಲವಂತ ಮಾಡುವುದು ದೇವರ ಕಾರ್ಯಕ್ರಮಗಳಿಗೆ ವ್ಯತಿರಿಕ್ತವಾಗಿದೆ ಎಂಬ ತೃಪ್ತಿ ನಮಗುಂಟಾಗುತ್ತದೆ. ಅಬ್ರಹಾಮ, ಇಸಾಕ, ಯಾಕೋಬ ಮತ್ತು ಮೋಶೆ ಇವರುಗಳನ್ನು ತನ್ನ ಮಾದರಿ ಅಥವಾ ದೃಷ್ಟಾಂತಗಳನ್ನಾಗಿ ಆಯ್ಕೆಮಾಡಿಕೊಳ್ಳುವಲ್ಲಿ ದೇವರು ಸಾಮಾನ್ಯವಾಗಿ ತನ್ನ ಯೋಜನೆ ಮತ್ತು ಪ್ರಕಟನೆಗನುಸಾರವಾದ ಮನಸ್ಸುಳ್ಳವರನ್ನು ಮಾತ್ರವೇ ಆಯ್ಕೆಮಾಡಿದ್ದಾನೆ. ಆದರೂ ಅವರು ಬೇರೊಂದು ರೀತಿಯಲ್ಲಿ ಯೋಚಿಸಿದಲ್ಲಿ ಅವರ ಮೇಲೆ ಯಾವ ಬಲವಂತಿಕೆಯನ್ನೂ ಮಾಡಲಾಗುತ್ತಿದ್ದಿಲ್ಲ. ಅದೇ ರೀತಿಯಲ್ಲಿ ವಿರೋಧ ಪಂಗಡದವರನ್ನು, ವಿರೋಧ ತತ್ವಗಳನ್ನು ಉದಾಹರಿಸುವ ಸಲುವಾಗಿ ಅಂದರೆ ಇಷ್ಮಾಯೇಲ್, ಏಸಾವ, ಕಾನಾನ್ಯರು, ಸೊದೋಮ್ಯರು, ಐಗುಪ್ತರು ಮುಂತಾದವರನ್ನು ಆಯ್ಕೆಮಾಡುವಾಗ ದೇವರು ಸ್ವಾಭಾವಿಕವಾದ ಧೋರಣೆಯುಳ್ಳವರನ್ನಷ್ಟೇ ಆಯ್ದುಕೊಂಡನು. ನಾವಿಲ್ಲಿ ಒತ್ತಿ ಹೇಳ ಬಯಸುವುದೇನೆಂದರೆ, ದೇವರು ಅಬ್ರಹಾಮ, ಇಸಾಕ ಮತ್ತು ಮೋಶೆ ಮುಂತಾದವರಿಗೆ ಒತ್ತಾಯ ಮಾಡದೇ ಇದ್ದಂತೆಯೇ ಕೆಡುಕನ್ನು, ಕೇಡಿನ ಉದ್ದೇಶಗಳನ್ನು ನೆರವೇರಿಸದವರ ಬಗ್ಗೆಯೂ ಯಾವ ಒತ್ತಾಯವನ್ನು ಮಾಡದೆ ಅವರ ಸ್ವಾಭಾವಿಕ ಗುಣಗಳಂತೆ ವರ್ತಿಸಲು ಬಿಟ್ಟುಬಿಟ್ಟನು.

ದೇವರು ನಿರ್ಧಿಷ್ಟವಾದ ವರ್ಗದವರೊಂದಿಗೆ ಅವರ ಒಲವಿಗೆ ತಕ್ಕಂತೆ ವರ್ತಿಸಿದನು.

ದೇವರು ಫರೋಹನಿಗೆ "ಇದೇ ಉದ್ದೇಶಕ್ಕಾಗಿ ನಾನು ನಿನ್ನನ್ನು ಉಳಿಸಿದ್ದೇನೆ" ಎಂದು ದೃಢವಾಗಿ ಹೇಳುವಾಗ ನಾವು ದೇವರು ಫರೋಹನಲ್ಲಿ ಒಂದು ಕೆಟ್ಟ ಗುಣವನ್ನು ಉಂಟು ಮಾಡಿದ್ದಾನೆಂದು, ಅಂದರೆ ಆತನು ಫರೋಹನನ್ನು ಒತ್ತಾಯಪೂರ್ವಕವಾಗಿ ಒಬ್ಬ ದುಷ್ಟ ವ್ಯಕ್ತಿಯಾಗುವಂತೆ ಮಾಡಲೆಂದೇ ಉಳಿಸಿದ್ದಾನೆಂದು ನಾವು ಭಾವಿಸಲಾಗದು. ಐಗುಪ್ತದ ಸಿಂಹಾಸನಕ್ಕೆ ಇರುವ ಅನೇಕ ವಾರಸುದಾರರಲ್ಲಿ, ಅವರ ಪದ್ಧತಿಯ ಪ್ರಕಾರ ಮಧ್ಯ ಬರುವ ರಾಜ ಕುಟುಂಬದ ಕೆಲವು ವ್ಯಕ್ತಿಗಳ ಮರಣದ ಮೂಲಕ ದೇವರು ಈ ಪ್ರತ್ಯೇಕವಾದ ಫರೋಹನು ಸಿಂಹಾಸನವನ್ನು ಏರುವಂತೆ ಮಾಡಿದನು. ಯಾಕೆಂದರೆ, ಆತನಲ್ಲಿ ಅಂಥಹ ಮೊಂಡ ಬುದ್ಧಿ ಇದ್ದು ದೇವರೊಡನೆ ಮತ್ತು ಇಸ್ರಾಯೇಲ್ಯರೊಡನೆ ಆತನು ಮಾಡಿದ ಹೋರಾಟವು ಎಲ್ಲಾ ಉಪದ್ರವಗಳನ್ನು ಬರಮಾಡಲು ಸಮರ್ಥಿಸುವುದಾಗಿತ್ತು. ದೇವರು ಇದನ್ನು ಇಸ್ರಾಯೇಲ್ಯರ ಒಳಿತಿನ ಗುರುತಾಗಿ ಮಾತ್ರವಲ್ಲದೆ, ಇದಕ್ಕೂ ಹೆಚ್ಚಾಗಿ ಈ ಉಪದ್ರವಗಳು ಈ ಸುವಾರ್ತಯುಗದ ಅಂತ್ಯದಲ್ಲಿ ಉಂಟಾಗಲಿರುವ ಉಪದ್ರವಗಳ ಮೊದಲನೆಯ ಮೂರು ಮತ್ತು ಕಡೆಯ ಏಳು ಉಪದ್ರವಗಳು (ಪ್ರಕಟನೆ15:1) ಪೂರ್ವಛಾಯೆಯನ್ನು ತೋರಿಸುವ ಪೂರ್ವೋದ್ದೇಶ ವುಳ್ಳದ್ದಾಗಿತ್ತು.

ಈ ಫರೋಹನ ದೃಷ್ಟಾಂತದ ನಿರ್ಧಿಷ್ಟವಾದ ಲಕ್ಷಣವು ಅಂದರೆ "ಯೆಹೋವನು ಫರೋಹನ ಹೃದಯವನ್ನು ಕಠಿಣ ಮಾಡಿದ್ದರಿಂದ ಆತನು ಆ ಜನರನ್ನು ಹೋಗಗೊಡಿಸಲಿಲ್ಲ" ಎಂಬ ಹೇಳಿಕೆಗಳು ಹಲವರಿಗೆ ಗಲಿಬಿಲಿ ಉಂಟು ಮಾಡುವುದಾಗಿದೆ. ಮೊದಲಿಗೆ ಇದು ನಾವು ಈಗ ತಾನೇ ಹೇಳಿದ "ದೇವರು ಮನುಷ್ಯನ ಚಿತ್ತದ ಮಧ್ಯೆ ಪ್ರವೇಶಿಸುವುದಿಲ್ಲ' ಎಂಬ ಮಾತಿಗೆ ವ್ಯತಿರಿಕ್ತವಾಗಿ ಕಂಡುಬರುತ್ತದೆ. ಹೀಗಿರುವಾಗ, ನಾವು ನಂಬುವುದೇನೆಂದರೆ, ದೇವರು ಯಾವ ರೀತಿಯನ್ನು ಫರೋಹನ ಹೃದಯವನ್ನು ಕಠಿಣಪಡಿಸಿದ್ದಲ್ಲದೆ ಫರೋಹನು ಹೆಚ್ಚು ಮೊಂಡನಾಗುವಂತೆ ದೇವರು ಯಾವ ಪದ್ಧತಿಯನ್ನು ಅನುಸರಿಸಿದನು ಎಂದು ನಾವು ನೆನಪು ಮಾಡುವಾಗ ಈ ಕೊರತೆಯು ಸರಿಹೋಗುತ್ತದೆ. ದೇವರ ಒಳ್ಳೆಯತನ, ಇಸ್ರಾಯೇಲ್ಯರ ವಿಮೋಚನೆಗಾಗಿ ಮಾಡುವ ಪ್ರಾರ್ಥನೆಗಳನ್ನು ಕೇಳುವ ದೇವರ ಒಪ್ಪಿಗೆ ಮತ್ತು ಅವರನ್ನು ಬಿಡುಗಡೆ ಗೊಳಿಸುವನೆಂಬ ಆತನ ವಾಗ್ದಾನದ ನೆರವೇರಿಕೆ, ದೇವರ ಕರುಣೆ ಇವುಗಳು ಫರೋಹನನ್ನು ಕಠಿಣಗೊಳಿಸಿತು. ಇಸ್ರಾಯೇಲ್ಯರನ್ನು ಹೋಗಗೊಡಿಸುವ ತನಕ ದೇವರು ಮೊದಲನೆಯ ಉಪದ್ರವ ಅಥವಾ ಪೀಡನೆಯನ್ನು ಮುಂದುವರಿಸಿದ್ದರೆ ಆ ಒಂದೇ ಉಪದ್ರವವು ಇಸ್ರಾಯೇಲ್ಯರ ಬಿಡುಗಡೆಗೆ ಸಾಕಾಗುತ್ತಿತ್ತು. ಆದರೆ, ದೇವರು ಆ ಜನರನ್ನು ಒಂದು ಉಪದ್ರವದಿಂದ ಪಾರುಮಾಡುವಾಗ ಫರೋಹನು ಇನ್ನು ಮುಗಿಯಿತು, ಹೆಚ್ಚಿನದೇನೂ ಬರಲಾರದು ಎಂದು ಭಾವಿಸುತ್ತಿದ್ದನು. ಹಂತ ಹಂತವಾದ ದೇವರ ಕರುಣೆಯು ಈ ರೀತಿಯಲ್ಲಿ ಆತನನ್ನು ಹೆಚ್ಚು ಹೆಚ್ಚಾದ ಹಗೆಯುಳ್ಳವನಾಗುವಂತೆ ಮಾಡಿತು. ಈ ದೃಷ್ಟಿಕೋನದಲ್ಲಿ ಫರೋಹನ ಸ್ವಾತಂತ್ರ್ಯಚಿತ್ತದ ಮುಕ್ತತೆಯು ಸ್ಪಷ್ಟವಾಗಿ ಸೂಚಿತವಾಗುತ್ತದೆ. ದೇವರು ಕೇಡಿನೊಂದಿಗೆ ಯಾವ ರೀತಿಯಲ್ಲಿಯೂ ಸಹಕರಿಸುವುದಿಲ್ಲವೆಂದು ಇಲ್ಲಿ ಸ್ಪಷ್ಟಪಡಿಸುತ್ತಾನೆ. "ಆತನ ಎಲ್ಲಾ ಕಾರ್ಯಗಳೂ ಪರಿಪೂರ್ಣವಾಗಿವೆ". ದೇವರ ಒಳ್ಳೆಯತನವು ಮಾನವರನ್ನು ಪಶ್ಚಾತ್ತಾಪಕ್ಕೆ ನಡೆಸುವುದಾದರೂ, ಕೆಲವೊಮ್ಮೆ ಪ್ರಸ್ತುತ ಅಸಮರ್ಪಕ ಸ್ಥಿತಿಯಿಂದಾಗಿ ಅವರ ಮೇಲೆ ವಿರುದ್ಧವಾದ ಪ್ರಭಾವವನ್ನುಂಟು ಮಾಡಬಹುದಾಗಿದೆ.

## ಆಯ್ಕೆಗೊಂಡ ಇಸ್ರಾಯೇಲ್ಯ ಜನಾಂಗವು
## The Nation of Israel Elected

ದೇವರು ಈ ಜಗತ್ತಿನ ಎಲ್ಲ ಜನಾಂಗಗಳಲ್ಲಿ ಅಧ್ಯಾತ್ಮಿಕ ಪ್ರತಿರೂಪವಾಗುವಂತೆ ಇಸ್ರಾಯೇಲ್ಯರನ್ನು ತನ್ನ ಸ್ವಜನರನ್ನಾಗಿ ಆಯ್ದುಕೊಂಡನು ಎಂಬುದನ್ನು ಸತ್ಯವೇದದ ಪರಿಚಯವಿರುವ ಎಲ್ಲರೂ ಒಪ್ಪಿಕೊಳ್ಳುತ್ತಾರೆ. "ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ" ಎಂಬ ಆಮೋಸ 3:2ರ ಹೇಳಿಕೆಯು ಈ ಅಂಶಕ್ಕೆ ಅನುಸಾರವಾಗಿದೆ. ಯೆಶಾಯನ ಬಾಯಿಯಲ್ಲಿ ಪಾರಸಿಯರ ಅರಸನಾಗಿದ್ದ ಕೋರೇಷನಿಗೆ "ನಾನು ಆರಿಸಿಕೊಂಡ ಇಸ್ರಾಯೇಲಿಗಾಗಿ ಹೆಸರು ಹಿಡಿದು ನಿನ್ನನ್ನು ಕರೆದಿದ್ದೇನೆ" (ಯೆಶಾ.45:4) ಎಂದು ಹೇಳುತ್ತಾನೆ. ಆತನು ಇಸ್ರಾಯೇಲ್ಯರನ್ನು ಸೆರೆಯಿಂದ ಹಿಂದಿರುಗಿಸಬೇಕಿತ್ತು. "ನನ್ನ ಸೇವಕನಾದ ಯಾಕೋಬಿಗಾಗಿ ನಾನು ಆದುಕೊಂಡ ಇಸ್ರಾಯೇಲಿಗಾಗಿ ಹೆಸರು ಹಿಡಿದು ನಿನ್ನನ್ನು ಕರೆದಿದ್ದೇನೆ" ಈ ಹೇಳಿಕೆಯಲ್ಲಿ ನಮಗೆ ಕಂಡುಬರುವ ಸತ್ಯಸಂಗತಿಯೇನೆಂದರೆ, ಒಂದು ನಮೂನೆಯಾಗಿ ಕ್ರಿಸ್ತನಿಗೆ ಅನ್ವಯವಾಗುವಂಥಾದ್ದು ಮತ್ತು ಹೆಸರಿಗೆ ಮಾತ್ರವಿರುವ ಅಧ್ಯಾತ್ಮಿಕ ಇಸ್ರಾಯೇಲ್ಯರನ್ನು ರಹಸ್ಯಾರ್ಥವುಳ್ಳ ಬಾಬೇಲಿನವರಿಂದ ಬಿಡುಗಡೆಗೊಳಿಸತಕ್ಕದ್ದು. ಇದು ಸಾಂಕೇತಿಕ ಇಸ್ರಾಯೇಲ್ಯರು "ಆಯ್ಕೆ"ಗೊಂಡವರೆಂಬ ಸತ್ಯವು ಇಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲ. ಅಪೋಸ್ತಲನು ತನ್ನ ಸ್ಪಷ್ಟವಾದ ಮತ್ತು ಖಚಿತವಾದ ವಾದದಲ್ಲಿ ಸ್ವಾಭಾವಿಕ ಇಸ್ರಾಯೇಲ್ಯರಿಂದ ಅಧ್ಯಾತ್ಮಿಕ ಇಸ್ರಾಯೇಲ್ಯರತ್ತ ದೇವರ ಕೃಪೆಯು ಹರಿದುಹೋದದನ್ನು ಗೌರವಿಸುವವನಾಗಿ (ರೋಮಾ. 9–11) ದೇವರ ಕೃಪೆಯು ಕೆಲವು ಸಮಯ ಮಟ್ಟಿಗೆ ಸ್ವಾಭಾವಿಕ ಇಸ್ರಾಯೇಲ್ಯರ ಮೇಲಿತ್ತು, ಯಾಕೆಂದರೆ ದೇವರು ಆಯ್ದಕೊಂಡ ನಮೂನೆಯವರನ್ನು ವಿಶೇಷ ಕೃಪಾಸ್ಥಳದಿಂದ ನಿರಾಕರಿಸುತ್ತಾನೆ ಮತ್ತು ಆ ಸ್ಥಳಕ್ಕೆ ಯಾಕೋಬನನ್ನು ಪ್ರತಿನಿಧಿಸುವ ಮತ್ತೊಂದು ಆಧ್ಯಾತ್ಮಿಕ ಇಸ್ರಾಯೇಲ್ಯರನ್ನು ಕರೆತರುತ್ತಾನೆ ಎಂಬುದನ್ನು ಆತನು ಮುಂತಿಳಿದಿದ್ದು ಅದನ್ನು ಅವರಿಗೆ ಮುಂತಿಳಿಸಿದ್ದನ್ನು ಅವರು ಸಹಿಸದಾದರು.

ಇಸ್ರಾಯೇಲ್ಯರು ದೇವರ ಕೃಪಾಪಾತ್ರ ಅಥವಾ ಆಯ್ಕೆಗೊಂಡ ಜನಾಂಗವಾಗಿ ಸುತ್ತಮುತ್ತಲಿನ ಬೇರೆಲ್ಲಾ ಜನಾಂಗದವರಿಗಿಂತ ಹೆಚ್ಚಾದ ಎಲ್ಲಾ ರೀತಿಯ ಸೌಕರ್ಯಗಳನ್ನು ಹೊಂದಿದವ ರಾಗಿದ್ದಾರೆಂಬುದನ್ನು ಅಪೋಸ್ತಲನು ಇಲ್ಲಿ ನಮಗೆ ತೋರಿಸಿಕೊಡುವವನಾಗಿದ್ದಾನೆ. ಅವರಿಗೆ ವಾಗ್ದಾನಗಳು

ಅನ್ವಯಿಸುತ್ತವೆ. ಅವರಿಗೆ ಎಣ್ಣೆಮರದ ಕೊಂಬೆಗಳಾಗಿರುವಂತ ವಾಗ್ದಾನವು ಕೊಡೋಣವಾಯ್ತು. ಆದರೆ ಯಾರು ಅಬ್ರಹಾಮ, ಇಸಾಕ ಮತ್ತು ಯಾಕೋಬ್ಯರನ್ನು ಪ್ರತಿನಿಧಿಸುವ ಮೂಲಬುಡ ಮತ್ತು ಬೇರಂತಿರುವ ವಾಗ್ದಾನದಲ್ಲಿ ಸಾಮರಸ್ಯ ಹೊಂದಿಲ್ಲದ ಸಾಂಕೇತಿಕ ಇಸ್ರಾಯೇಲ್ಯರ ಕೃಪಾಸಂಬಂಧವನ್ನು ಕಡಿದುಹಾಕಿದ್ದಾನೆ. "ಇಸ್ರಾಯೇಲ್ಯರು ತಾನು ಬಯಸುವುದನ್ನು ಹೊಂದಿಲ್ಲ; ಆದರೆ ಆಯ್ಕೆಯಾದವರು (ಯೋಗ್ಯರು) (ಯೋಹಾನ1:12,13) ಅದನ್ನು ಹೊಂದಿಕೊಂಡಿದ್ದಾರೆ, ಉಳಿದವರು ಕುರುಡರಾಗಿದ್ದಾರೆ" ಎಂಬ ಅಂಶವನ್ನು ಎತ್ತಿ ತೋರಿಸುತ್ತಾನೆ. ಇಡೀ ಜನಾಂಗವು ಮೂಲದಲ್ಲಿ ದೇವರ ಆಯ್ದ ಕೃಪಾಶೀರ್ವಾದಗಳಿಗಾಗಿ ಆರಿಸಲ್ಪಟ್ಟಿರುವುದಾಗಿದ್ದರೂ ಇದಕ್ಕೆ ತಕ್ಕ ಸಮಯ ಬರುವಾಗ ಪ್ರಾಮಾಣಿಕರು ಮಾತ್ರವೇ ಆತ್ಮೀಕ ಇಸ್ರಾಯೇಲ್ಯರಾಗುವ ಸಮರ್ಪಕ ಹೃದಯ ಸ್ಥಿತಿಯನ್ನು ಹೊಂದಿದವರಾಗಿದ್ದಾರೆ. ಇಂಥವರು ಮಾತ್ರವೇ ನಿಜವಾದ ಆಯ್ಕೆಯಾದ ಜನಾಂಗದವರಾಗಿದ್ದು ಆ ಯುಗದ ಅಂತ್ಯದಲ್ಲಿ ಉನ್ನತಮಟ್ಟದ ಯುಗವನ್ನು ಪ್ರವೇಶಿಸಲಿರುವರು. ಅಂದರೆ ಸೇವಕನ ಮನೆಯಿಂದ ಮಗನ ಮನೆಯವರಾಗಿ ತೇರ್ಗಡೆ ಹೊಂದುವರು.(ಇಬ್ರಿಯ 3:5,6 ಮತ್ತು ಯೋಹಾನ 1:12). ಅಪೋಸ್ತಲನು ಸ್ವಭಾವದಲ್ಲಿ ಅನ್ಯಜನರಾದ ದೇವರು ನಮಗೆ ಸಾಂಕೇತಿಕ ಇಸ್ರಾಯೇಲ್ಯರಿಗೆ ಮಾಡಿರುವ ಒಡಂಬಡಿಕೆಗಳು ಮತ್ತು ವಾಗ್ದಾನಗಳಿಗೆ "ಅಪರಿಚಿತರೂ, ಅನ್ಯರೂ, ಪರದೇಶಿಗಳೂ" ಆಗಿದ್ದು ಈಗ ದೇವರ ಕೃಪಾಶಯದಲ್ಲಿದ್ದೇವೆ, ಅಬ್ರಹಾಮನಂತೆಯೇ ನಂಬಿಕೆ ಮತ್ತು ವಿಧೇಯತೆಯನ್ನು ಬೆಳೆಸಿಕೊಂಡಿದ್ದೇವೆ, ಮತ್ತು ಕ್ರಿಸ್ತನ ಮದಲಗಿತ್ತಿಯೆಂದು, ಅಬ್ರಹಾಮನ ನಿಜವಾದ ಸಂತಾನವೆಂಬ ಎಣಿಕೆ ಯಾಗಬೇಕಾಗಿದ್ದು, ದೇವರ ಮೂಲ ಯೋಜನೆಯಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ವಾಗ್ದಾನಗಳಲ್ಲಿ ಮುರಿದ ಕೊಂಬೆಗಳ ಸ್ಥಾನವನ್ನು ತೆಗೆದುಕೊಳ್ಳಬೇಕಾಗಿದೆ. ಈ ಮುರಿದ ಕೊಂಬೆಗಳನ್ನು ಈ ಸುವಾರ್ತಾ ಯುಗದಲ್ಲಿ ವೈರಿಗಳೆಂದು ಎಣಿಸಲ್ಪಟ್ಟರು. ಆದರೆ ಆಯ್ಕೆಯ ವಿಷಯದಲ್ಲಿ ಅವರು ಪಿತೃಗಳ ಸಲುವಾಗಿ ಪ್ರಿಯರೆನಿಸುತ್ತಾರೆ. "ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪ ಪಡುವವನಲ್ಲ." (ರೋಮಾ. 11:28,29).

ಈ ರೀತಿಯಲ್ಲಿ ಮೂಲ ಆಯ್ಕೆಯ ಕೆಲವು ವೈಶಿಷ್ಟ್ಯಗಳು ಸ್ವಾಭಾವಿಕ ಇಸ್ರಾಯೇಲ್ಯರಲ್ಲೇ ಉಳಿಯುತ್ತವೆ. ತಾವು ದೇವರ ಯೋಜನೆ-ಯಲ್ಲಿ ಮುಖ್ಯವಾದ ಕೃಪೆಹೊಂದಿದವರು, ಆಯ್ಕೆಗೊಂಡ ಆತ್ಮೀಕ ಇಸ್ರಾಯೇಲ್ಯರು ಎಂಬ ನಿರಾಕರಣೆಯ ಎದುರು ನಿಲ್ಲುವುದಿಲ್ಲ. ಅಬ್ರಹಾಮ, ಇಸಾಕ, ಯಾಕೋಬ ಮತ್ತು ಪ್ರವಾದಿಗಳಿಗೆ ನೀಡಿದ ವಾಗ್ದಾನಗಳು ಅವರಲ್ಲಿ ನೆರವೇರಬೇಕಾಗಿದ್ದು ಅವರುಗಳು ಪ್ರಪಂಚದಲ್ಲೆಲ್ಲಾ ಧರ್ಮಯುಗದ ಕಾಲದಲ್ಲಿ ಅಧ್ಯಾತ್ಮಿಕ ರಾಜ್ಯದ ಪ್ರತಿನಿಧಿಗಳು ಅಥವಾ "ರಾಜಕುಮಾರ"ರಂತೆ ಮೆರೆಯಬೇಕಾಗಿರುವುದರಿಂದ, ನಿಸ್ಸಂದೇಹವಾಗಿ ಇದು ಹೆಚ್ಚಾದ ಸ್ವಾಭಾವಿಕ ಇಸ್ರಾಯೇಲ್ಯರ ಒಳಿತಿಗಾಗಿ ಕಾರ್ಯವೆಸಗುತ್ತದೆ. ಅವರುಗಳು ಇಂದು ಪರಾಧೀನತೆ ಮತ್ತು ಅಂಧಕಾರದ ಪರಿಸ್ಥಿತಿಯಲ್ಲಿದ್ದಾರೆ. ಅವರುಗಳು ಈ ಪ್ರಪಂಚದ ಉಳಿದವರಿಗಿಂತ ಹಿಂದಿನ ಕಾಲದ ತಮ್ಮ ಸ್ವಂತ ನಾಯಕರುಗಳ ಹೊಂದಿಕೆಗೆ ಸಿದ್ಧರಾಗಿ ಬರುತ್ತಾರೆ; ಈ ರೀತಿಯಲ್ಲಿ ಇಸ್ರಾಯೇಲ್ಯರು ಒಂದು ಜನಾಂಗವಾಗಿ ಎಲ್ಲಾ ಜನಾಂಗಗಳ ಪ್ರಮುಖ ಸ್ಥಾನವನ್ನು ಧರ್ಮಯುಗದ ಆರಂಭದಲ್ಲಿಯೇ ವಹಿಸಿಕೊಳ್ಳುತ್ತಾರೆ. "ದೇವರು ಎಲ್ಲರಿಗೂ ಕರುಣೆಯನ್ನು ತೋರಿಸಬೇಕೆಂಬ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನೂ ಅವಿಧೇಯತೆಯೆಂಬ ದುಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ" (ರೋಮಾ. 11:32).

## ಆಯ್ಕೆಗೊಂಡ ನೂತನ ಸೃಷ್ಟಿ

## The Elect New Creation

ಹಿಂದಿನ ಕಾಲದ ಆಯ್ಕೆಗಳ ಬಗ್ಗೆ ಸ್ವಲ್ಪಮಟ್ಟಿನ ಜ್ಞಾನವನ್ನು ಹೇಗೂ ಪಡಕೊಂಡ ನಂತರ ನಾವೀಗ ನಮ್ಮ ವಸ್ತುವಿಷಯದ ಮುಖ್ಯವಾದ ಲಕ್ಷಣಕ್ಕೆ ಬಂದಿದ್ದೇವೆ. ಅವರಲ್ಲಿ ಅನೇಕರು ನೂತನ ಸೃಷ್ಟಿಯ ಆಯ್ಕೆ ಎಂಬ ದೇವರ ಮಹಾ ಕಾರ್ಯದ ಪೂರ್ವಛಾಯೆಯು ಪ್ರತಿರೂಪವಾಗಿದ್ದರು ಎಂದು ಅರ್ಥಮಾಡಿಕೊಂಡಿದ್ದೇವೆ. ಈ ಆಯ್ಕೆಯು ಆಯ್ಕೆಯಾಗದವರಿಗೆ ಯಾವ ಹಾನಿಯನ್ನು ಉಂಟುಮಾಡದು ಎಂಬ ಗ್ರಹಿಕೆಯನ್ನು ನಾವೀಗಾಗಲೇ ಕಂಡು ಕೊಂಡಿದ್ದೇವೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಇದು ಆಯ್ಕೆಗೊಳ್ಳದವರಿಗೆ ಸೂಕ್ತಕಾಲದಲ್ಲಿ ಆಶೀರ್ವಾದವನ್ನುಂಟು ಮಾಡುತ್ತದೆ ಎಂಬ ಅಭಿಪ್ರಾಯವನ್ನು ನೀಡುವುದಾಗಿದೆ. ಈ ಸಂಬಂಧದಲ್ಲಿ ನಾವು ಹೇಳುವುದೇನಂದರೆ, ಇತರರಿಗೆ ಅನುಗ್ರಹ ಮಾಡದೆ ಇರುವಂತಹ ವಿಶೇಷ ಕೃಪೆಯನ್ನು ಕೆಲವರಿಗೆ ಮಾತ್ರ ದಯಪಾಲಿಸುವದರಲ್ಲಿಯಾಗಲೀ, ಹಾಗೆಯೇ ಕೃಪೆಗೆಪಾತ್ರರಾದವರನ್ನು, ಕಡಿಮೆ ದಯೆಹೊಂದುವವರನ್ನು ಅಥವಾ ದಯೆಹೊಂದಿಲ್ಲದವರನ್ನು ಆಶೀರ್ವದಿಸಲಿಕ್ಕೆ ಸದಾವಕಾಶವನ್ನು ಉಪಯೋಗಿಸದೇ ಹೋದರೂ ಪ್ರೀತಿಯಾಗಲೀ ನ್ಯಾಯವಾಗಲೀ ಅಡ್ಡಿಪಡಿಸುವುದಿಲ್ಲ. ಕೃಪೆ ಅಥವಾ ದಯೆ ಎಂಬುದರ ಅರ್ಥವು ಇದೇ ಆಗಿದೆ: ವಿಶೇಷವಾಗಿ ಕರೆಯಲ್ಪಡದವರಿಗೆ ಬಯಸದೆ ಇರುವ ಏನನ್ನಾದರೂ ಮಾಡುವುದಕ್ಕೆ ನ್ಯಾಯವು ಹಕ್ಕಿನಿಂದ ಕೇಳಲಾಗುವುದಿಲ್ಲ ಮತ್ತು "ಕೃಪೆ' ಮತ್ತು "ದಯೆ' ಎಂಬ ಈ ಶಬ್ದಗಳು ಸುವಾರ್ತಾ ಯುಗದ ಪೂರ್ತಿ ಆಯ್ದ ವರ್ಗದ ಬಗ್ಗೆ ದೇವರವಾಕ್ಯದಲ್ಲಿ ಪದೇ ಪದೇ ಪುನರುಚ್ಚಿಸಲ್ಪಟ್ಟಿದೆ. "ಕೃಪೆಯಿಂದಲೇ ನೀವು ರಕ್ಷಿಸಲ್ಪಟ್ಟಿದ್ದೀರಿ" ಮುಂತಾದ ದೇವರ ವಾಕ್ಯಗಳು ದೇವರಿಗೆ ಆದಾಮನ ಸಂತತಿಯಲ್ಲಿ ಯಾರನ್ನಾದರೂ ಮರಣದ ಶಿಕ್ಷೆಯಿಂದ ಮರಳಿ ಪಡೆಯುವ ಅಥವಾ ನಿತ್ಯಜೀವದ ಯಾವುದೇ ಅವಕಾಶವನ್ನು ನೀಡುವ ಹಂಗು ಇರಲಿಲ್ಲ ಎಂಬುದರ ಬಗ್ಗೆ ನಮಗೆ ಆಳವಾದ ಪರಿಣಾಮವನ್ನುಂಟುಮಾಡುವುದಾಗಿವೆ; ಇದಕ್ಕಿಂತ ಹೆಚ್ಚಾಗಿ ತನ್ನ ಯಾವುದೇ ಸೃಷ್ಟಿಯ ಬಗ್ಗೆ ದೇವರಿಗೆ ಅವರನ್ನು ನೂತನ ಸೃಷ್ಟಿಯ ಸದಸ್ಯತ್ವದ ಉನ್ನತ ಕರೆ ನೀಡಬೇಕೆಂಬ ಹಂಗೂ ಇದ್ದಿಲ್ಲ. ಇವುಗಳೆಲ್ಲವೂ ಮಹಾ ದಯೆ "ಕೃಪೆಯಿಂದ ಕೃಪೆಗೆ" ಅಥವಾ ದಯೆಗೆ ದಯೆಯನ್ನು ಕೊಡಿಸುವುದಾಗಿದೆ. ಈ ಅಲೋಚನೆಯು ಯಾರ ಮನಸ್ಸಿಗೆ ಸ್ಪಷ್ಟವಾಗಿ

ಹೊಳೆಯುವುದಿಲ್ಲವೋ ಅಂಥವರು ಖಂಡಿತವಾಗಿಯೂ ಈಗ ನಡೆಯುತ್ತಿರುವುದನ್ನು ಮೆಚ್ಚಿಕೊಳ್ಳಲಾರರು.

ಅಪೋಸ್ತಲನಾದ ಪೇತ್ರನು ನಾವು ಒಂದು ವರ್ಗದವರಾಗಿದ್ದು "ತಂದೆ ದೇವರ ಭವಿಷದ್ ಜ್ಞಾನಕ್ಕನುಸಾರ ಆಯ್ಕೆಗೊಂಡಿದ್ದೇವೆಂಬ"ಭರವಸೆಯನ್ನು ನೀಡುವವನಾಗಿದ್ದಾನೆ. ಆತನ ಈ ಪ್ರಕಟನೆಯೊಂದಿಗೆ ನಿಲ್ಲಿಸುವುದಿಲ್ಲ. ಹೇಗೂ ಅದನ್ನು ಮುಂದುವರಿಸುತ್ತಾ "ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವುದಕ್ಕೂ ಯೇಸು ಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗುವುದಕ್ಕೂ" (1ಪೇತ್ರ1:2) ಎಂದು ಮುಂದುವರೆಸುತ್ತಾನೆ. ದೇವರು ನೂತನ ಸೃಷ್ಟಿಯನ್ನು ಒಂದು ವರ್ಗವಾಗಿ ಮುಂತಿಳಿದಿದ್ದನು ಮತ್ತು ಆತನು ಯೇಸು ಕ್ರಿಸ್ತನ ರಕ್ತದ ಮೂಲಕ ಅವರನ್ನು ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸುವುದನ್ನು ಸಹಾ ಮುಂತಿಳಿದಿದ್ದನು ಈ ವರ್ಗದ ಸಾಕಷ್ಟು ಜನರು ವಿಧೇಯರಾಗಿರುತ್ತಾರೆ ಮತ್ತು ಸತ್ಯದ ಮೂಲಕ ಶುದ್ಧತೆಯನ್ನು ಪಡೆದುಕೊಳ್ಳುತ್ತಾರೆ ಎಂಬುದನ್ನು ತಿಳಿದಿದ್ದನು. ಸಭೆಯ ಶಿರಸ್ಸಿನ ಹೊರತಾಗಿ ಆಯ್ದವರ್ಗದ ಪ್ರತಿ ವ್ಯಕ್ತಿಗಳ ಬಗ್ಗೆ ದೇವರ ವಾಕ್ಯದಲ್ಲಿ ದೇವರ ಮುಂತಿಳಿಸುವಿಕೆಯ ಅಭಿಪ್ರಾಯವು ಕಂಡುಬರುವುದಿಲ್ಲ. ಯೇಸುವು ತನ್ನ ಆಯ್ಕೆ ಎಂಬುದನ್ನು ಮಾತ್ರ ದೇವರು ಮುಂತಿಳಿದಿದ್ದನು. ಇದರಿಂದ ನಾವು ಆಯ್ದ ವರ್ಗದ ವ್ಯಕ್ತಿಗಳನ್ನು ಗುರುತಿಸುವ ಬಗ್ಗೆ ದೇವರ ಸಾಮರ್ಥ್ಯವು ಮಿತಿಯುಳ್ಳದ್ದಾಗಿದೆ ಎಂದು ತಿಳಿಯಬಾರದು. ಆದರೆ ಈ ದೆಸೆಯಲ್ಲಿ ಆತನ ಅಧಿಕಾರ ಏನಿದೆಯೋ ಅದನ್ನು ಮಾತ್ರವೇ ಪ್ರಕಟಿಸಿದ್ದಾನೆಯೇ ಹೊರತು ಅದನ್ನು ಕಾರ್ಯಗತಗೊಳಿಸುವ ತನ್ನ ಉದ್ದೇಶವನ್ನು ಪ್ರಕಟಿಸಿರುವುದಿಲ್ಲ. ಕ್ರಿಸ್ತನು ಈ ಲೋಕದ ವಿಮೋಚಕನೆಂದು ಆತನನ್ನು ಪ್ರತಿಷ್ಠೆಗೊಳಿಸಲು ದೇವರೇ ಆಜ್ಞಾಪಿಸಿದ್ದಾನೆ. ಇದಕ್ಕಾಗಿ ಕ್ರಿಸ್ತನಿಗೆ ದೊರೆಯುವ ಬಹುಮಾನವೆಂದರೆ ಪ್ರಥಮ ಸದಸ್ಯ, ಶಿರಸ್ಸು, ಕರ್ತ, ನೂತನ ಸೃಷ್ಟಿಯ ಪ್ರಮುಖ ಎಂಬಿವುಗಳು. ಕೆಲವು ನಿರ್ಧಿಷ್ಟ ಸಂಖ್ಯೆಯ ವ್ಯಕ್ತಿಗಳು ಮಾತ್ರವೇ ನೂತನ ಸೃಷ್ಟಿಗಳಾಗಿ ಆತನ ರಾಜ್ಯದಲ್ಲಿ ಆತನ ಜೊತೆ ವಾರಸುದಾರರುಗಳಾಗಿ ಇರಬೇಕೆಂಬ ಆಜ್ಞೆಯನ್ನೂ ಸಹಾ ಆತನು ಹೊರಡಿಸಿದ್ದಾನೆ. ಈ ಆಯ್ಕೆಗೊಂಡವರ ಖಚಿತವಾದ ಸಂಖ್ಯೆಯು ಪ್ರಕಟನೆ ಗ್ರಂಥದಲ್ಲಿ ಹಲವಾರು ಬಾರಿ ನಮೂದಿಸಲ್ಪಟ್ಟಿದೆ (ಪ್ರಕ 7:4, 14:1) ಎಂದು ನಂಬಲು ನಮಗೆ ಸಾಕಷ್ಟು ಕಾರಣಗಳಿವೆ. ಅದೇನೆಂದರೆ ಒಂದು ಲಕ್ಷದ ನಾಲ್ವತ್ತು ನಾಲ್ಕು ಸಾವಿರ ಮಂದಿ "ಮನುಷ್ಯರೊಳಗಿಂದ ವಿಮೋಚಿಸಲ್ಪಟ್ಟರು."

ಲೋಕಕ್ಕೆ ಅಸ್ತಿವಾರವು ಹಾಕುವ ಮೊದಲೇ ಅಂತಹ ಸಮೂಹವೊಂದು ಆಯ್ಕೆಯಾಗಬೇಕೆಂಬ ನಿಷ್ಕರ್ಷೆ ಅಥವಾ ಪೂರ್ವಭಾವಿ ನಿಶ್ಚಯವುಂಟಾಗಿತ್ತು. ಇದೇ ರೀತಿಯಲ್ಲಿ ಬ್ರಿಟಿಷ್ ಸೈನ್ಯದ ಕೆಲವು ಸೈನಿಕ ತಂಡವನ್ನು "ರಾಜನ ಸ್ವಂತ"ದವರೆಂದು ಪೂರ್ವಭಾವಿಯಾಗಿ ನಿಶ್ಚಯ ಮಾಡುವರೆಂದು ನಾವು ಗ್ರಹಿಸಿಕೊಳ್ಳಬಹುದು. ಇದರಲ್ಲಿ ನಿರ್ಧಿಷ್ಟವಾದ ಎತ್ತರ ಮತ್ತು ತೂಕವುಳ್ಳ ಬಲಾಢ್ಯರು ಮಾತ್ರವೇ ಒಳಗೊಂಡಿರುತ್ತಾರೆ. ಇವರನ್ನು ಮುಂಚಿತವಾಗಿಯೇ ನಿರ್ಧರಿಸಿರುತ್ತಾರೆ. ಈ ಗುಂಪಿನ ಸಂಖ್ಯೆಯನ್ನು ಸಹಾ ಪ್ರಸ್ತುತ ಸದಸ್ಯರು ಹುಟ್ಟುವ ಮುಂಚೆಯೇ ನಿಗದಿಪಡಿಸಿರುತ್ತಾರೆ. ಈ ತಂಡದ ರಚನೆಗೆ ಅವಶ್ಯವಾಗಿರುವ ದೈಹಿಕ ಸಮರ್ಥನೆ ಮತ್ತು ಸಂಖ್ಯೆಯವರನ್ನು ಮಾತ್ರವೇ ರಾಜ ಶಾಸನದನ್ವಯ ಪ್ರತಿಷ್ಠೆಪಡಿಸಲಾಗುವುದು. ಅದರಂತೆ ಸೃಷ್ಟಿಕರ್ತನ ರಾಜ ಶಾಸನವು ಸಹಾ ದೇವರ ನೂತನ ಸೃಷ್ಟಿಯ ಬಗ್ಗೆ ನಿಗಧಿಪಡಿಸುತ್ತದೆ. ಇದು ಅವರ ದೈಹಿಕ ಅರ್ಹತೆಗಳನ್ನು ತಿಳಿಸದೆ ನೈತಿಕ ಗುಣ ಲಕ್ಷಣಗಳನ್ನು, ಹೃದಯದ ವಿಶಾಲತೆಯನ್ನೂ ತಿಳಿಸುವುದಾಗಿದೆ. "ರಾಜನ ಸ್ವಂತ"ದವರ ಹೆಸರುಗಳನ್ನು ಅಥವಾ ವ್ಯಕ್ತಿಗಳನ್ನು ಮುಂಚಿತವಾಗಿಯೇ ಪ್ರತಿಷ್ಠಿಸಬೇಕಾದ ಅವಶ್ಯಕತೆ ಇಲ್ಲದಿರುವಂತೆ ನಮ್ಮ ಸೃಷ್ಟಿ ಕರ್ತನಿಗೆ ಸಹಾ ಕ್ರಿಸ್ತನೊಂದಿಗೆ ಆತನು ನಿಗದಿ ಪಡಿಸಿದ ಅಳತೆ ಮತ್ತು ಮಿತಿಯಲ್ಲಿ ತನ್ನ ನೂತನ ಸೃಷ್ಟಿಗೆ ಸೇರಲ್ಪಡಲಿರುವ ಹೆಸರುಗಳನ್ನು ಪೂರ್ವ ನಿರ್ಧಾರ ಮಾಡುವ ಅವಶ್ಯಕತೆ ಇರುವುದಿಲ್ಲ.

ಸಾಮಾನ್ಯವಾಗಿ ನೆನಪುಮಾಡುವ ಮತ್ತು ಉಲ್ಲೇಖಿಸುವ ದೇವರ ವಾಕ್ಯದ ಒಂದು ಪರಿಚ್ಛೇದದಲ್ಲಿ "ಆತನು ಯಾರನ್ನು ಮೊದಲು ತಿಳುಕೊಂಡನೋ ಅವರನ್ನು ನೇಮಿಸಿದನು" ಎಂಬ ಮಾತು ನಿರ್ದಿಷ್ಟವಾಗಿ ನಮ್ಮ ಗಮನಕ್ಕೆ ಬರುತ್ತದೆ. ಆದರೆ, ದೇವ ಜನರು ಈ ರೀತಿಯಲ್ಲಿ ದೇವರ ವಾಕ್ಯದ ಒಂದು ಭಾಗವನ್ನು ಮಾತ್ರವೇ ಆರಿಸಿಕೊಂಡು ಅದನ್ನು ಅದರ ನಿಕಟ ಸಾರಾಂಶದಿಂದ ಪ್ರತ್ಯೇಕಿಸಕೂಡದು. ನಾವು ಬರೆದಿರುವ ಆ ಪರಿಚ್ಛೇದದ ಶೇಷಭಾಗದಲ್ಲಿರುವುದನ್ನು ಪೂರ್ಣವಾಗಿ ಓದಿದಾಗ ಇಡೀ ಸಂಗತಿಯು ನಮ್ಮ ಮನಸ್ಸಿಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಅದೇನೆಂದರೆ "ಆತನು ಯಾರನ್ನು ತನ್ನವರೆಂದು ಮೊದಲು ತಿಳಿದುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವುದಕ್ಕೆ ಮೊದಲೇ ನೇಮಿಸಿದನು"(ರೋಮಾ.8:29). [ಅಂದರೆ ಆತನ ಮಗನ ನಕಲು ಪ್ರತಿ].

ಆತನೇ ಎಲ್ಲರಿಗಿಂತ ಹಿರಿಯನಾಗಿರಬೇಕು ಮತ್ತು ಉಳಿದವರು ಆತನ ಸಾರೂಪ್ಯದಲ್ಲಿರಬೇಕು ಎಂದು ಪೂರ್ವಕಾಲದಲ್ಲಿನ ಆಯ್ಕೆಯ ಸಿದ್ಧಾಂತದಲ್ಲಿ ಪ್ರವೀಣರಾಗಿದ್ದವರು ಇಂತಹ ಪೂರ್ವ ನಿರ್ಧಾರವನ್ನು ಸಾಮಾನ್ಯವಾಗಿ ಬೇರೆಯಾಗಿಯೇ ಅರ್ಥಮಾಡಿಕೊಳ್ಳುತ್ತಾರೆ. ಅವರ ಬೋಧನೆ ಮತ್ತು ವಿಚಾರಗಳಿಗನುಗುಣವಾಗಿ ಈ ಪರಿಚ್ಛೇದವನ್ನು ಆತನು ಯಾರನ್ನು ಮೊದಲೇ ತಿಳಿದಿದ್ದನೋ ಅವರನ್ನು ನಿತ್ಯವಾದ ನರಕದ ಶಿಕ್ಷೆಯಿಂದ ಪಾರಾಗುವಂತೆ ಮತ್ತು ಮಹಿಮೆಯಲ್ಲಿ ನಿತ್ಯವಾದ ಆಶೀರ್ವಾದಗಳನ್ನು ಅನುಭವಿಸುವಂತೆ ಮೊದಲೇ ನಿರ್ಧರಿಸಿದನು ಎಂದು ಓದಿಕೊಳ್ಳಬೇಕಾಗುತ್ತದೆ. ಇಂತಹ ದೃಷ್ಟಿಕೋನವು ಸತ್ಯವೇದದ ಭಾಷೆಯಲ್ಲಿರುವ ವಿವೇಚನಾಪೂರ್ವಕವಾದ ಮತ್ತು ಸಮಂಜಸವಾದ ಹೇಳಿಕೆಗೆ ಎಷ್ಟೋ ವ್ಯತ್ಯಾಸ ವುಳ್ಳದ್ದಾಗಿದೆಯಲ್ಲವೆ?. ದೇವರು ಆತನು ಪಡೆದ ಒಬ್ಬನೇ ಮಗನು ಮಾತ್ರವೇ ನೂತನ ಸೃಷ್ಟಿಯ ಶಿರಸ್ಸಾಗಬೇಕೆಂದು ಮೊದಲೇ ನಿರ್ಧರಿಸಿದ್ದನು ಮತ್ತು ನಮ್ಮಲ್ಲಿ ಯಾರನ್ನಾದರೂ ಕರೆಯುವ ಬಹಳ ಮುಂಚೆಯೇ ತನ್ನ ಮಗನ ಸ್ವಾರೂಪ್ಯವನ್ನು

ಪಡೆಯದ ಯಾರೂ ಆ ನೂತನ ಸೃಷ್ಟಿಯ ಸದಸ್ಯರಾಗಬಾರದೆಂದೂ ಆತನು ನಿರ್ಧರಿಸಿದ್ದನು. ಆಯ್ಕೆಯ ಬಗ್ಗೆ ದೇವರ ವಾಕ್ಯದ ಸಿದ್ಧಾಂತವು ಎಷ್ಟೊಂದು ಸುಂದರ, ಎಷ್ಟೊಂದು ವಿವೇಚನಾಪೂರ್ವಕ!. ಇಂತಹ ಆಯ್ಕೆಯ ವಿವೇಕ, ನ್ಯಾಯ ಮತ್ತು ಪ್ರೀತಿಯನ್ನು ಮತ್ತು ಕ್ರಿಸ್ತನ ಮಟ್ಟದ ಗುಣಲಕ್ಷಣ ಮತ್ತು ಕ್ರಿಸ್ತನೊಂದಿಗೆ ಈ ಲೋಕದ ಎಲ್ಲಾ ಕುಟುಂಬಗಳ ಆಶೀರ್ವಾದದಲ್ಲಿ ಪಾಲುದಾರರಾಗುವಂತೆ ದೇವರು ವಿನ್ಯಾಸಗೊಳಿಸಿರುವ ಮಹಾ ಕಾರ್ಯ ಇವುಗಳ ಬಗ್ಗೆ ಪ್ರಶ್ನಿಸುವವರು ಯಾರಿದ್ದಾರೆ?

## "ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟವರು"

**ರೋಮಾ. 8:28–30**

## "Called Ones According to His Purpose"

**Rom. 8:28-30**

ಈ ಪ್ರಸ್ತಾಪದ ಬಗ್ಗೆ ವಿಚಾರಮಾಡುವಾಗ ನಾವು ಅಪೋಸ್ತಲನ ಈ ಮಾತುಗಳನ್ನು ಮತ್ತು ತರ್ಕಬದ್ಧವಾದ ಉದ್ದೇಶಗಳನ್ನು ಜಾಗರೂಕತೆಯಿಂದ ಅನುಸರಿಸುವುದಕ್ಕಿಂತ ಹೆಚ್ಚಿನದೇನೂ ಮಾಡಲಾರೆವು. ಇದರ ಹಿಂದಿನ ವಚನಗಳಲ್ಲಿ (22,23) ನಾವು ನೂತನ ಸೃಷ್ಟಿಯನ್ನು ಕರೆಯುವ ದೇವರ ಉದ್ದೇಶವು ಆಶೀರ್ವಾದಗಳನ್ನು ಹೊಂದಿಕೊಳ್ಳುವುದು ಮತ್ತು ಇತರರಿಗೆ ಅಂದರೆ, ಒಟ್ಟಾಗಿ ನೋವಿನಿಂದ ನರಳುವ ಸೃಷ್ಟಿಗಳು, ಮತ್ತು ಈ ಆರಿಸಲ್ಪಟ್ಟ ದೇವರ ಮಕ್ಕಳು ನೂತನ ಸೃಷ್ಟಿಗಳಾಗಿ ಪ್ರಕಟಗೊಳ್ಳುವುದನ್ನು ಕಾಯುತ್ತಿರುವವರಿಗೆ ಈ ಆಶೀರ್ವಾದಗಳನ್ನು ಹಂಚುವುದು ಎಂಬುದನ್ನು ನೋಡುತ್ತೇವೆ (21 ಮತ್ತು 22ನೇ ವಚನಗಳು). ದೇವರು ತನ್ನ ನೂತನ ಸೃಷ್ಟಿಗೆ ಕರೆಯುತ್ತಿರುವ ಈ ವರ್ಗದವರಿಗೆ ಎಲ್ಲವೂ ಅನುಕೂಲಕರ ರೀತಿಯಲ್ಲಿ ಸಾಗುತ್ತಿದೆ ಎಂದು ಅಪೋಸ್ತಲನು ಮುಂದುವರಿಸುತ್ತಾನೆ. ಈಗಿನ ನಿರಾಶೆಗಳಿಗೆ, ಪರೀಕ್ಷೆಗಳಿಗೆ, ಪೀಡನೆಗಳಿಗೆ ಮತ್ತು ಪ್ರಪಂಚದ, ಶಾರೀರಕವಾದ ಮತ್ತು ವೈರಿಯ ವಿರೋಧಗಳಿಗೆ ಇದುವೇ ಅರ್ಥ. ನೀತಿಯ ಶಾಂತಿಕರ ಫಲಗಳನ್ನು ನಮ್ಮಲ್ಲಿ ಕಾರ್ಯಗತಗೊಳಿಸುವ ಸಲುವಾಗಿ ಈ ಅನುಭವಗಳು ವಿನ್ಯಾಸಗೊಂಡಿವೆ. ಈ ರೀತಿಯಲ್ಲಿ ಕರೆಯಲ್ಪಟ್ಟಿರುವ ನಮಗೆ –ಇವುಗಳು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಲ್ಪಡುವದಲ್ಲದೆ ನಿರಂತರ ಪ್ರಭಾವವನ್ನು ದೊರಕಿಸಲು ಮತ್ತು ನಾವು ಯುಕ್ತವಾಗಿ ತವಕಪಡುವ ಮಹಿಮೆಯ ನಿತ್ಯವಾದ ಭಾರವನ್ನು ಇನ್ನೂ ಹೆಚ್ಚಿಸುವಂತೆ ನಮ್ಮಲ್ಲಿ ಕಾರ್ಯವೆಸಗುತ್ತವೆ. ಈ ರೀತಿಯಾಗಿ ಕರೆಯಲ್ಪಟ್ಟವರ ಬಗ್ಗೆ ಎಲ್ಲವೂ ಅನುಕೂಲಕರವಾಗಿ ಕಾರ್ಯವೆಸಗುತ್ತಿರುವುದನ್ನು ಅಪೋಸ್ತಲನು ದೇವರು ನಮಗೆ ಅನುಗ್ರಹಿಸಿರುವುದರಲ್ಲಿ ಗುರುತಿಸುತ್ತಾನೆ. ನಾವು ನಮ್ಮ ಹಿರಿಯ ಸಹೋದರನಲ್ಲಿ ಮತ್ತು ಆತನೊಂದಿಗೆ ಇರುವ ಸಂಬಂಧವನ್ನು ಬಿಟ್ಟು ನಮ್ಮ ಕರೆಯ ಬಗ್ಗೆ ಅಲೋಚಿಸಬಾರದು. ಯಾರೂ ಆತನನ್ನು ಹಿಂದಕ್ಕೆ ಹಾಕಲಾರರು. ಆತನ ಹೆಜ್ಜೆಜಾಡನ್ನು ಗುರುತಿಸಿ ಅದನ್ನು ಅನುಸರಿಸುವುದರಿಂದ ಮಾತ್ರವೇ ನಾವು ಆತನ ಮಹಿಮೆಯ ಪಾಲುದಾರರಾಗಬಹುದಾಗಿದೆ. ಕ್ರಿಸ್ತನ ಸಹೋದರರುಗಳಾದ ಇವರೆಲ್ಲರೂ ನೂತನ ಸೃಷ್ಟಿಯಲ್ಲಿ ಪಾಲುದಾರರಾಗಬೇಕಾದರೆ ಹಿರಿಯ ಸಹೋದರನ ಸ್ವರೂಪಿಗಳಾಗಿರಬೇಕೆಂದು ದೇವರು ಪೂರ್ವನಿರ್ಧಾರ ಮಾಡಿದ್ದಾನೆ. ನಮ್ಮ ತಂದೆಯಾದ ದೇವರು ಕ್ರಿಸ್ತನಲ್ಲಿರುವ ವಿಮೋಚನೆಯನ್ನು ಬೇರೆಲ್ಲಿಯೂ ತೋರದೇ ಆ ಮಹಿಮೆಯನ್ನು ಪಡೆಯಬೇಕೆಂದಿರುವ ಮಾನವ ಕುಟುಂಬದ ಸದಸ್ಯರನ್ನು ನಿರಾಶರನ್ನಾಗಿ ಮಾಡಿದ್ದಾನೆ. ಪೂರ್ವಜರಿಂದ ನಾವುಗಳು ಪಡೆದಿರುವ ಮತ್ತು ನಿಯಂತ್ರಿಸಲಾಗದ ಶಾರೀರಕ ಬಲಹೀನತೆಗಳೆಲ್ಲವೂ ವಿಮೋಚಕನ ತ್ಯಾಗದಲ್ಲಿ ಮರೆಯಾಗಿವೆ. ಈ ಕಾರಣದಿಂದ ದೇವರು ಶರೀರದಲ್ಲಿ ಆತನ ಮಗನ ಸಾರೂಪ್ಯವಾಗುವುದರಲ್ಲಿ ನಾವು ವಿಫಲರಾಗಿರುವುದನ್ನು ಕ್ಷಮಿಸುತ್ತಾನೆ ಮತ್ತು ನಾವು ಹೃದಯದಲ್ಲಿ, ಉದ್ದೇಶಗಳಲ್ಲಿ ಮತ್ತು ಚಿತ್ತದಲ್ಲಿ ಆತನ ಸ್ವರೂಪವಾಗಿ ಕಂಡುಬಂದಲ್ಲಿ ಆತನು ತನ್ನ ಪೂರ್ವ ನಿರ್ಧಾರಕ್ಕನುಸಾರವಾಗಿ ನಮ್ಮನ್ನು ಅಂಗೀಕರಿಸುತ್ತಾನೆ. ಇದಕ್ಕಾಗಿ ನಾವು ನಮ್ಮ ಚಿತ್ತವನ್ನು ನಮ್ಮಿಂದ ಸಾಧ್ಯವಾದ ಮಟ್ಟಿಗೆ ದೈಹಿಕ ನಿಯಂತ್ರಣದ ಮೂಲಕ ಪ್ರಾಮಾಣಿಕರಿಸಿಕೊಳ್ಳಬೇಕು. ನಮ್ಮ ಕರ್ತನಾದ ಯೇಸುವು ಉದ್ದೇಶಪೂರ್ವಕವಲ್ಲದ ನಮ್ಮ ತಪ್ಪುಗಳನ್ನು ತನ್ನ "ಅಪಾರವಾದ ಕೃಪೆಯಿಂದ " ಮರೆಮಾಡುತ್ತಾನೆ.

ಕರೆಯಲ್ಪಟ್ಟ ಈ ವರ್ಗದ ಬಗ್ಗೆ ವಿವರಣೆಯನ್ನು ಮುಂದುವರಿಸುತ್ತಾ ಅಪೋಸ್ತಲನು "ಯಾರನ್ನು ಮೊದಲೇ ನೇಮಿಸಿದನೋ ಅವರನ್ನು ಕರೆದನು; ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು; ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮಾಪದವಿಗೆ ಸೇರಿಸಿದನು" (ವಚನ: 30) ಎನ್ನುತ್ತಾನೆ. ಈ ವಾಕ್ಯವೃಂದವನ್ನು ಸಾಮಾನ್ಯವಾಗಿ ತಪ್ಪಾಗಿ ಅರ್ಥೈಸಲಾಗುತ್ತಿದೆ. ಯಾಕೆಂದರೆ, ಓದುಗರು ಅಪೋಸ್ತಲನು ಹಿಂದಿನ ಅಧ್ಯಾಯದಲ್ಲಿರುವಂತೆ ಇಲ್ಲಿಯೂ ಕ್ರೈಸ್ತ ಅನುಭವಗಳನ್ನು ಶೋಧಿಸುತ್ತಿದ್ದಾನೆ ಎಂದು ಅಭಿಪ್ರಾಯಪಡುತ್ತಾರೆ.ಹಿಂದೆ ನಾವು ಯಾವ ರೀತಿಯಲ್ಲಿ ಕ್ರಿಸ್ತನು ನಮಗೆ ಜ್ಞಾನವೂ ನೀತಿಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನೆಂದು ನೋಡಿದೆವು. ಆದರೆ ಇಲ್ಲಿ ಅಪೋಸ್ತಲನು ವಿರುದ್ಧ ದೃಷ್ಟಿಕೋನವುಳ್ಳವನಾಗಿದ್ದು ಮತ್ತೊಂದು ತುದಿಯಿಂದ ಪ್ರಾರಂಭಿಸುವವನಾಗಿದ್ದಾನೆ. ಇಲ್ಲಿ ಆತನು ಸಭೆಯನ್ನು ಅದರ ಶಿರಸ್ಸಾಗಿರುವ ಕ್ರಿಸ್ತನ ಅಡಿಯಲ್ಲಿ ಅಂತಿಮವಾಗಿ ದೇವರಿಂದ ಆಯ್ದುಕೊಂಡದ್ದೆಂಬದನ್ನು ಪೂರ್ಣವಾಗಿರುವುದನ್ನು ನಿಜಮಹಿಮೆಯಲ್ಲಿರುವುದೆಂಬದನ್ನು ಯೋಚಿಸುತ್ತಾನೆ ಆತನು ನೂತನ ಸೃಷ್ಠಿಯಾದ ಸಭೆಯ ಅಭಿವೃದ್ಧಿಯನ್ನು ಹಿಮ್ಮುಖವಾಗಿ ಹುಡುಕುತ್ತಾನೆ. ದೇವರ ಕೃಪೆಯಿಂದ ಕರೆಯಲ್ಪಟ್ಟವರೇ ಹೊರತು ಬೇರೆ ಯಾರೂ ಮಹಿಮೆಯ ಆಯ್ಕೆಯನ್ನು ತಲುಪಲಾರರೆಂದು ಮತ್ತು ಕರೆಯಲ್ಪಟ್ಟವರೆಲ್ಲರೂ ಮುಂಚಿತವಾಗಿ ನೀತಿನಿರ್ಣಯ ಹೊಂದಿರಬೇಕೆಂಬುದನ್ನು ಆತನು ತೋರಿಸಿಕೊಡುತ್ತಾನೆ. ಯಾಕೆಂದರೆ, ದೇವರು ನಂಬಿಗಸ್ತರನ್ನು ಮಾತ್ರವೇ ಜಯಮಾಲೆ ಹೊಂದಿಕೊಳ್ಳುವ ಓಟಕ್ಕೆ ಕರೆಯುವವನಾಗಿದ್ದಾನೆ. ಈ ನೀತಿನಿರ್ಣಯ ಹೊಂದಿದವರು ಅದನ್ನು ಹೊಂದುವ ಮೊದಲು ಗೌರವಿಸಲ್ಪಟ್ಟವರಾಗಿರಬೇಕು (ಸಾಮಾನ್ಯವಾಗಿ

ಹೇಳುವಂತೆ "ಮಹಿಮೆ" ಹೊಂದಿರುವುದಲ್ಲ) ಆತನ ಬಗ್ಗೆ ಜ್ಞಾನವನ್ನು ಮತ್ತು ಮಾರ್ಗವೂ, ಸತ್ಯವೂ, ಜೀವವೂ ಆಗಿರುವ ಆತನ ಪ್ರೀತಿಯ ಮಗನ ಬಗ್ಗೆ ಅವರಿಗೆ ತಿಳುವಳಿಕೆಯನ್ನು ನೀಡಿರುವ ಗೌರವ.

ಅನೇಕರು ಊಹಿಸಿರುವಂತೆ, ಈಗಿನ ಕಾಲದಲ್ಲಿ ದೇವರ ಕೃಪೆಯ ಬಗ್ಗೆ ತಿಳಿದುಕೊಳ್ಳುವುದೇ ಗೌರವಕ್ಕಿಂತ ಹೆಚ್ಚಿನದು. ಸಾವಿರ ವರ್ಷ ಆಳ್ವಿಕೆಯಯುಗದಲ್ಲಿ ಇಡೀ ಪ್ರಪಂಚಕ್ಕೆ ಮುಕ್ತವಾಗಿರುವ ರಕ್ಷಣೆಯು ದೇವರ ಕೊಡುಗೆಯಾಗಿರುವಂತೆ ದೇವರ ಕೃಪೆಯ ಬಗ್ಗೆ ತಿಳುವಳಿಕೆ ಮತ್ತು ಆತನೊಂದಿಗೆ ಈಗಿನ ಕಾಲದಲ್ಲಿ ಲೋಕದವರಿಗಿಂತ ಮುಂಚಿತವಾದ ಸಂಧಾನದ ಅವಕಾಶವು ಸಹಾ ಒಂದು ವಿಶೇಷವಾದ ಗೌರವವಾಗಿದೆ. ಈ ರೀತಿಯಲ್ಲಿ ಗೌರವಹೊಂದಿದವರಾಗಿ, ವಿಶ್ವಾಸದ ಮೂಲಕ ನೀತಿನಿರ್ಣಯ ಎಂಬ ತಿಳುವಳಿಕೆಯನ್ನು ಹೊಂದಿಕೊಳ್ಳುವುದು ಕರೆಯೊಂದಿಗೆ ಸಾಮರಸ್ಯವುಳ್ಳ ಪರಿಶುದ್ಧತ್ವಕ್ಕೆ ನಡೆಸುವ ಎರಡನೆಯ ಹಂತವೆನಿಸುತ್ತದೆ. ಇದು ಪುನಃ "ನಮ್ಮಲ್ಲಿ ಸಾಕ್ಷಾತ್ಕಾರಗೊಳ್ಳುವ ಪ್ರಾಮಾಣಿಕತೆ"ಗೆ ಮತ್ತು ಖಚಿತವಾಗಿ ಆಯ್ಕೆಗೊಂಡ "ನೂತನಸೃಷ್ಟಿಯ" ಸದಸ್ಯರಾಗಲು ನಮ್ಮನ್ನು ನಡೆಸುವುದಾಗಿದೆ.

## ದೇವರು ನಮ್ಮೊಂದಿಗಿದ್ದರೆ

### "If God Be For Us"

ಈ ಆಯ್ಕೆಯ ಪರಿಗಣನೆಯ ಅನುಸರಣೆಯನ್ನು ಇನ್ನೂ ಮುಂದುವರೆಸುತ್ತಾ, ಅಪೋಸ್ತಲನು ತನ್ನ ಭಾಷೆಯನ್ನು ಸರಳಗೊಳಿಸುವಂತೆ–"ಸಹೋದರರೇ, ದೇವರು ನಮಗೋಸ್ಕರ ಅದ್ಭುತವಾದ ಒಂದು ಮಹಾ ಯೋಜನೆಯನ್ನು ಹೊಂದಿದ್ದು ಆ ಯೋಜನೆಯನ್ನು ಕಾರ್ಯರೂಪಗೊಳಿಸುತ್ತಿರುವುದು ನಮಗೆ ಕಾಣುತ್ತಿಲ್ಲವೋ? ಈ ಯೋಜನೆಯ ಸಹಕಾರದ ಸಲುವಾಗಿ ಒಂದು ನಿರ್ದಿಷ್ಟ ವರ್ಗದ ಆಯ್ಕೆಯ ಬಗ್ಗೆ ನಿರ್ಧರಿಸಿದ ನಂತರ ಆತನು ಈ ಪರಲೋಕದ ಕರೆಗೆ ನಮ್ಮ ಕರೆಯುವಿಕೆಯನ್ನು ಸಮರ್ಥಗೊಳಿಸುವಂತೆ ನಮಗೆ ದಯೆತೋರಿಸಿ ಅದರ ನಿಯಮ ಷರತ್ತುಗಳನ್ನು ಬಯಲು ಮಾಡಿದ್ದಾನೆಂದು ನಮಗೆ ಕಾಣುವುದಿಲ್ಲವೋ? ಇದರ ಅರ್ಥ ದೇವರು ನಮ್ಮ ಕಡೆ ಇದ್ದಾನೆ. ನಾವು ಈ ಆಯ್ದ ವರ್ಗದವರಾಗಬೇಕೆಂದು ಆತನು ಬಯಸುತ್ತಾನೆ. ನಾವು ಇದರಲ್ಲಿ ಒಂದು ಸ್ಥಾನವನ್ನು ಗಳಿಸಿಕೊಳ್ಳುವಂತೆ ಆತನ ಎಲ್ಲಾ ವ್ಯವಸ್ಥೆಗಳನ್ನೂ ಮಾಡಿದ್ದಾನೆ. ದೇವರು ನಮ್ಮೊಂದಿಗಿದ್ದರೂ, ಸೈತಾನನು, ಪಾಪ ಮತ್ತು ಅನುವಂಶಸ್ಥರಿಂದ ಹರಿದುಬಂದ ನಮ್ಮ ಸ್ವಂತ ಬಲಹೀನತೆಗಳು ಇವುಗಳೆಲ್ಲವೂ ನಮ್ಮ ವಿರೋಧವಾಗಿದ್ದು ನಮ್ಮನ್ನು ಬಂಧಿಸಿ ನಾವು ಮುಗ್ಗರಿಸುವಂತೆ ಮಾಡುತ್ತಿವೆಯೆಂದು ಕೆಲವೊಮ್ಮೆ ಭಾವಿಸುತ್ತೇವಲ್ಲವೋ? ಸರ್ವಶಕ್ತನಾದ ದೇವರು ನಮ್ಮ ಸಂಗಡ ಇರುವುದಾದಲ್ಲಿ ಈ ಯಾವುದೇ ವಿರೋಧಗಳೂ ನಮಗೆ ಭಯವನ್ನಾಗಲೀ, ಕಳವಳವನ್ನಾಗಲೀ ಉಂಟುಮಾಡಲು ಸಾಧ್ಯವಿಲ್ಲ ಎಂದು ನಾವು ಚಿಂತನೆ ಮಾಡೋಣ. ಯಾಕೆಂದರೆ ಆತನು ಇವುಗಳ ಮೂಲಕ ನಮ್ಮನ್ನು ಎಲ್ಲಾ ರೀತಿಯಲ್ಲೂ ನಡೆಸಿಕೊಂಡು ಹೋಗ ಬಲ್ಲಾತನಾಗಿದ್ದಾನೆ. ನಾವು ಪಾಪಿಗಳಾಗಿದ್ದಾಗ ಕ್ರಿಸ್ತ ಯೇಸುವಿನ ಮೂಲಕ ನಮ್ಮನ್ನು ವಿಮೋಚಿಸಿ ಆತನು ತೋರಿಸಿದ ಕೃಪೆಯ ಬಗ್ಗೆ ನಾವು ನೆನಪುಮಾಡೋಣ. ನಾವು ಪಾಪಿಗಳಾಗಿದ್ದಾಗಲೇ ಆತನು ಇವುಗಳನ್ನೆಲ್ಲಾ ಮಾಡುವುದಾದಲ್ಲಿ, ಈಗ ನಾವು ಅತನ ಮಕ್ಕಳಾಗಿರುವಾಗ ಅದಕ್ಕಿಂತ ಎಷ್ಟೋ ಹೆಚ್ಚಿನದನ್ನು ಆತನು ನಮಗೆ ಮಾಡಬಲ್ಲಾತನಾಗಿದ್ದಾನೆಂದು ನಾವು ಚಿಂತನೆ ಮಾಡೋಣ. ನಾವೀಗ ಆತನ ಸ್ವರವನ್ನು ಕೇಳಿದ್ದೇವೆ, ನಾವು ಆತನ ಮಗನನ್ನು ಅಂಗೀಕರಿಸಿದ್ದೇವೆ, ನಾವು ಆತನಲ್ಲಿ ವಿಶ್ವಾಸವನ್ನಿರಿಸಿದ್ದೇವೆ ಮತ್ತು ಆತನ ಅರ್ಹತೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ ನಾವೀಗ ದೈವೀಕ ಸ್ವಭಾವಕ್ಕೆ ಆತನ ಕರೆಯನ್ನು ಕೇಳಿಸಿಕೊಂಡಿದ್ದೇವೆ ಮತ್ತು ನಮ್ಮನ್ನು ಪ್ರತಿಷ್ಠೆಪಡಿಸಿಕೊಂಡಿದ್ದೇವೆ. ನಮ್ಮಲ್ಲಿರುವ ಅಲ್ಪವಾದವುಗಳನ್ನು ಆತನ ಬಲಿಪೀಠದಲ್ಲಿ ಅರ್ಪಿಸಿದ್ದೇವೆ ಖಂಡಿತವಾಗಿ ಬಹಳ ಹೆಚ್ಚಿನದನ್ನು ದೇವರು ನಮಗೆ ದಯಪಾಲಿಸುವವನಾಗಿದ್ದಾನೆ ಮತ್ತು ಈ ಸಮಯದಲ್ಲೂ ನಮಗಾಗಿ ಮಾಡುವವನಾಗಿದ್ದಾನೆ. ಖಂಡಿತವಾಗಿಯೂ ದೇವರು ಇನ್ನೂ ಹೆಚ್ಚಿನ ಕೃಪೆ ತೋರಿಸುತ್ತಾನೆ. ಆತನು ತನ್ನ ಮಗನನ್ನು ದಾನವಾಗಿ ಕೊಟ್ಟದರಲ್ಲಿ ಪ್ರತಿನಿಧಿಸಿರುವುದಕ್ಕಿಂತಲೂ ಹೆಚ್ಚಾಗಿ ಆತನು ಕೊಡುವುದನ್ನು ಅಲೋಚಿಸಲೂ ನಮಗೆ ಸಾಧ್ಯವಿಲ್ಲ. ಬದಲಾಗದ ದೇವರು ಇನ್ನೂ ನಮ್ಮನ್ನು ಪ್ರೀತಿಸುತ್ತಾನೆಂದು ಮತ್ತು ನಮ್ಮ ಲೌಕಿಕತೆಯನ್ನು ನಿಯಂತ್ರಿಸಿಕೊಳ್ಳುವ ನಮ್ಮ ಪ್ರಯತ್ನವು ಎಷ್ಟೇ ಬಲಹೀನವೂ, ಅಸಮರ್ಪಕವೂ ಆಗಿದ್ದರೂ ಸಹಾ ನಾವು ವಿಶ್ವಾಸದಲ್ಲಿ, ಪ್ರೀತಿಯಲ್ಲಿ ಮತ್ತು ಹೃತ್ಪೂರ್ವಕವಾದ ವಿಧೇಯತೆಯಲ್ಲಿ ಆತನಲ್ಲಿ ನೆಲೆಗೊಳ್ಳುವುದಾದರೆ ನಮ್ಮ ಉನ್ನತವಾದ ಆತ್ಮೀಕ ಒಳತಿಗಾಗಿ ಮತ್ತು ಅಂತಿಮವಾಗಿ ನಮಗೆ ನೂತನ ಸೃಷ್ಟಿಯಲ್ಲಿ ಜಾಗವನ್ನು ದೊರಕಿಸಿಕೊಡುವ ದೆಸೆಯಲ್ಲಿ ಎಲ್ಲಾ ಸಂಗತಿಗಳು ನೆರವೇರುವಂತೆ ಆತನು ಮಾಡುತ್ತಾನೆಂದು ನಾವು ಖಚಿತವಾಗಿ ತಿಳಿದುಕೊಳ್ಳಬಹುದು. ದೇವರು ತನ್ನ ಮಗನನ್ನು ನಮಗೆ ದಯಪಾಲಿಸಿರುವುದರಿಂದ ಮತ್ತು ತನ್ಮೂಲಕ ನೂತನ ಸೃಷ್ಟಿಯನ್ನು ಹೊಂದಿಕೊಳ್ಳುವಂತೆ ತನ್ನ ಮಾರ್ಗವನ್ನು ತೆರೆಯುವುದರ ಮೂಲಕ ಉಂಟಾಗಬಹುದಾದ ನಮ್ಮ ಎಲ್ಲಾ ಅಗತ್ಯತೆಗಳಿಗಾಗಿ ಯೇಸುವಿನಲ್ಲಿ ಪೂರ್ವ ಸಿದ್ಧತೆಯನ್ನು ಮಾಡಿರುತ್ತಾನೆ. ಆತನಲ್ಲಿ ದೇವರು ಎಲ್ಲವುಗಳನ್ನೂ ಉಚಿತವಾಗಿ ನಮಗೆ ದಯಪಾಲಿಸಿದ್ದಾನೆ.

ದೇವರಿದ್ದರೂ ಸಹಾ ಧರ್ಮ ನಿಯಮಗಳು ನಮ್ಮನ್ನು ದೋಷಿಯನ್ನಾಗಿ ಮಾಡುತ್ತವೆಂದು ಯಾರಾದರೂ ಸಲಹೆ ಮಾಡಬಹುದೋ? ದೇವರು ತಾನೇ ನಮ್ಮನ್ನು ಧರ್ಮ ನಿಯಮಗಳ ಅಡಿಯಲ್ಲಿ ಖಂಡಿಸಿದವನೆಂದು ನಾವು ಚಿಂತನೆ ಮಾಡಬೇಕು; ಒಬ್ಬ ಮಹಾ ನ್ಯಾಯಾಧಿಪತಿಯಾಗಿ ಖಂಡಿಸಿದ ಅದೇ ದೇವರು ಈಗ ನಮಗೆ ನೀತಿನಿರ್ಣಯವನ್ನು ಸಾರಿ ತಿಳಿಸುತ್ತಾ ಧರ್ಮ ನಿಯಮಗಳು ನಮ್ಮನ್ನು ಸಮರ್ಥಿಸದೇ ಇರುವ ಎಲ್ಲಾ ಸಂಗತಿಗಳಿಂದ ಆತನು ತನ್ನ ಕೃಪೆಯ ಮೂಲಕ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. ಹೀಗಿರುವಲ್ಲಿ

ಈ ವಿಷಯದ ವಾಸ್ತವದ ಬಗ್ಗೆ ಹಾಗೂ ದೇವರಿಂದ ಆಯ್ಕೆಯಾಗಿ ಆತನ ಕೃಪೆಗೆ ಪಾತ್ರರಾಗಿರುವವರ ಬಗ್ಗೆ ಯಾರು ತಪ್ಪು ಹೊರಿಸಾರು? ನಮ್ಮ ಉದ್ಧೇಶರಹಿತ ಬಲಹೀನತೆಗಳಿಗಾಗಿ, ಕೊರತೆಗಳಿಗಾಗಿ ನಮ್ಮನ್ನು ಯಾರು ಖಂಡಿಸಿಯಾರು? ಇದಕ್ಕೆ ನಾವು ಹೀಗೆ ಉತ್ತರಿಸುತ್ತೇವೆ – ನಮಗಾಗಿ ಪ್ರಾಣ ಕೊಟ್ಟ ಕ್ರಿಸ್ತನು; ಹೌದು, ಆತನು ಪುನರುತ್ಥಾನಗೊಂಡಿದ್ದು ನಮ್ಮ ಪ್ರತಿನಿಧಿಯಾಗಿ ಪರಲೋಕಕ್ಕೆ ಏರಿಹೋಗಿದ್ದಾನೆ ಮತ್ತು ನಮ್ಮ ಎಲ್ಲಾ ಅಪರಾಧಗಳನ್ನು ಮರೆಮಾಡುವಂತೆ ಆತನು ನಮ್ಮ ಸಲುವಾಗಿ ತನ್ನ ಅರ್ಹತೆಯನ್ನು ಅನ್ವಯಿಸಿದ್ದಾನೆ (ರೋಮಾ. 8: 34).

ನಮ್ಮ ಮತ್ತು ದೇವರ ನಡುವಣ ಪ್ರೀತಿಯ ಮಧ್ಯೆ ಏನಾದರೂ ಪ್ರವೇಶಿಸಿ ನಮ್ಮನ್ನು ದೇವರ ಪ್ರೀತಿಯಿಂದ ಅಥವಾ ಕ್ರಿಸ್ತನ ಪ್ರೀತಿ ಮತ್ತು ಕರುಣೆಗಳಿಂದ ಅಗಲಿಸಬಹುದೆಂಬ ಒತ್ತಡವು ಇನ್ನೂ ಇದ್ದೇ ಇದೆ; ಈ ರೀತಿಯ ಒತ್ತಡದಿಂದ ನಮ್ಮ ವಿಶ್ವಾಸ ಮತ್ತು ಭವಿಷ್ಯಗಳು ಒಡೆದು ನಾಶವಾಗಿ ನಮ್ಮ ಆಧಾರವಾದ ನೂತನ ಸೃಷ್ಟಿಯು ಹಾಳಾಗುವುದಿಲ್ಲವೋ? ಇದಕ್ಕೆ ನಾವು ವ್ಯತಿರಿಕ್ತವಾದ ಉತ್ತರವನ್ನು ನೀಡುತ್ತೇವೆ; ಕ್ರಿಸ್ತನಿಗೆ ನಮ್ಮ ಮೇಲೆ ಅಧಿಕವಾದ ಪ್ರೀತಿಯುಂಟು. ಇಲ್ಲವಾದಲ್ಲಿ ಅತನು ನಮ್ಮನ್ನು ವಿಮೋಚಿಸುತ್ತಿದ್ದಿಲ್ಲ. ಆತನ ಎಲ್ಲಾ ವ್ಯವಹಾರಗಳೂ ಪ್ರೀತಿಭರಿತವಾಗಿದ್ದು ನಮ್ಮನ್ನು ಅದರಿಂದ ಅಗಲಿಸುವ ಅವಕಾಶವನ್ನು ನಾವೆಂದಿಗೂ ನೀಡಬಾರದು. ಸಂಕಟಗಳು ಬಂದಲ್ಲಿ ನಮಗೆ ನೆರವು ನೀಡುವ ದೇವರ ಬಳಿಗೆ ಅವು ನಮ್ಮನ್ನು ನಡೆಸುವ ಅವಕಾಶ ಮಾಡಿಕೊಡಬೇಕು. ದುರವಸ್ಥೆ ಅಥವಾ ಹಿಂಸೆ ಬಲತ್ಕಾರ ದಾರಿದ್ರ್ಯ ಅಥವಾ ಬೇರೆ ಯಾವುದೇ ಗಂಡಾಂತರಗಳು ನಮಗೆ ಎರಗಿ ಬಂದಲ್ಲಿ ಅವಕ್ಕೆ ಹೆದರಿಕೊಂಡು ನಾವು ನಮ್ಮ ಕರ್ತನ ಪ್ರೀತಿಯನ್ನು ತೊರೆದುಬಿಡಬೇಕೋ? ಆತನ ಹೆಸರನ್ನು ಮತ್ತು ಉದ್ಧೇಶಗಳನ್ನು ಅಲ್ಲಗಳೆದು ಆತನ ಹೆಜ್ಜೆಜಾಡಿನಲ್ಲಿ ಮುಂದುವರೆಯದೆ ಇರಬೇಕೋ? ಇಲ್ಲ, ಈ ಅನುಭವಗಳ ಮೂಲಕವೇ ನಾವು ಜಯಶಾಲಿಗಳಾಗಿ ಅಭಿವೃದ್ಧಿ ಹೊಂದಿಕೊಳ್ಳುವುದು ಸಾಧ್ಯ. ನಾವು ಜಯಗಳಿಸಲು ಏನೂ ಇಲ್ಲವಾದಲ್ಲಿ, ಮಾರ್ಗವೆಲ್ಲಾ ಸುಲಲಿತವಾಗಿದ್ದು ಯಾವುದೇ ಅಹಿತಕರವಾದ ಅಡ್ಡಿಗಳು ಇಲ್ಲದಲ್ಲಿ ನಾವು ಜಯಶಾಲಿಗಳಾಗುವುದಾದರು ಹೇಗೆ? ನಮ್ಮನ್ನು ದೇವರ ಕರುಣೆ ಮತ್ತು ಆಶೀರ್ವಾದಗಳನ್ನು ಸ್ವೀಕರಿಸುವವರನ್ನಾಗಿ ಮಾಡಲಾಗಿದೆ. ನಾವು ಎಷ್ಟರ ಮಟ್ಟಿಗೆ ಆತನ ಪ್ರೀತಿ ಮತ್ತು ದಯೆಯಲ್ಲಿ ನೆಲೆಗೊಳ್ಳಲು ಅರ್ಹರಾಗಿದ್ದೇವೆಂದು ಈಗ ಆತನು ನಮ್ಮನ್ನು ಪರೀಕ್ಷಿಸುವವನಾಗಿದ್ದಾನೆ. ನಾವು ಅದರಲ್ಲಿ ನೆಲೆಗೊಳ್ಳಬೇಕೆಂಬುದು ಆತನ ಚಿತ್ತವಾಗಿದೆ ಮತ್ತು ಇದಕ್ಕಾಗಿ ಆತನು ಎಲ್ಲಾ ರೀತಿಯ ಏರ್ಪಾಡುಗಳನ್ನು ಮಾಡಿರುತ್ತಾನೆ. ಇಂತಾದರೂ ಆತನು ನಮ್ಮನ್ನು ಪ್ರಚೋದಿಸುವುದಿಲ್ಲ. ನಾನು ಮನಗಂಡಿದ್ದೇನೆ, ನನಗೆ ಆತ್ಮವಿಶ್ವಾಸವಿದೆ, ನಾವು ಮರಣದ ಭೀತಿಯಾಗಲೀ ಅಥವಾ ಜೀವದ ಮೇಲಿನ ಆಸೆಯಾಗಲೀ ಬೇರೆ ಯಾವುದೇ ಆಗಲಿ ಕ್ರಿಸ್ತನಲ್ಲಿ ಪ್ರಕಟವಾದ ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸಲು ನಾವು ಬಿಡುವುದಿಲ್ಲವೆಂದು ದೃಢನಿರ್ಧಾರ ಮಾಡಿದ್ದೇವೆ. ಈಗ ಸೃಷ್ಟಿಸಲ್ಪಟ್ಟಿರುವ ಅಥವಾ ಮುಂದೆ ಸೃಷ್ಟಿಸಲ್ಪಡಬಹುದಾದ ದೇವರ ಬೇರೆ ಯಾವ ಜೀವಿಯಾಗಲೀ, ದೇವದೂತರುಗಳಾಗಲೀ, ಮಹತ್ವಗಳಾಗಲೀ ಅಥವಾ ಶಕ್ತಿಗಳಾಗಲೀ ನಮ್ಮಲ್ಲಿರುವ ದೇವರ ದಯೆಯನ್ನು ತಡೆಯಲು ಅಥವಾ ಬದಿಗೆ ಸರಿಸಲು ಸಾಧ್ಯವೇ ಇಲ್ಲ. ಈ ಎಲ್ಲವುಗಳಲ್ಲಿಯೂ ನಾವು ವಿಜಯಿಗಳಿಗಿಂತಲೂ ಹೆಚ್ಚಾಗಿದ್ದೇವೆ – ನಮ್ಮನ್ನು ಪ್ರೀತಿಸುವವನ ಮೂಲಕ ನಾವು ದೇವರ ಯೋಜನೆಯಲ್ಲಿ ದೇವರ ಮಕ್ಕಳಾಗಿ ಸ್ವೀಕರಿಸಲ್ಪಟ್ಟಿದ್ದೇವೆ.

## ನಮ್ಮ ಕರೆ ಮತ್ತು ಆಯ್ಕೆಯನ್ನು ಖಚಿತಪಡಿಸಿಕೊಳ್ಳುವುದು

### "Making Our Calling and Election Sure"
### -2 Pet. 1:10,11

**"ಆದುದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ಧೃಢಪಡಿಸಿಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವುದಿಲ್ಲ [ಹಿಂದೆಯೇ ಹೇಳಿರುವಂತೆ "ನೀವು ಪೂರ್ಣಾಸಕ್ತಿಯುಳ್ಳವರಾಗಿ ನಿಮಗಿರುವ ನಂಬಿಕೆಗೆ ಸದ್ಗುಣವನ್ನು ಸದ್ಗುಣಕ್ಕೆ ಜ್ಞಾನವನ್ನು ಜ್ಞಾನಕ್ಕೆ ದಮೆಯನ್ನು ದಮೆಗೆ ತಾಳ್ಮೆಯನ್ನೂ ತಾಳ್ಮೆಗೆ ಭಕ್ತಿಯನ್ನೂ ಭಕ್ತಿಗೆ ಸಹೋದರರ ಸ್ನೇಹವನ್ನೂ ಸಹೋದರಸ್ನೇಹಕ್ಕೆ ಪ್ರೀತಿಯನ್ನೂ ಕೂಡಿಸಿರಿ. ಇವುಗಳೆಲ್ಲವೂ ಯಥೇಚ್ಚವಾಗಿದ್ದರೆ ನಾವು ಸೋಮಾರಿಗಳೂ ನಿಷ್ಫಲರೂ ಆಗುವುದಿಲ್ಲ] ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು"**

ಈ ಆಯ್ಕೆಯಲ್ಲಿ ಮುಖ್ಯವಾದ ಹಂತಗಳು ದೇವರಿಗೆ ಸಂಬಂಧಿಸಿದವುಗಳು ಅವು ಯಾವುವೆಂದರೆ : (1) ಅಂತಹ ಒಂದು ನೂತನ ಸೃಷ್ಟಿಯನ್ನು ಉಂಟುಮಾಡುವ ಪೂರ್ವ ನಿರ್ಧಾರ (2) ಅಗತ್ಯವಾದ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳುವುದಕ್ಕೆ ಕೆಲವರಿಗೆ ಕರೆ. (3) ಆಹ್ವಾನಿತರು ಕರೆಗೆ ಹೊಂದಾಣಿಕೆಯಾಗುವಂತೆ ಸ್ಪಂದಿಸಿ ಹಾಗೂ ಒಪ್ಪುವ ಸ್ಥಿತಿಯನ್ನು ತಲುಪುವ ವಿಷಯದ ಬಗ್ಗೆ ಮಾಡಿರುವ ಏರ್ಪಾಟುಗಳು.

ಮತ್ತೊಂದೆಡೆಯಲ್ಲಿ ಆಯ್ಕೆಯಾದವರು ಮುಖ್ಯವಾದ ಕೆಲವು ಹೆಜ್ಜೆಗಳನ್ನಿಡುವ ನಿರ್ಧಾರ ತೆಗೆದುಕೊಳ್ಳಬೇಕು (1) ಕರೆಯಲ್ಪಟ್ಟವರಾಗಿ ಈ ಎಲ್ಲಾ ಸಿದ್ಧತೆಗಳೂ, ವ್ಯವಸ್ಥೆಗಳೂ ಅವರಿಗಾಗಿ ಮಾಡಲ್ಪಟ್ಟಿವೆ ಆದುದರಿಂದ ಅವರು ಈ ಕರೆಯನ್ನು ಅಂಗೀಕರಿಸಬೇಕು ಮತ್ತು ಪೂರ್ಣವಾದ ಪ್ರತಿಷ್ಠೆಯನ್ನು ಮಾಡಿಕೊಳ್ಳಬೇಕು. (2) ಅವರು ತಮ್ಮ ಕರೆಯ ಸ್ಫೂರ್ತಿಗೆ ತಕ್ಕಂತೆ ಪ್ರೇರಿತರಾಗಬೇಕು ಮತ್ತು ಅದರಂತೆ ತಮ್ಮ ಆಶೀರ್ವಾದಗಳನ್ನು ಮೆಚ್ಚುವಂತವರಾಗಿರಬೇಕು. ಅವರು ಉತ್ಸಾಹದೊಡನೆ ಅದಕ್ಕೆ ಅಂಟಿಕೊಂಡಿರುವ ಷರತ್ತುಗಳಿಗೆ ಮತ್ತು ಇತಿ–ಮಿತಿಗಳಿಗೆ ತಮ್ಮನ್ನು ಅನ್ವಯಿಸಿಕೊಂಡವರಾಗಿರಬೇಕು.

ಈ ಎಲ್ಲಾ ಷರತ್ತುಗಳೂ, ಇತಿ ಮಿತಿಗಳು ಸಂಕ್ಷಿಪ್ತವಾಗಿ ದೇವರ ಪ್ರೀತಿಯ ಮಗನಿಗೆ ಹೃತ್ಪೂರ್ವಕವಾದ ಪ್ರೀತಿ ಭರಿತ

ಇಷ್ಟದಿಂದ ಕೂಡಿದ್ದಾಗಿವೆ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ. ಆದರೆ ಈ ಇಷ್ಟವನ್ನು ಹೆಚ್ಚು ನಿರ್ದಿಷ್ಟವಾಗಿ ನಾವು ವಿಶ್ಲೇಷಿಸುವಾಗ ಅಪೋಸ್ತಲನಾದ ಪೇತ್ರನು ಹೇಳುವಂತೆ ನಾವು ಪವಿತ್ರವಾದ ಆತ್ಮನ ಫಲಗಳನ್ನು ಹೊಂದಿ ಕೊಂಡಿರಬೇಕು. ದೇವರು ಪವಿತ್ರನಾಗಿದ್ದಾನೆ. ಆಯ್ಕೆಗೊಂಡವರು ಆತ್ಮನನ್ನು, ಆತನ ನೀತಿಯ ಬಗ್ಗೆ, ಪ್ರೀತಿಯ ಪ್ರವೃತ್ತಿ ಮತ್ತು ಅನ್ಯಾಯದ ಬಗ್ಗೆ ವಿರೋಧ ಇವುಗಳನ್ನು ಹೊಂದಿರಬೇಕು. ಅಪೋಸ್ತಲನು ಮೇಲಿನ ದೇವರ ವಾಕ್ಯಭಾಗದಲ್ಲಿ ದೇವರ ಪವಿತ್ರ ಆತ್ಮನ ವಿವಿಧ ಮೂಲ ವಸ್ತುಗಳನ್ನು ತೋರಿಸುತ್ತಾನೆ ಮತ್ತು ನಾವು ಆತನ ಸಮಗ್ರವಾದ ಹೋಲಿಕೆಯನ್ನು (ಪ್ರೀತಿಯ ಸಂಪೂರ್ಣತೆಯನ್ನು) ಆರಂಭದ ಗತಿಯಲ್ಲಿ ಹೊಂದಿಕೊಳ್ಳಲಾರೆವು ಎಂಬುದನ್ನು ಎತ್ತಿ ಹಿಡಿಯುತ್ತಾನೆ. ಆದರೆ, ನಿಜವಾಗಿ ಹೇಳುವುದಾದರೆ ಗತಿಯ ಅಂತ್ಯವನ್ನು ಸೂಚಿಸುವುದಕ್ಕೆ ಅದುವೇ ಗುರುತು ಅಥವಾ ಮಟ್ಟವಾಗಿದೆ. ಪ್ರೀತಿಯೆಂದರೆ ಸಾಮಾನ್ಯ ಅರ್ಥದಲ್ಲಿ ನಿಜವಾಗಿಯೂ ಪ್ರೀತಿಯ ಗುಣಲಕ್ಷಣಗಳ ಭಾಗವಾದ ಇವೆಲ್ಲಾ ಅಂಶಗಳನ್ನೊಳಗೊಂಡಿದೆ – ಸಾಧುತ್ವ, ಸೌಮ್ಯತೆ, ಸಹೋದರ ಸ್ನೇಹ, ದೈವತ್ವ ಇವುಗಳೆಲ್ಲವೂ ಪ್ರೀತಿಯ ಮೂಲವಸ್ತುಗಳಾಗಿವೆ.

ದೇವರಾತ್ಮನ ಈ ಫಲಗಳಿಗೆ ಕೆಳಕಂಡಂತೆ ಅರ್ಥ ವಿವರಣೆಯನ್ನು ನೀಡಬಹುದೆಂದು ಒಬ್ಬರು ಸಲಹೆ ಮಾಡಿದ್ದಾರೆ. ಅವನ್ನು ನಾವು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುತ್ತೇವೆ :–

(1) ಹರ್ಷ – ಪ್ರೀತಿಯ ಸಂಭ್ರಮ

(2) ಸಮಾಧಾನ – ಪ್ರೀತಿಯಲ್ಲಿ ವಿಶ್ರಾಂತಿ

(3) ದೀರ್ಘ ಶಾಂತಿ– ಪ್ರೀತಿಯಿಂದ ಸಹಿಸಿಕೊಳ್ಳುವಿಕೆ

(4) ಸಭ್ಯತೆ – ಸಮಾಜದಲ್ಲಿನ ಪ್ರೀತಿ

(5) ಒಳ್ಳೆಯತನ – ಪ್ರೀತಿಯ ಕಾರ್ಯಾಚರಣೆ

(6) ನಂಬಿಕೆ – ಜೀವನವೆಂಬ ರಣಭೂಮಿಯಲ್ಲಿ ಪ್ರೀತಿ

(7) ಸೌಮ್ಯತೆ – ತಾಳ್ಮೆಯಲ್ಲಿ ಪ್ರೀತಿ

(8) ಸಂಯಮದಲ್ಲಿ ಮಿತಾಚಾರ – ತರಬೇತಿಯಲ್ಲಿನ ಪ್ರೀತಿ

ನಾವು ಓಟದ ಕ್ರಮವನ್ನು ಪ್ರಾರಂಭಿಸಿರುವಾಗ, ಹಾಗೆ ಮಾಡಲು ನಿರ್ಧರಿಸಿದ್ದೇಕೆಂದರೆ ದೇವರು ನಮ್ಮನ್ನು ಆತನ ಕೃಪೆಯಿಂದ ನೀತಿವಂತರೆಂದು ನಿರ್ಣಯಿಸಿ **ಉನ್ನತಕರೆಯ ಜಯಮಾಲೆಯನ್ನು** ಗೆದ್ದುಕೊಳ್ಳುವಂತೆ ನಮ್ಮನ್ನು ಈ ಓಟಕ್ಕೆ ಆಹ್ವಾನಿಸಿದ್ದಾನೆ. ನಾವು ನಮ್ಮ ಈ ಲೋಕದ ಆಕಾಂಕ್ಷೆಗಳ ಭಾರ ಮತ್ತು ಅಡೆತಡೆಗಳನ್ನು ಬದಿಗಿರಿಸಿ ನಮ್ಮ ಚಿತ್ತವನ್ನು ದೇವರಿಗೆ ಪ್ರತಿಷ್ಠಿಸಿಕೊಂಡವರಾಗಿ ಒಂದು ಕೆಲಸ ಮಾಡುವವೆಂಬ ದೃಢ ನಿರ್ಧಾರ ಕೈಕೊಳ್ಳಬೇಕಾಗುತ್ತದೆ. ಅದೇನೆಂದರೆ, ದೇವರು ನಮಗೆ ನೀಡ ಬಯಸಿರುವ ಆಶೀರ್ವಾದಗಳನ್ನು ನಾವು ಬಯಸಬೇಕು ಮತ್ತು ಆತನ ಕೃಪೆಯಿಂದ ಅವುಗಳನ್ನು ಪಡಕೊಳ್ಳಬೇಕು. ಅದೇ ಸಮಯದಲ್ಲಿ ನಾವು ಸುಲಭವಾಗಿ ನಮ್ಮಲ್ಲಿ ಮನೆಮಾಡಿರುವ ಪಾಪಗಳು ಹೇಗೆಯೇ ಇರಲಿ ನಮ್ಮ ಪಾಪಗಳು ಓಟದ ಮೈದಾನದಲ್ಲಿರುವ ಇತರರ ಪಾಪಗಳಿಗೆ ಸಮವಾಗಿದ್ದರೂ, ಇಲ್ಲವಾದರೂ ಅವನ್ನು ತೊರೆದುಬಿಡುತ್ತೇವೆ ಮತ್ತು ಈ ಓಟದಲ್ಲಿ ನಾವು ಪ್ರಾಮಾಣಿಕತೆಯಿಂದ ಭಾಗವಹಿಸುತ್ತೇವೆಂದು ತೀರ್ಮಾನಿಸಬೇಕು.

ಈ ಓಟದ ಕ್ರಮವನ್ನು ಪ್ರವೇಶಿಸುವುದು ನಮ್ಮ ಪ್ರತಿಷ್ಠೆಯೊಂದಿಗೆ ಸರಿಹೊಂದುತ್ತದೆ. ಅದು ಪ್ರಾರಂಭ. ಪ್ರೀತಿಯುಳ್ಳ ದೇವರಾತ್ಮನು ನಮ್ಮನ್ನು ನಾವು ನಿಯಂತ್ರಿಸುವಂತೆ ಪ್ರತಿಷ್ಠಿಸಿಕೊಂಡಿದ್ದೇವೆ. ಹೀಗಿದ್ದರೂ, ಅವನತಿಗೊಂಡ ಕಾರಣ ನಾವು ತಂದೆಯ ಒಪ್ಪುವ ಗುಣ ಲಕ್ಷಣದ ಮೂಲವಸ್ತುಗಳ ಕೊರತೆಯಲ್ಲಿದ್ದೇವೆ ಎಂಬುದನ್ನು ಮನಗಂಡಿದ್ದೇವೆ. ಹೀಗಿದ್ದಾಗ್ಯೂ, ನಾವು ಓಡುತ್ತೇವೆ ಮತ್ತು ಮಗನ ಸಾರೂಪ್ಯದ ಗುಣಲಕ್ಷಣವನ್ನು ಪಡಕೊಳ್ಳಲು ಪಟ್ಟುಹಿಡಿದು ಪ್ರಯತ್ನಿಸುತ್ತೇವೆ. ಇದು ನಮ್ಮ ಬಗ್ಗೆ ಆತನ ಚಿತ್ತವೂ, ಆತನ ಸಾಂಗತ್ಯದ ಷರತ್ತೂ ಆಗಿದೆ. ಈ ವಿಷಯದಲ್ಲಿ ನಾವು ನಮ್ಮ ಕರ್ತನೊಂದಿಗೆ ಭಿನ್ನವಾಗಿದ್ದೇವೆ, ಯಾಕೆಂದರೆ ಆತನು ಪರಿಪೂರ್ಣ ನಾಗಿರುವುದರಿಂದ ಪ್ರೀತಿಯ ಅಭಿವೃದ್ಧಿಯಲ್ಲಿ ಒಂದು ಹೆಜ್ಜೆಯಾದರೂ ಆಚೆ ಈಚೆ ಮಾಡಲಾರನು. ಆತನು ಮೊದಲಿನಿಂದಲೇ ಆತ್ಮನಿಂದ ತುಂಬಿರುತ್ತಾನೆ. ಆತನು ಮೊದಲಿನಿಂದಲೇ ಆ ಪ್ರಮಾಣದಲ್ಲಿದ್ದಾನೆ; ದೇವರ ಸಮರ್ಪಕ ಪ್ರೀತಿಯಲ್ಲಿ ತನ್ನ ಜನರಿಗೆ ಮತ್ತು ವೈರಿಗಳಿಗೆ ಪ್ರಾಮಾಣಿಕನಾಗಿ ನಿಲ್ಲುತ್ತಾನೋ ಇಲ್ಲವೋ ಎಂಬುದರಲ್ಲಿ ಆತನ ಪರೀಕ್ಷೆ ಇದೆ. ನಾವು ಎಷ್ಟಾದರೂ ಆ ಗುರುತನ್ನು ಹೊಂದಿಕೊಳ್ಳುವಂತೆ ಪ್ರಯಸಪಡುವವರಾಗಿ ಓಡಬೇಕಾಗಿದೆ.

ಈ ಓಟದ ಕ್ರಮವನ್ನು ನಾವು ನಾಲ್ಕು ಸಮಭಾಗಗಳನ್ನಾಗಿ ಮಾಡಿಕೊಳ್ಳಬಹುದು. ಮೊದಲನೆಯ ಕಾಲುಭಾಗದಲ್ಲಿ ನಾವು ಪ್ರೀತಿಯು ದೈವೀಕ ಅಗತ್ಯತೆಯನ್ನು ಗ್ರಹಿಸುತ್ತೇವೆ ಮತ್ತು ಅದನ್ನು ಹೊಂದುಕೊಳ್ಳ ಬಯಸುತ್ತೇವೆ. ಆದರೆ ಅದನ್ನು ಕರ್ತವ್ಯದ ದೃಷ್ಟಿಕೋನದಿಂದ ಮಾತ್ರವೇ ತಿಳುಕೊಳ್ಳುತ್ತೇವೆ. ನಾವು ದೇವರ ಕಡೆಗೆ ಕರ್ತವ್ಯಪರವಾದ ಪ್ರೀತಿಯನ್ನು (dutylove) ಅನುಭವ ಮಾಡುತ್ತೇವೆ. ಯಾಕೆಂದೆರೆ, ನಮ್ಮ ಸೃಷ್ಟಿಕರ್ತನಾಗಿ ಆತನಿಗೆ ನಮ್ಮ ವಿಧೇಯತ್ವವನ್ನು, ಪ್ರೀತಿಯನ್ನು ಮತ್ತು ನಿಷ್ಠೆಯನ್ನು ಹಕ್ಕಿನಿಂದ ಕೇಳುವ ಅಧಿಕಾರ ಆತನಿಗಿದೆ. ನಮ್ಮ ಕರ್ತನಾದ ಯೇಸುವಿನ ಬಗ್ಗೆಯೂ ಕರ್ತವ್ಯಪರವಾದಪ್ರೀತಿ (dutylove) ಇದೆ. ಯಾಕೆಂದರೆ, ಆತನು ನಮ್ಮನ್ನು ಪ್ರೀತಿಸಿದ್ದಾನೆ ಮತ್ತು ಅದಕ್ಕೆ ಬದಲಾಗಿ ಆತನನ್ನು ನಾವು ಪ್ರೀತಿಸುವುದು, ನ್ಯಾಯಬದ್ಧವಾಗಿದೆ. ಅದರಂತೆ ನಾವು ನಮ್ಮ ಸಂಗಡಿಗರನ್ನೂ ಪ್ರೀತಿಸಬೇಕಾಗಿರುವುದು ದೇವರ ಚಿತ್ತವೇ ಆಗಿದೆ.

ಓಟದ ಕ್ರಮದ ಎರಡನೆಯ ಭಾಗವು ನಮ್ಮನ್ನು ಇನ್ನೂ ಸ್ವಲ್ಪ ಮುಂದಕ್ಕೆ, "ಗುರುತಿನ" (Mark) ಹತ್ತಿರಕ್ಕೆ ಕೊಂಡೊಯ್ಯುತ್ತದೆ. ಇದರಿಂದ ನಾವು ಮೊದಲು ಕರ್ತವ್ಯವುಳ್ಳ ಪ್ರೀತಿಯಿಂದ ಮಾಡಬೇಕೆನಿಸಿದ್ದನ್ನು ಕ್ರಮೇಣವಾಗಿ ಕೇವಲ ಕರ್ತವ್ಯವೆಂದು ನೆನಸದೆ ಮಚ್ಚಿಗೆಯಾದ ರೀತಿಯಲ್ಲಿ

ಪರಿಗಣಿಸುತ್ತೇವೆ. ಅಲ್ಲಿಂದ ಮುಂದೆ ದೇವರು ನಮ್ಮಿಂದ ಯಾವುದನ್ನು ಹಕ್ಕು ಮತ್ತು ಕರ್ತವ್ಯಗಳೆಂದು ಅಪೇಕ್ಷಿಸುತ್ತಾನೋ ಅವುಗಳನ್ನು ಒಳ್ಳೆಯವುಗಳೆಂದು ನಾವು ಕಂಡುಕೊಳ್ಳುತ್ತೇವೆ. ನಮ್ಮಲ್ಲಿರುವ ಯಾವುದೇ ಅತ್ಯಂತ ಮಹತ್ವದ ಭಾವನೆಗಳ ಸಿದ್ಧಾಂತಗಳನ್ನು ನಾವು ನಮ್ಮ ಕರ್ತನು ನಮ್ಮಿಂದ ಆಜ್ಞಾಪನೆಯ ಅಪೇಕ್ಷಿಸುವ ಮತ್ತು ನಮ್ಮ ಮುಂದಿಟ್ಟಿರುವ ನ್ಯಾಯ, ಪ್ರೀತಿ ಮತ್ತು ಜ್ಞಾನ ಇವುಗಳೊಂದಿಗೆ ಗುರುತಿಸುತ್ತೇವೆ ಮತ್ತು ಆ ಕ್ಷಣದಿಂದಲೇ ಅವನ್ನು ಮೆಚ್ಚಲು ಪ್ರಾರಂಭಿಸುತ್ತೇವೆ. ಸೃಷ್ಟಿಕರ್ತನನ್ನು ಪ್ರೀತಿಸುವುದು ನಮ್ಮ ಕೇವಲ ಕರ್ತವ್ಯ ಎಂದು ಎಣಿಸಿ ನಾವು ದೇವರನ್ನು ಪ್ರೀತಿಸದೆ ಅದಕ್ಕಿಂತ ಅಧಿಕವಾಗಿ ಮತ್ತು ಬಹು ವಿಶೇಷವಾಗಿ ನಾವು ಆತನ ಭವ್ಯವಾದ ಗುಣಲಕ್ಷಣಗಳು, ಪ್ರೀತಿ, ಕೃಪೆ ಮತ್ತು ಒಳ್ಳೆಯತನಗಳು ಆತನಲ್ಲಿ ಮೂರ್ತೀಕರಿಸುವುದನ್ನು ನಾವು ಅನುಭವಿಸುತ್ತೇವೆ ಮತ್ತು ಅವುಗಳನ್ನು ಕಂಡುಕೊಂಡವರಾಗಿ ಆತನನ್ನು ಪ್ರೀತಿಸುತ್ತೇವೆ. ಯಾರು ಈ ಎರಡನೇ ಭಾಗದ ಗುರುತನ್ನು ತಲಪುತ್ತಾರೊ ಅವರು ದೇವರನ್ನು ಆತನು ಮೊದಲು ನಮ್ಮನ್ನು ಪ್ರೀತಿಸಿದ್ದಾನೆ ಮತ್ತು ಅದಕ್ಕೆ ಬದಲಾಗಿ ನಾವು ಆತನನ್ನು ಪ್ರೀತಿಸುವುದು ನಮ್ಮ ಕರ್ತವ್ಯ ಎಂಬ ಕಾರಣಕ್ಕಷ್ಟೇ ಪ್ರೀತಿಸದೆ ನಮ್ಮ ತಿಳುವಳಿಕೆಯ ಕಣ್ಣುಗಳು ಈಗ ವಿಶಾಲವಾಗಿ ತೆರೆದಿದ್ದು ನಾವು ನಮ್ಮ ಸೃಷ್ಟಿಕರ್ತನ ಗುಣಲಕ್ಷಣಗಳ ಭವ್ಯತೆಯನ್ನು, ನ್ಯಾಯದ, ಜ್ಞಾನದ, ಶಕ್ತಿಯ ಮತ್ತು ಪ್ರೀತಿಯ ಉದ್ದ, ಆಳ ಮತ್ತು ಅಗಲವನ್ನು ಈಗ ಕಾಣಬಹುದಾಗಿದೆ.

ಓಟದ ಕ್ರಮದಲ್ಲಿ ಗುರುತಿಸಿರುವ ಮೂರನೆಯ ಭಾಗವನ್ನು ನಾವು "ಸಹೋದರರಿಗಾಗಿ ಇರುವ ಪ್ರೀತಿ' ಎಂದು ಕರೆಯಬಹುದು. ಮೊದಲಿನಿಂದಲೇ ನಾವು ತಂದೆಯ ಬಗ್ಗೆ ಇರುವಂತೆಯೇ ಆದರೆ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಸಹೋದರರ ಬಗ್ಗೆ ಇಟ್ಟಿರುವ ಕರ್ತವ್ಯ ಪ್ರೀತಿಯನ್ನು ಗ್ರಹಿಸಿದ್ದೇವೆ. ಯಾಕೆಂದರೆ, ಈ ಸಹೋದರರುಗಳು ತಂದೆಗಿಂತ ಕಡಿಮೆಯಾಗಿ ನಮಗೆ ಮಾಡಿದ್ದಾರೆ; ಆದರೂ ತಂದೆಯ ಚಿತ್ತಾನುಸಾರ ನಾವು ಅವರನ್ನು ಮುಖ್ಯವಾಗಿ ಪರಿಗಣಿಸುತ್ತೇವೆ. ಆದರೆ ನಾವು ನೀತಿವಂತಿಕೆಯ ಸಿದ್ಧಾಂತಗಳನ್ನು ನೋಡುವಾಗ ತಂದೆಯು ನಮ್ಮ ಉದ್ದೇಶ ಪೂರ್ವಕವಲ್ಲದ ಅಪರಾಧಗಳನ್ನು ಸಹಿಸಿಕೊಂಡು ನಮ್ಮನ್ನು ಪ್ರೀತಿಸುತ್ತಿರುವದನ್ನು ನಾವು ಮೆಚ್ಚಿಕೊಳ್ಳುತ್ತೇವೆ. ಇದರಿಂದ ನಮ್ಮ ಮನಸ್ಸು ಮತ್ತು ಹೃದಯಗಳು ನಮ್ಮ ಸಹೋದರರ ಬಗ್ಗೆ ವಿಶಾಲವೂ, ಆಳವೂ ಆಗುತ್ತವೆ. ನಾವು ಅವರ ಉದ್ದೇಶರಹಿತ ಅಸಮರ್ಪಕತೆಗಳನ್ನು, ತಪ್ಪು ಅಪರಾಧಗಳನ್ನು ಕಡೆಗಣಿಸುತ್ತೇವೆ. ಆಗ ನಾವು ಅವರಲ್ಲಿ ಯೇಸುವಿನ ಹೆಜ್ಜೆಜಾಡಿನಲ್ಲಿ ದೈವೀಕ ಸಿದ್ಧಾಂತಗಳಿಗನುಸಾರ ನಡೆಯಬೇಕೆಂಬ ಹೃತ್ಪೂರ್ವಕ ಉದ್ದೇಶಗಳನ್ನು ಕಂಡುಕೊಳ್ಳುತ್ತೇವೆ. ಸಹೋದರರ ಬಗ್ಗೆ ಪ್ರೀತಿಯು ನಮ್ಮ ಅನುಭವದಲ್ಲಿ ನಿರ್ದಿಷ್ಟವಾದ ಪ್ರಮಾಣವನ್ನು ತಲುಪುವುದಾಗಿದೆ. ಅಯ್ಯೋ! ಇನ್ನು ಎಷ್ಟೋ ದೇವ ಜನರು ಜಯಮಾಲೆ ಪಡೆಯುವ ಉನ್ನತ ಕರೆಯ ಈ ಓಟ ಕ್ರಮದಲ್ಲಿ ಈ ಮೂರನೆಯ ಭಾಗದ ಗುರುತನ್ನು ತಲುಪಿರುವುದಿಲ್ಲ. ದೇವರ ವಾಕ್ಯವು ಬೋಧಿಸುವ ಸಹೋದರ ಕರುಣೆ, ದೀರ್ಘಶಾಂತಿ, ತಾಳ್ಮೆ ಇವುಗಳನ್ನು ಬೆಳೆಸಿಕೊಳ್ಳುವ ಅಗತ್ಯತೆ ಬಹಳವಾಗಿದೆ. ಇವುಗಳನ್ನು ನಮ್ಮ ತಂದೆ ಮತ್ತು ಕರ್ತನೊಡಗಿರುವ ನಮ್ಮ ಸಂಬಂಧಗಳಿಗಿಂತ ಹೆಚ್ಚಾಗಿ ಸಹೋದರರೊಡನೆ ಇರುವ ನಮ್ಮ ಸಂಬಂಧಗಳ ಮೂಲಕ ಅವಶ್ಯಕವಾಗಿ ಪ್ರಯುತ್ನಿಸಲಾಗುವುದು ಮತ್ತು ಪರೀಕ್ಷಿಸಲಾಗುವುದು. ನಾವು ತಂದೆಯ ಮತ್ತು ಮಗನ ಪರಿಪೂರ್ಣತೆಯನ್ನು ಕಾಣಬಹುದು. ಅವರಲ್ಲಿ ಯಾವುದೇ ಅಸಂಪೂರ್ಣತೆ ಇರುವುದಿಲ್ಲ; ನಮ್ಮ ಬಗ್ಗೆ ಇರುವ ಉದಾರತನವನ್ನೂ ಮತ್ತು ಅವುಗಳ ಬಗ್ಗೆ ನಮ್ಮ ಸ್ವಂತ ಕೊರತೆಗಳನ್ನು ನಾವು ಕಂಡುಕೊಳ್ಳಬಹುದು. ಆದರೆ, ನಾವು ನಮ್ಮ ಸಹೋದರರ ಕಡೆಗೆ ನೋಡುವಾಗ ನಾವು ಒಂದರಲ್ಲಿ ಒಂದು ಬಲಹೀನತೆಯನ್ನು, ಮತ್ತೊಂದರಲ್ಲಿ ಮತ್ತೊಂದು ಬಲಹೀನತೆಯನ್ನು ಕಾಣುತ್ತೇವೆ. ಸಹೋದರರಿಗೆ " ನಿನ್ನ ಕಣ್ಣಿನಲ್ಲಿರುವ ರವೆಯನ್ನು ತೆಗೆಯುತ್ತೇನೆ, ಬಾ" ಎಂದು ಹೇಳುವ ಪ್ರೇರಣೆ ಸಾಮಾನ್ಯವಾಗಿ ನಮ್ಮಲ್ಲಿ ಕಂಡುಬರುತ್ತದೆ. ಆದರೆ ಹಾಗೆ ಹೇಳುವಾಗ ನಮ್ಮಲ್ಲಿ ನಾವೇ ಕಾದಾಡಬೇಕಾಗಿರುವ ತಾಳ್ಮೆ ಇಲ್ಲದಿರುವಿಕೆ, ಪ್ರೀತಿಯಿಲ್ಲದಿರುವಿಕೆ ಮುಂತಾದ ದೊಡ್ಡ ತೊಲೆಗಳು, ಅಂತಹ ತೆಗೆಯುವಿಕೆಯ, ಮೂದಲಿಸುವ, ತಪ್ಪು ಕಂಡುಹಿಡಿಯುವಿಕೆಯ ಸ್ವಭಾವಗಳು ನಮ್ಮೊಡನೆ ಸೆಣಸುತ್ತವೆ. ನಾವು ಈ ಮೂರನೆಯ ಭಾಗದ ಗುರುತನ್ನು ಸಮೀಪಿಸುವಾಗ ನಾವು ನಮ್ಮ ಕಣ್ಣಿನಿಂದ ಈ ತೊಲೆಯನ್ನು ಕ್ರಮೇಣವಾಗಿ ತೊಲಗಿಸಿಕೊಳ್ಳುತ್ತೇವೆ – ನಮ್ಮ ಅಪರಾಧಗಳು ನಮಗೆ ಕಾಣಲು ಪ್ರಾರಂಭವಾಗಿರುತ್ತವೆ, ನಾವು ನಮ್ಮ ಬಗ್ಗೆ ಕರ್ತನ ಕೃಪೆಯಲ್ಲಿರುವ ಶ್ರೀಮಂತಿಕೆಯನ್ನು ಹೆಚ್ಚು ಹೆಚ್ಚಾಗಿ ಮೆಚ್ಚತೊಡಗುತ್ತೇವೆ. ಇದರ ಫಲವಾಗಿ ನಮ್ಮ ಹೃದಯಗಳ ಮೇಲೆ ಆಗುವ ಪರಿಣಾಮವೇನೆಂದರೆ ಇತರರ ಬಗ್ಗೆ ಸಾಧುತ್ವದ, ತಾಳ್ಮೆ ಮತ್ತು ಸಭ್ಯತೆಯ ಹೆಚ್ಚಿನ ಶ್ರೇಣಿಯ ಉತ್ಸಾಹ ನಮ್ಮಲ್ಲಿ ಅಭಿವೃದ್ಧಿಯಾಗುತ್ತದೆ. ಅವರುಗಳು ನಿಜವಾಗಿಯೂ ನಮ್ಮ ಸಹೋದರರುಗಳಾಗಿದ್ದಾರೆಂದು ನಾವು ಗ್ರಹಿಸುವವರೆಗೆ – ಅವರು ಸಹಾ ಅಮೂಲ್ಯವಾದ ರಕ್ತದಲ್ಲಿ ನಂಬಿಕೆಯನ್ನಿಟ್ಟು ಅದೇ ಜಯಮಾಲೆಗಾಗಿ ನಮ್ಮೊಡನೆ ಅದೇ ಓಟದಲ್ಲಿ ಭಾಗವಹಿಸುವ ತನಕ ಇದು ನಮಗೆ ಆ ಸಹೋದರರ ಪಾಪದ ರಾಶಿಯನ್ನು, ಅಸರ್ಪಕತೆಯ ರಾಶಿಯನ್ನು ಕಡೆಗಾಣಿಸಲು, ಮುಚ್ಚಿಹಾಕಲು ಶಕ್ತರನ್ನಾಗಿ ಮಾಡುತ್ತದೆ

ನಮ್ಮ ಓಟದ ನಾಲ್ಕನೆಯ ಹಾಗೂ ಅಂತಿಮವಾದ ಭಾಗದ ಗುರುತು ದೇವರೆಡೆಗೆ, ನಮ್ಮ ಸಹೋದರರುಗಳೆಡೆಗೆ, ಎಲ್ಲಾ ಜನರೆಡೆಗೆ ತೋರಿಸುವ **"ಪರಿಪೂರ್ಣವಾದ ಪ್ರೀತಿ'**ಯಾಗಿದೆ. ಇದನ್ನು ಆದಷ್ಟು ಬೇಗ ಪಡಕೊಳ್ಳುವಂತೆ ನಾವೆಲ್ಲರೂ ಬಹು ನಿಷ್ಠೆಯಿಂದ ಬಯಸಬೇಕಾಗಿದೆ. ನಾವು ಈ ಭಾಗದ ಗುರುತುಗಳಲ್ಲಿಯೇ ಕಾಲಹರಣ ಮಾಡಬಾರದು. ಆದರೆ ತಾಳ್ಮೆಯಿಂದ, ಸತತವಾದ ನಿಷ್ಠೆಯಿಂದ, ಚುರುಕಾಗಿ ಓಡುತ್ತಾ ಇರಬೇಕು "ನಾವು ಲೋಕವನ್ನಾಗಲೀ ಲೋಕದ ಸಂಗತಿಗಳನ್ನಾಗಲೀ ಪ್ರೀತಿಸಬಾರದು' ಎಂಬ ಹೇಳಿಕೆಯಲ್ಲಿ ಅರ್ಥವಿದೆ. "ನಾವು ಎಲ್ಲರಿಗೂ, ಮುಖ್ಯವಾಗಿ ಕ್ರಿಸ್ತ ನಂಬಿಕೆಯುಳ್ಳ ಒಂದೇ ಮನೆಯಂತಿರುವವರಿಗೆ ನಮಗೆ ಅವಕಾಶ ದೊರೆತಂತೆ ಒಳ್ಳೆಯದನ್ನೇ ಮಾಡೋಣ' (ಗಲಾತ್ಯ 6:10) ಎಂಬುದರಲ್ಲಿಯೂ ಅರ್ಥವಿದೆ. ಈ ಪ್ರೀತಿಯು ನಮ್ಮ ವೈರಿಗಳನ್ನೂ ಒಳಗೊಂಡಿದೆ. ಈ ಪ್ರೀತಿಯು ನಮಗೆ ನಮ್ಮ ತಂದೆಯ ಬಗ್ಗೆ ಮತ್ತು ಆತನ ಗುಣಲಕ್ಷಣಗಳ ಸಿದ್ಧಾಂತದ ಬಗ್ಗೆ

ಮತ್ತು ನಮ್ಮ ಸಹೋದರರುಗಳ ಬಗ್ಗೆ ಇರುವ ಪ್ರೀತಿಯನ್ನಾಗಲೀ ರದ್ದುಪಡಿಸುವುದಿಲ್ಲ ಅಥವಾ ಅದನ್ನು ಕುಗ್ಗಿಸುವುದಿಲ್ಲ. ಆದರೆ ಅವುಗಳನ್ನು ತೀವ್ರಗೊಳಿಸುತ್ತದೆ. ಈ ತೀವ್ರಗೊಳಿಸುವಿಕೆಯಲ್ಲಿ ಅದು ನಮ್ಮನ್ನು ನೋವಿನಿಂದ ಶ್ರಮಪಟ್ಟು ನರಳುತ್ತಿರುವ ಮತ್ತು ದೇವ ಪುತ್ರರ ಪ್ರಕಟನೆಗಾಗಿ ಕಾಯುತ್ತಿರುವ ಕನಿಕರ ಯೋಗ್ಯ ಬಡ ಜನರ ಬಗ್ಗೆ ಔದಾರ್ಯ ಮತ್ತು ಅನುಕುಂಪಗಳ ಪ್ರೀತಿಗೆ ನಮ್ಮನ್ನು ಸೇರಿಸುತ್ತದೆ. " ನಿಮ್ಮ ವೈರಿಗಳನ್ನು ಪ್ರೀತಿಸಿರಿ, ನಿಮ್ಮನ್ನು ಹಿಂಸೆಪಡಿಸುವವರಿಗೆ, ದ್ವೇಷಿಸುವವರಿಗೆ ಒಳ್ಳೆಯದನ್ನೇ ಮಾಡಿರಿ" ಎಂಬುದು ನಮ್ಮ ಒಡೆಯನ ಅಪ್ಪಣೆಯಾಗಿದೆ– ವೈರಿಗಳನ್ನು ಸಹಾ ಪ್ರೀತಿಸುವುದು – ನಾವು ನಮ್ಮ ಕರ್ತನ ಅನುಯಾಯಿಗಳಾಗಿದ್ದು ಆತನು ನಮಗಾಗಿ ಸಿದ್ಧಪಡಿಸಿದ ಈ ಗುರುತನ್ನು ತಲುಪಿದ್ದೇವೆಯೋ ಎಂಬುದರ ಬಗ್ಗೆ ಒಂದು ಕ್ಷಣಕಾಲ ಯೋಚಿಸೋಣ. ನಾವು ಈ ಸ್ಥಿತಿಯನ್ನು ತಲಪುವವರೆಗೆ ದೇವರ ಪ್ರಿಯಕುಮಾರನ ಸಾರೂಪ್ಯದವರಾಗಲು ಸಾಧ್ಯವೇ ಇಲ್ಲ.

ನಾವು ನೂತನ ಸೃಷ್ಟಿಯಲ್ಲಿ ಸ್ಥಾನಗಳಿಸಲು ಅರ್ಹರಾಗುವಂತೆ ಈ ಪ್ರೀತಿಯ ತುತ್ತ ತುದಿಯನ್ನು ತಲುಪಲೇಬೇಕು. ಕರ್ತನ ಅನುಯಾಯಿಗಳಲ್ಲಿ ಪ್ರತಿಯೊಬ್ಬರೂ ಮರಣದ ಕಡೇ ಉಸಿರು ಬಿಡುವಾಗ ಈ ಗುರುತಿಗೆ ತಲಪುತ್ತಾರೆಂದು ನಾವು ಭಾವಿಸಲಾಗದು. ಇದಕ್ಕೆ ವ್ಯತಿರಿಕ್ತವಾಗಿ, ನಾವು ನಮ್ಮ ಕ್ರಿಸ್ತೀಯ ಅನುಭವದಲ್ಲಿ ಎಷ್ಟು ಬೇಗ ಸಾಧ್ಯವೋ ಅಷ್ಟುಬೇಗ ಇದನ್ನು ತಲುಪಬೇಕು ಮತ್ತು ನಂತರದಲ್ಲಿ "ಮಾಡಬೇಕಾದುದೆಲ್ಲವನ್ನೂ ಮಾಡಿ ಜಯಶಾಲಿಗಳಾಗಿ ನಿಲ್ಲುವಂತೆ..." (ಎಫೆಸ 6:13) ಎಂಬ ಅಪೋಸ್ತಲನ ಮಾತುಗಳನ್ನು ನೆನಪಿಗೆ ತಂದುಕೊಳ್ಳಬೇಕು. ನಾವು ಈ ಗುರುತನ್ನು ತಲುಪಿದ ಮೇಲೆ ಪ್ರೀತಿಯ ಪರೀಕ್ಷೆಗಳ ಅವಶ್ಯಕತೆಯಿದೆ. ನಾವು ಈ ಗುರುತಿನಲ್ಲಿರುವಾಗ, ನಮ್ಮ ಜೀವನವನ್ನು ಆ ಗುರುತಿನಲ್ಲಿ ಅಥವಾ ಮಟ್ಟದಲ್ಲಿ ಇಟ್ಟುಕೊಳ್ಳಲು ಹೆಣಗುತ್ತಿರುವಾಗ ನಮ್ಮ ಅಭ್ಯಾಸಗಳು ನಮ್ಮ ಗುಣಲಕ್ಷಣಗಳನ್ನು ಬಹಳಷ್ಟು ಬಲಪಡಿಸುವುದಾಗಿವೆ. ಇದರಲ್ಲಿ ವಿಶೇಷವಾಗಿ, ನಮ್ಮ ಅನುಭವಗಳು ಕರ್ತನ ಅನುಭವಗಳೊಂದಿಗೆ ಅನುರೂಪವಾಗಿರುತ್ತವೆ; ಆದರೆ ಆತನು ಆ ಗುರುತನ್ನು ಮುಟ್ಟಲು ಓಡ ಬೇಕಾಗಿರಲಿಲ್ಲ. ಆತನು ಆ ಗುರುತಿನಲ್ಲಿ ಅದಕ್ಕೆ ಬೆನ್ನು ಹಾಕದೆ, ಲೋಕದ ವಿವಿಧ ಅಕ್ರಮಣಗಳಿಗೆ, ಕೆಡಕುಗಳಿಗೆ ಸೋತು ಹೋಗದಂತೆ ಒಳ್ಳೆಯ ಹೋರಾಟವನ್ನು ಮಾಡಬೇಕಾಗಿತ್ತು. "ನಾನು ಈ ಗುರುತಿಗೆ ಓಡುತ್ತೇನೆ" – ನಾನು ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ ಎಂದು ಅಪೋಸ್ತಲನು ಹೇಳುವಂತೆ ನಾವು ಪ್ರತಿಯೊಬ್ಬರೂ ಆ ಗುರಿಯನ್ನು ತಲುಪಲಿಕ್ಕೆ ಓಡಬೇಕು ಮತ್ತು ದೇವರು ನಮಗೆ ಬರಮಾಡುವ ಎಲ್ಲಾ ಪರೀಕ್ಷೆಗಳಲ್ಲಿ ನಾವು ನಮ್ಮ ಶಕ್ತಿಯಿಂದಲ್ಲ, ನಮ್ಮ ವಿಮೋಚಕನ ಸಹಾಯದ ಶಕ್ತಿಯಿಂದಲೇ ಜಯಶಾಲಿಗಳಾಗಿದ್ದೇವೆಂಬ ಹೇಳಿಕೆಯನ್ನು ಆತನಿಗೆ ನೀಡಬೇಕು.

ತಂದೆಯ ಬಗ್ಗೆ ನಮಗಿರುವ ಸಮರ್ಪಕ ಪ್ರೀತಿಯಿಂದ ನಮ್ಮನ್ನು ಅಗಲಿಸುವ ಸಲುವಾಗಿಯೇ ಲೋಕದ ಆಕ್ರಮಣಗಳು ನಮ್ಮ ಮೇಲೆ ಎರಗಿ ಬರುತ್ತವೆ. ಅವು ನಮ್ಮನ್ನು ಆತನಿಗೆ ಸಲ್ಲಬೇಕಾದ ಗೌರವವನ್ನು ಪೂರ್ಣವಾದ ರೀತಿಯಲ್ಲಿ ಸಲ್ಲಿಸದಂತೆ ನಮ್ಮನ್ನು ಪ್ರೇರೇಪಿಸುತ್ತವೆ. ಸಹೋದರರ ಬಗ್ಗೆಯೂ ನಮಗೆ ದುಷ್ಪೇರಣೆಗಳು ಉಂಟಾಗುತ್ತವೆ. ನಾವು ನಮ್ಮ ಸಹೋದರರ ಅಸಂಖ್ಯಾತ ತಪ್ಪುಗಳನ್ನು ಮುಚ್ಚಿಹಾಕಲು ಪ್ರೀತಿಗೆ ಅನುಮತಿ ನೀಡದಂತೆ, ಯಾರೊಂದಿಗೆ ನಾವು ಪ್ರೀತಿಸುವುದನ್ನು ಮತ್ತು ಮೆಚ್ಚುವುದನ್ನು ಕಲಿತೆವೋ ಮತ್ತು ಅವರ ಬಲಹೀನತೆಗಳಿಗಾಗಿ ಸಹಾನುಭೂತಿಯುಳ್ಳವರಾದೆವೋ ಅಂಥವರು ನಮ್ಮನ್ನು ಕೆರಳಿಸುತ್ತಾರೆಂಬ ತಪ್ಪು ಸಲಹೆಗಳು ಉಂಟಾಗುತ್ತವೆ. ನಮ್ಮ ಶತ್ರುಗಳ ವಿರೋಧವಾಗಿಯೂ ನಾವು ಅವರನ್ನು ಪ್ರೀತಿಸುವುದನ್ನು ಕಲಿತ ಮೇಲೆ ಹತ್ತಿಕೊಳ್ಳುವ ಪಾಪಗಳು ನಮ್ಮ ಮೇಲೆ ಎರಗಿ ಬರುತ್ತವೆ. ಕೆಲವೊಂದು ಅಸಾಧಾರಣ ಪ್ರಕರಣಗಳಿರುವುದರಿಂದ ಅವರ ಬಗ್ಗೆ ನಮ್ಮ ಉದಾರತೆಗೆ ಒಂದು ಮಿತಿಯಿರಬೇಕೆಂಬ ಸಲಹೆ ಯನ್ನುಂಟುಮಾಡುತ್ತದೆ. ಈ ಪ್ರಲೋಭನೆಗಳ ನಡುವೆಯೂ ನಾವು ನಮ್ಮ ಗುರುತಿನ ಮೇಲೆ ದೃಢವಾಗಿರುವುದಾದಲ್ಲಿ, ನಾವೀಗಾಗಲೇ ಪಡೆದುಕೊಂಡಿರುವ ನಮ್ಮ ಸ್ಥಾನವನ್ನು ಕಾಪಾಡಿಕೊಳ್ಳಲು ಶ್ರಮಿಸುವದಾದರೆ ನಾವು ಆಶೀರ್ವಾದ ಹೊಂದುವವರಾಗುತ್ತೇವೆ, ನಮ್ಮ ನಂಬಿಕೆಯ ಒಳ್ಳೆಯ ಹೋರಾಟವನ್ನು ಮಾಡುವವರಾಗುತ್ತೇವೆ ಮತ್ತು ಯೇಸುವಿನ ಮೂಲಕ ನಮಗಾಗಿ ಎಣಿಸಲ್ಪಟ್ಟಿರುವ ನಿತ್ಯಜೀವವನ್ನು ಭದ್ರವಾಗಿ ಹಿಡಿದುಕೊಳ್ಳಲು ಶಕ್ತರಾಗುತ್ತೇವೆ.

## " ದೇವರ ನಿಮ್ಮ ಆಯ್ಕೆಯನ್ನು ಅರಿತುಕೊಳ್ಳುವುದು"

## "Knowing Your Election of God"

"ದೇವರು ಪ್ರೀತಿಸಿದ ಸಹೋದರರೇ, ಆತನು ನಿಮ್ಮನ್ನು ಆದುಕೊಂಡನೆಂಬುದನ್ನೂ ನಾವು ಸಾರಿದ ಸುವಾರ್ತೆಯು ನಿಮ್ಮಲ್ಲಿ ಬರೀ ಮಾತಾಗಿ ಬಾರದೆ ಶಕ್ತಿಯೊಡನೆಯೂ ಪವಿತ್ರಾತ್ಮದೊಡನೆಯೂ ಬಹು ನಿಶ್ಚಯದೊಡನೆಯೂ ಬಂತೆಂಬುದನ್ನೂ ಬಲ್ಲೆವು" (1ಥೆಸ.1: 4,5)

ಸಂಜ್ಞೆಗಳು (ಸೂಚನೆಗಳು) ಏನನ್ನು ಒಳಗೊಂಡಿರುತ್ತ ವೆಂಬುದನ್ನು, ಅಂದರೆ ಅವು ನಾವು ದೇವರ ಮಕ್ಕಳಾಗಿರುವುದಕ್ಕೆ ಸಾಕ್ಷಿ, ನಾವು ಪವಿತ್ರಾತ್ಮನನ್ನು ಪಡೆದಿರುವುದು, ನಮ್ಮಲ್ಲಿ ಸ್ಫೂರ್ತಿ ತುಂಬಿರುವುದು ಇವುಗಳನ್ನು ಹೊಂದಿರುವ ಬಗ್ಗೆ ನಾವು ಬೇರೆಡೆಯಲ್ಲಿ ಸೂಚಿಸಿದ್ದೇವೆ* (ಗ್ರಂಥಶ್ರೇಣಿ–5, 9ನೇ ಅಧ್ಯಾಯ ಓದಿರಿ) ನಾವೀಗ ಅದನ್ನು ಇಲ್ಲಿ ಪುನಃ ಹೇಳುವುದಿಲ್ಲ. ಆದರೆ ಸಾಮಾನ್ಯ ರೀತಿಯಲ್ಲಿ ಯಾರು ಈ ಆಯ್ಕೆಯಲ್ಲಿ ಭಾಗವಹಿಸುತ್ತಾರೋ ಅವರು ಇದನ್ನು ತಮ್ಮಷ್ಟಕ್ಕೆ ಮಾತ್ರವಲ್ಲ ಬಹಳ ಮುಂಚೆಯೇ ಅವರು ಸಂಬಂಧ ಹೊಂದಿರುವ "ಸಹೋದರರಿಂದಲೂ" ಗ್ರಹಿಸಲ್ಪಡುವರು ಎಂಬ ಸತ್ಯಕ್ಕೆ ಗಮನ ಸೆಳೆಯುತ್ತೇವೆ. ಈ ಆಯ್ಕೆಯಲ್ಲಿ ಶಕ್ತಿಯಿದೆ ಹಾಗೂ ಸಂದೇಶವಿದೆ. ಈ ಆಯ್ಕೆಯ ಸಂದೇಶವು ಅಥವಾ ಕರೆಯು ಅಥವಾ "ವಾಕ್ಯವು" ಆಯ್ದ ವರ್ಗಕ್ಕೆ ಶುಭವಾರ್ತೆ ಅಥವಾ ಒಳ್ಳೆಯ ಸಮಾಚಾರ ಮಾತ್ರವಲ್ಲ, ಇದು ಅವರಿಗೆ ಅದಕ್ಕಿಂತಲೂ ಹೆಚ್ಚಿನದಾಗಿದೆ: ದೇವರ ಚಿತ್ತವನ್ನು ನೆರವೇರಿಸಲು ಮತ್ತು ಆತನನ್ನು ಸಂತೋಷ ಪಡಿಸಲು ಅದು ದೇವರ ಶಕ್ತಿಯಾಗಿ ಅವರಲ್ಲಿ ಕಾರ್ಯವೆಸಗುತ್ತದೆ. ಅದು ಆಯಲ್ಪಟ್ಟವರಿಗೆ ಪವಿತ್ರಾತ್ಮನನ್ನು

ಮತ್ತು ಬಹಳಷ್ಟು ಭರವಸೆಗಳನ್ನು ತರುವಂಥಾದ್ದಾಗಿದೆ. ಇದಕ್ಕೆ ಬದಲಾಗಿ ಅವರುಗಳೂ ಸಹಾ ಕರ್ತನ ವಾಕ್ಯಕ್ಕೆ ಎಷ್ಟೇ ಬೆಲೆತೆತ್ತಾದರೂ ಧ್ವನಿಹೊರಪಡಿಸಲು ಸಿದ್ಧರಾಗುತ್ತಾರೆ.

ಈ ನೂತನ ಸೃಷ್ಟಿಗೆ ಆಯ್ಕೆಯಾದವರ ಬಗ್ಗೆ ಕೊಲೊಸ್ಸೆಯವರಿಗೆ ಅಪೋಸ್ತಲನು ಬರೆಯುವುದೇನೆಂದರೆ – ಇಂಥವರು ಹಳೆಯ ಸ್ವಭಾವವನ್ನು ಅದರ ಕೃತ್ಯಗಳನ್ನು ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿಕೊಳ್ಳಬೇಕು. ಇದು ಆಯ್ಕೆಗೊಂಡ ಸದಸ್ಯರನ್ನು ಅವರ ರಾಷ್ಟ್ರೀಯತೆ ಅಥವಾ ವರ್ಗಕ್ಕೆ ಅನುಸಾರವಾಗಿ ಗುರುತಿಸದೆ ಎಲ್ಲರನ್ನು ಕ್ರಿಸ್ತನಲ್ಲಿ ಗುರುತಿಸುತ್ತದೆ ಮತ್ತು ಅವರನ್ನು ಮಾತ್ರವೇ ನೂತನ ಸೃಷ್ಟಿಗೆ ಆಯ್ಕೆಗೊಂಡವರೆಂದು ಪರಿಗಣಿಸುತ್ತದೆ. "ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಆಗಿರುವುದರಿಂದ ಕನಿಕರ, ದಯೆ, ದೀನಭಾವ, ಸಾತ್ವಿಕತ್ವ, ಧೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ. ಮತ್ತೊಬ್ಬನ ಮೇಲೆ ತಪ್ಪು ಹೊರಿಸುವುದಕ್ಕೆ ಕಾರಣವಿದ್ದರೂ ತಪ್ಪು ಹೊರಿಸದೆ ಒಬ್ಬರನೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ. ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನೂ ಸಂಪೂರ್ಣ ಮಾಡುವ ಬಂಧವಾಗಿದೆ " (ಕೊಲೊಸ್ಸೆ 3:12–14) ಎಂದು ಆತನು ಹೇಳುತ್ತಾನೆ.

ನಮ್ಮ ಕರ್ತನು ಆಯ್ದ ಸಭೆಯ ಬಗ್ಗೆ "ವಿವಿಧ ಪರೀಕ್ಷೆಗಳು ಮತ್ತು ಶೋಧನೆಗಳು ಅವರಿಗೆ ಬರಲೇಬೇಕು ಮತ್ತು ಇವುಗಳು ಸುವಾರ್ತಾಯುಗದ ಅಂತ್ಯದಲ್ಲಿ ಹೆಚ್ಚಾಗುತ್ತವೆ. ಸುಳ್ಳು ಕ್ರಿಸ್ತರು, ಸುಳ್ಳು ಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದುಕೊಂಡ ವರನ್ನೂ ಸಹಾ ಮೋಸಗೊಳಿಸುವುದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ, ಅಧ್ಭುತಕಾರ್ಯಗಳನ್ನೂ ಮಾಡಿತೋರಿಸುವರು" (ಮತ್ತಾ. 24:24) ಎಂದು ಒಟ್ಟಾರೆಯಾಗಿ ಹೇಳುವವನಾಗಿದ್ದಾನೆ. (4ನೇ ಗ್ರಂಥಶ್ರೇಣಿ 12ನೇ ಅಧ್ಯಾಯ)

ಇದರಲ್ಲಿ ಒಂದು ರೀತಿಯ ಪ್ರೋತ್ಸಾಹವುಂಟು. ವಾಸ್ತವಿಕವಾಗಿ ಆಯ್ಕೆಯಾದವರು ಸಹಾ ಈ ಕೆಟ್ಟ ಕಾಲದಲ್ಲಿ ಬರುವ ವಿರೋಧಿಯ ಮಾರ್ಮಿಕ ಸಂಗತಿಯನ್ನು ಎದುರಿಸುವ ಉತ್ತಮ ಮಾನಸಿಕ ಸಾಮರ್ಥ್ಯವನ್ನು ಹೊಂದಿರುವರು ಎಂದಾಗಲೀ, ಮಾತ್ರವಲ್ಲದೆ ಅವರುಗಳು ಸಮರ್ಪಕತೆಯನ್ನು ತಮ್ಮ ಮಣ್ಣಿನ ಘಟದಲ್ಲಿರುವಾಗ ತಮ್ಮ ಹಿಡಿತದಲ್ಲಿರಿಸಿಕೊಂಡಿದ್ದು ಯಾವ ತಪ್ಪನ್ನಾಗಲೀ ಮಾಡಲಾರರು ಎಂಬ ಗ್ರಹಿಕೆಯನ್ನಾಗಲೀ ಉಂಟುಮಾಡುವುದಿಲ್ಲ. ಆದರೆ, ನಿಜವಾಗಿ ಹೇಳುವುದಾದರೆ ಯಾರು ಕ್ರಿಸ್ತನಲ್ಲಿ ನೆಲೆಗೊಂಡಿರುತ್ತಾರೋ ಅವರಿಗೆ ಬೇಕಾದಷ್ಟು ಕೃಪೆಯೂ, ಬೇಕಾದಷ್ಟು ವಿವೇಕವೂ, ಬೇಕಾದಷ್ಟು ನೆರವೂ ಅವರ ಅಗತ್ಯದ ಸಮಯದಲ್ಲಿ ದೊರೆಯುತ್ತದೆ. ಸುವಾರ್ತೆಯಲ್ಲಿ ನಮ್ಮ ಮುಂದಿಟ್ಟಿರುವ ನಿರೀಕ್ಷೆಯ ಆಶ್ರಯಕ್ಕಾಗಿ ಓಡುತ್ತಿರುವವರಿಗೆ ಇದರಲ್ಲಿ ಎಂತಹ ಸಮಾಧಾನ ದೊರೆಯುತ್ತದಲ್ಲವೇ!, ನಮ್ಮ ಜೀವಾಧಾರವು ಕ್ರಿಸ್ತನಲ್ಲಿ ಬಚ್ಚಿಡಲ್ಪಟ್ಟಿದೆ ಎಂಬ ಭರವಸೆಯನ್ನು ಇದು ನೀಡುತ್ತದಲ್ಲವೆ! ಇಂತಹ ಪೂರ್ವನಿರ್ಣಯದ ಬರಹವು ನಮ್ಮನ್ನು ಬಲಪಡಿಸುತ್ತದೆ ಮತ್ತು ಅಪೋಸ್ತಲನು ಹೇಳುವಂತೆ "ಆತನು ನಮ್ಮನ್ನು ಭೂಮಿಯ ಅಸ್ತಿವಾರವು ಹಾಕಲ್ಪಡುವುದಕ್ಕಿಂತಲೂ ಮುಂಚಿತವಾಗಿ ನಾವು ಆತನ ಮುಂದೆ ಪರಿಶುದ್ಧರೂ ಅಪರಾಧವಿಲ್ಲದವರೂ ಆಗಿ ಅಂತಿಮವಾಗಿ ಕಾಣಿಸಿಕೊಳ್ಳುವಂತೆ ಪ್ರೀತಿಯಿಂದ ಆರಿಸಿಕೊಂಡಿದ್ದಾನೆ" ಎಂಬ ಮಾತುಗಳು ನಮ್ಮನ್ನು ಸಮಾಧಾನಪಡಿಸುತ್ತವೆ. ಇವುಗಳು ನಮ್ಮನ್ನು ಆತನ ಸುಚಿತ್ತಕ್ಕನುಸಾರವಾಗಿ ಕ್ರಿಸ್ತನಲ್ಲಿ ದೇವರ ದತ್ತು ಮಕ್ಕಳನ್ನಾಗಿ ಮಾಡುತ್ತದೆ. "ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನೆಂದರೆ, ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸ ಬೇಕೆಂಬುದೇ. ಕ್ರಿಸ್ತನಲ್ಲಿಯೇ ಸಮಸ್ತವೂ ಒಂದಾಗುವುದು. ಇದಲ್ಲದೆಯೇ ಆತನಲ್ಲಿ ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾಗಿದ್ದ ಕ್ರಿಸ್ತನನ್ನು ಎದುರುನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ನಡೆಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು" (ಎಫೆಸ 1:4–12).

## "ಬಹಳ ಸಂಕಟಗಳ ಮೂಲಕ ನೀವು ದೇವರ ರಾಜ್ಯವನ್ನು ಪ್ರವೇಶಿಸುವಿರಿ"

### "Through much tribulation shall ye enter the Kingdom"

ನೂತನ ಸೃಷ್ಟಿಗೆ ವಾಸ್ತವಿಕವಾಗಿ ಆಯ್ಕೆಯಾದವರ ಕರೆಗೆ ದೇವರು ಹೊಂದಿಸಿರುವ ಪ್ರಯತ್ನದ ಅಗತ್ಯತೆ ಮತ್ತು ಗುಣನಡತೆಯನ್ನು ಉತ್ತಮಪಡಿಸಿಕೊಳ್ಳುವ ಅದರ ಪ್ರಕೃತಿ ಸಮಾನಾಂತರಗಳಿಲ್ಲದೇ ಇಲ್ಲ. ಇದಕ್ಕೆ ಉದಾಹರಣೆಯಾಗಿ :–

"ಒಬ್ಬ ವ್ಯಕ್ತಿ ತನ್ನ ಕೀಟ ಸಂಗ್ರಹಕ್ಕೆ ಒಂದು ಚಕ್ರವರ್ತಿ ಪತಂಗವನ್ನು ಸೇರಿಸಿಕೊಳ್ಳುವ ಆಶೆಯುಳ್ಳವನಾಗಿದ್ದನು. ಅದೃಷ್ಟವಶಾತ್ ಆತನಿಗೆ ಆ ಹುಳದ ಗೂಡೊಂದು (cocoon) ದೊರೆಯಿತು. ಅದನ್ನು ಆತನು ತನ್ನ ಪುಸ್ತಕಾಲಯದಲ್ಲಿ ಚಳಿಗಾಲವೆಲ್ಲಾ ನೇತುಹಾಕಿದನು. ವಸಂತ ಕಾಲದಲ್ಲಿ ಅದರಲ್ಲಿಂದ ಪತಂಗವು ಹೊರಬರಲು ಪ್ರಯತ್ನಿಸುವುದನ್ನು ಆತನು ಕಂಡನು. ಅದರ ತೂತು ಬಹಳ ಸಣ್ಣದಾಗಿದ್ದು ಪತಂಗವು ಹೊರಬರಲು ಬಹಳ ಪ್ರಯಾಸಪಡುತ್ತಿತ್ತು. ಅದನ್ನು ಕಂಡ ಆತನು ಆ ಒರಟಾದ ನಾರಿನ ಮೇಲೆ ತನ್ನ ಕತ್ತರಿಯ ಸಹಾಯದಿಂದ ಒಂದು ರಂಧ್ರವನ್ನು ಮಾಡಿದನು. ಆ ಪತಂಗವೇನೋ ಹೊರಬಂತು ಆದರೆ ಅದು ಹಾರಲೇ ಇಲ್ಲ!. ಅದರ ರೆಕ್ಕೆಗಳಿಗೆ ಶಕ್ತಿ ಬರಬೇಕಾದ ದ್ರವವು ದೇಹದಿಂದ ಹರಿದು ಬರುವಲ್ಲಿ ಅದಕ್ಕೆ ಪ್ರಯಾಸಪಡುವ ಅಗತ್ಯವಿತ್ತೆಂದು ನಂತರ ಯಾರೋ ಆತನಿಗೆ ಹೇಳಿದರು. ಅದನ್ನು ಈ ಪ್ರಯಾಸದಿಂದ ತಪ್ಪಿಸಿದ್ದು ಒಂದು ರೀತಿಯಲ್ಲಿ ಕರುಣೆಯಿಂದ ಕೂಡಿದ ತಪ್ಪಾಗಿತ್ತು. ಅದರ ಪ್ರಯತ್ನವು ಅದರ ರಕ್ಷಣೆಯ ಸಲುವಾಗಿಯೇ ಇತ್ತು. ಇದರ ನೀತಿಯು ಸ್ಪಷ್ಟವಾಗಿದೆ. ಲೌಕಿಕ ಒಳಿತಿಗಾಗಿ ಮಾನವರು ಪಡುವ ಪ್ರಯಾಸವು ಗುಣನಡತೆಗಳನ್ನು ಉತ್ತಮಗೊಳಿಸುತ್ತದೆ. ಅವುಗಳಿಲ್ಲದೆ

ಉತ್ತಮಗೊಳಿಸಲು ಸಾಧ್ಯವಿಲ್ಲ. ಆತ್ಮೀಕ ಹೆಚ್ಚಳಕ್ಕಾಗಿ ಪ್ರಯಾಸಪಡುವುದು ಅಗತ್ಯ."

ದೈವೋಕ್ತಿಗಳು ನಮಗೆ ಸ್ಪಷ್ಟವಾಗಿ "ಉಚಿತವಾದ ಕೃಪೆ"ಯ ಬಗ್ಗೆ ಬೋಧಿಸುವುದಾಗಿದೆ. (Vol.1 page96) ಆಯ್ಕೆಗೊಂಡವರು ಮಹಿಮೆಹೊಂದಿದ ಕೂಡಲೆ ಇದಕ್ಕೆ ಮಾರ್ಗ ತೋರಿಬರುತ್ತದೆ. ಧರ್ಮಯುಗದ ಕಾಲದಲ್ಲಿ ಇದು (ಅಬ್ರಹಾಮನ ಸಂತತಿಯು) ಲೋಕದ ಎಲ್ಲಾ ಕುಟುಂಬಗಳಿಗೆ ಸಮರ್ಪಕವಾದ ಗುಣನಡತೆಗಳನ್ನು ಉತ್ತಮ ಪಡಿಸಿಕೊಳ್ಳುವ, ಪುನರ್‌ವಶ ಹೊಂದಿಕೊಳ್ಳುವ ಮತ್ತು ನಿತ್ಯಜೀವವನ್ನು ಪಡೆದುಕೊಳ್ಳುವ ಎಲ್ಲಾ ಅವಕಾಶಗಳುಳ್ಳ ಆಶೀರ್ವಾದಗಳನ್ನು ಉಂಟುಮಾಡುವುದು. ■

*****

## ನಿರ್ದೋಷಿ

– ಯೂದ 24 –

*ಆತನ ಮಹಿಮಾಯುತ ಸನ್ನಿಧಾನದಲ್ಲಿ ನಿರ್ದೋಷಿ*
*ಆತ್ಮವೆಲ್ಲಾ ಒಳಗೊಳಗೆ ಕಲಕುತಿದೆ*
*ಆ ವಾಕ್ಯದ ಬೆರಗಿಗೆ ನನ್ನ ಹೃದಯವೆಲ್ಲಾ*
*ಆಕಾಶವನ್ನು ಮುಟ್ಟುವಂತೆ*
*ನಿರ್ದೋಷಿಯೆಂದು ಸಾದರಪಡಿಸುವೆಯಾ?*
*ಕರ್ತನೇ ನನ್ನ ಅನುಮಾನಕ್ಕೆ ಕ್ಷಮೆಇರಲಿ*
*ನಾನು ಮೊರೆ ಇಟ್ಟೆ;*
*ನೀನೊಮ್ಮೆ, ಪ್ರಿಯನ ಅನುಮಾನಕ್ಕೆ*
*ನಿನ್ನ ಕೈಗಳನ್ನು, ಪಾದವನ್ನು,*
*ಬಗೆದ ಪಕ್ಕೆಯನ್ನು ತೋರಿದೆ.*
*ಓ ನನಗಾದರೋ ಯಾವುದೋ*
*ಟಣಿಯನ್ನು ಕಟ್ಟು,*
*ಬಂಗಾರದಿಂದ ಪ್ರಕಾಶಿಸುವ*
*ಗೋಳದ ಮೇಲೊಂದು ಗೋಳದೊಂದಿಗೆ;*
*ಆಗ ನನ್ನ ನಿರೀಕ್ಷೆಯ ಈ ಆಲೋಚನೆಯನ್ನು*
*ಸುತ್ತಿಕೊಂಡು ನಂಬಿಕೆಯು*
*ಉತ್ತಮ ಸ್ಥಿತಿಯನ್ನು ತಲುಪಲಿ.*
*ಈ ರೀತಿಯಾಗಿ ಪ್ರಾರ್ಥಿಸುತ್ತಿರಲು, ನನ್ನ*
*ಟಣಿಯು ಉತ್ತಮ ದಿನವನ್ನು ತಲುಪಿತು,*
*ಅದರಿಂದ ಯಾರೋ ಹಾದಿಯಲ್ಲಿ*
*ಉದುರಿಸಿದ ಮುಗ್ಧ ಕಥೆಯಿಂದ ಬೆಳೆಯಿತು*
*ಒಮ್ಮೆ ಒಬ್ಬ ರಾಣಿಯು ಒಂದು*
*ಕಥೆಯನ್ನು ಹಬ್ಬಿಸಿದಳು*
*ಏನೋ ಹುಡುಕುವವಳಾಗಿ ಹೊಸದನ್ನು*
*ಗಿರಣಿಯಲ್ಲಿ ಕಂಡಳು*
*ಎಲ್ಲಿ, ಅಪೂರ್ವವಾಗಿ, ನಿಷ್ಪ್ರಯೋಜಕವಾದುದಲ್ಲ*
*ಹರಕು ಚಿಂದಿಗಳು ಅವಳ ಅನಿಸಿಕೆಗೆ*
*ಪ್ರತಿ ಅರ್ಪಿಸಿದವು*
*ಹರಕು ಅದೇ ಗಟಾರದಿಂದ*
*ಹರಕು ಎಲ್ಲಾ ಆಕಾರದಲ್ಲೂ, ರಂಗಿನಲ್ಲೂ*
*ತಲೆಯಿಂದ ಕಾಲಿನವರೆಗೂ ಹರಕು ಚಿಂದಿಯಿಂದ*
*ತುಂಬಿದ ಕಂದಮ್ಮಗಳು*
*ಅದರಿಂದ ಆರಿಸಿಕೊಳ್ಳು ತ್ತಿದ್ದವು.*
*ಇಂಥಹ ಹೀನ ಪರಿಸ್ಥಿತಿಯಲ್ಲಿ ಏನು*
*ಮಾಡಲು ಸಾಧ್ಯ? ಎಂಬ ಆತಂಕದ*
*ಪ್ರಶ್ನೆ ಅವಳಲ್ಲಿ ಉಂಟಾಯಿತು*
*ಅವರನ್ನು ಶುದ್ಧವಾದ ಬಿಳುಪಿಗೆ*
*ರೂಪಿಸು ಎಂದು ಯಜಮಾನನು*
*ಮಂದಹಾಸದಿಂದ ನುಡಿದನು*

*ಬಿಳುಪೇ? ಅರಸಿಯು ಹೇಳಿದಳು*
*ಅದರ ಯಜಮಾನನೊಂದಿಗೆ*
*ಈ ಕೆಂಪಾದ– ಕಡು ಕೆಂಪಾದ ರಂಗು*
*ನಿನ್ನ ಕಣ್ಣಿಗೆ ಯೋಗ್ಯವಾದ*
*ಬಿಳುಪಾಗಲು ಸಾಧ್ಯವಾಗದು ಎಂದಿಗೂ*
*ಈ ಬಣ್ಣಗಳೆಲ್ಲವನ್ನೂ ತೆಗೆಯಲು*
*ಕಠಿಣವೇ ಹೌದು, ಎಂದನು*
*ಆದರೆ ನನಗೆ ಅದನ್ನು ಹಿಮದ*
*ಚುಕ್ಕೆಗಳು ಬೀಳುವಾಗ ಇರುವ*
*ಬಿಳುಪಿನಂತೆ ಮಾಡಲು ಸಾಮರ್ಥ್ಯವಿದೆ*
*ಈ ಮಾತುಗಳು ನನ್ನ ಹೃದಯದಿಂದ*
*ಒಳಗೂ ಹೊರಗೂ ಪ್ರತಿಧ್ವನಿಯಾಗಿ ಮಿಡಿಯಿತು*
*ಕೆಂಪು–ಕಡುಕೆಂಪು– ಹಿಮದಂತೆ ಬೆಳ್ಳ ಗೆ*
*ಈ ಮನುಷ್ಯನಾ–ಹಾಗಿದ್ದರೆ ದೇವರಿಗೆ ಸಾಧ್ಯವಿಲ್ಲವೋ?*
*ಅಂದಿನಿಂದ ಒಂದು ದಿನದ ನಂತರ*
*(ಕಥೆಯು ಇಷ್ಟಬಂದಂತೆ ಮುಂದುವರೆಯಿತು)*
*ಗಿರಣಿಯ ಮಾಲೀಕನಿಂದ ಅವಳಿಗೊಂದು*
*ಉಡುಗೊರೆ ಬಂದಿತು*
*ಪದರಿನ ಮೇಲೆ ಪದರು ಸೊಗಸಾಗಿ*
*ನೇಯಿಗೆ ಆದ ಶುದ್ಧವಾದ ಬಿಳಿಯ*
*ಕಾಗದ ಪ್ರತಿ ಹಾಳೆಯ ಅಕ್ಷರಗಳಲ್ಲೂ*
*ಆಕೆಯ ಹೆಸರು ಬಂಗಾರದ ಬೆಳಕಿನಲ್ಲಿ ಮಿನುಗಿತು*
*ಯಜಮಾನನು ಬರೆದ ಅಮೂಲ್ಯವಾದ ಪಾಠ*
*ನನ್ನ ಗಿರಣಿ ನನಗೆ ಕೊಟ್ಟಿದೆ*
*ನಮ್ಮ ಕ್ರಿಸ್ತನು ಹೇಗೆ, ಹೀನವಾದ ಹೃದಯಗಳನ್ನು*
*ಭೂಮಿಯಿಂದಲೂ, ಸಾಗರದಿಂದಲೂ*
*ಕೂಡಿಸಬಲ್ಲನು ಎಂದು ತೋರಿಸಿದನು*
*ಪರಲೋಕದ ಪರಿಶೋಧಕನು*
*ಕಡುಕೆಂಪನ್ನು ಬಿಳುಪಾಗಿಸಬಲ್ಲನು*
*ತನ್ನ ಹೆಸರನ್ನು ಒಂದೊಂದರಲ್ಲೂ ಒತ್ತಿ*
*ರಾಜನ ಆಸ್ಥಾನಕ್ಕೆ ಒಯ್ಯುವನು*
*ಎಂಥಹ ಆಶ್ಚರ್ಯಕರ ದೃಶ್ಯವು ನನ್ನನ್ನು ಆವರಿಸಿತು*
*ಪರಲೋಕದ ಬಾಗಿಲು ವಿಶಾಲವಾಗಿ ತೆರೆದುಕೊಂಡಿತು*
*ನಾನು ಕೂಡ, ನಿರ್ಮಲನಾಗಿ ನಿರ್ದೋಷಿಯಾಗಿ*
*ನನ್ನ ವಿಮೋಚಕನ ಬಳಿ ನಿಂತಿದ್ದೆನು*
*ಆತನ ಮಹಿಮಾ ಸನ್ನಿಧಿಯಲ್ಲಿ ನಿರ್ದೋಷಿ!*
*ಉಜ್ವಲ ಬೆಳಕಿನಲ್ಲಿ ನಿರ್ದೋಷಿ*
*ಕ್ರಿಸ್ತನ ಸ್ವಂತ ಪ್ರೀತಿ, ಗಾಂಭೀರ್ಯ ಸ್ನಿಗ್ಧತೆ*
*ನನ್ನ ಕಡುಗೆಂಪನ್ನು ಹಿಮದಂತೆ ಬಿಳುಪಾಗಿಸಿತು*